# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 25 ಬುಧವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 333 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ವರ್ಷಾಂತ್ಯಕ್ಕೆ ಮೋದಿ ಆಡಳಿತ ಅಂತ್ಯ



ನವದೆಹಲಿ, ಮಾ.24– ನರೇಂದ್ರ ಮೋದಿ ಅವರ ಆಡಳಿತವು ಈ ವರ್ಷಕ್ಕೆ ಅಂತ್ಯಗೊಳ್ಳಲಿದೆ. ಮುಂದಿನ ವರ್ಷದಿಂದ ಅವರು ಪ್ರಧಾನಿ ಹುದ್ದೆಯಲ್ಲಿರುವುದಿಲ್ಲ ಎಂದು ಎಎಪಿ ನಾಯಕ ಅರವಿಂದ ಕ್ರೇಜಿವಾಲ್ ಹೇಳಿದ್ದಾರೆ.

ಶಿವಸೇನಾ(ಯುಬಿಟಿ) ನಾಯಕ ಸಂಜಯ್ ರಾವತ್ ಅವರ ಅನ್‌ಲೈಕ್ಲಿ ಪ್ಯಾರಡೈಸ್ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅರವಿಂದ ಕ್ರೇಜಿವಾಲ್ ಅವರು ಭಾಗವಹಿಸಿದ್ದರು. ನನ್ನ ಮನಸ್ಸು ಮತ್ತು ರಾಜಕೀಯ ತಿಳುವಳಿಕೆಯ ಪ್ರಕಾರ ಇನ್ನೂ ಕೆಲವೇ ದಿನಗಳಲ್ಲಿ ಪ್ರಧಾನಿ ಮೋದಿ ■ 6ನೇ ಪುಟಕ್ಕೆ

## ಶೈಕ್ಷಣಿಕ ಸಂಸ್ಥೆಗಳ ಭೂಮಿ ರಕ್ಷಣೆ ವಿಧೇಯಕ ಅಂಗೀಕಾರ

### ಯಾವುದೇ ಚರ್ಚೆ ಇಲ್ಲದೆ ಅನುಮೋದನೆ

ಬೆಂಗಳೂರು, ಮಾ.24(ಕೆಎಂಶಿ)– ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ ಸಂರಕ್ಷಣೆಗೆ ಸಂಬಂಧಿಸಿದ 2026ನೇ



ಸಾಲಿನ ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕವನ್ನು ಚರ್ಚೆಯಿಲ್ಲದೆ ವಿಧಾನಸಭೆಯಲ್ಲಿಂದು ಅಂಗೀಕರಿಸಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ಮಂಡಿಸಿ, ವಿವರಣೆ ನೀಡಿ, ಸರ್ಕಾರಿ ಶಾಲೆಗೆ ಜಮೀನನ್ನು ದಾನ ಕೊಟ್ಟಿದ್ದಾರೆ. ಅಂತಹ ಜಮೀನು ಇಲಾಖೆ ಹೆಸರಿಗೆ ದಾಖಲಾಗಿರುವುದಿಲ್ಲ. ■ 6ನೇ ಪುಟಕ್ಕೆ

### ಸುಪ್ರೀಂಕೋರ್ಟ್‌ನಲ್ಲಿರುವ ಪ್ರಕರಣ ಇತ್ಯರ್ಥವಾಗುವವರೆಗೆ

## ಮೈಸೂರು ಅರಮನೆ, ಲ್ಯಾನ್ಸ್‌ಡೌನ್, ದೇವರಾಜ ಮಾರುಕಟ್ಟೆ

# ಕಟ್ಟಡ ನವೀಕರಣ ಇಲ್ಲ

### ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸ್ಪಷ್ಟನೆ

ಬೆಂಗಳೂರು, ಮಾ.24(ಕೆಎಂಶಿ)– ಸುಪ್ರೀಂಕೋರ್ಟ್‌ನಲ್ಲಿನ ಪ್ರಕರಣ ಇತ್ಯರ್ಥಗೊಳ್ಳುವವರೆಗೆ ಸಾಂಸ್ಕೃತಿಕ ನಗರದ ಮೈಸೂರು ಅರಮನೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಸೇರಿದಂತೆ ಪಾರಂಪರಿಕ ಕಟ್ಟಡಗಳ ನವೀಕರಣ ಸಾಧ್ಯವಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವಿಧಾನ ಪರಿಷತ್ತಿನಲ್ಲಿಂದು ಸ್ಪಷ್ಟಪಡಿಸಿದ್ದಾರೆ.

ಶಿಥಿಲಾವಸ್ಥೆಯಲ್ಲಿರುವ ಈ ಕಟ್ಟಡಗಳನ್ನು ನವೀಕರಿಸಿ ಜನರಿಗೆ ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಇಲಾಖೆಗೆ ಹಣವನ್ನೂ ಬಿಡುಗಡೆ ಮಾಡಿದ್ದಾರೆ.

ಕಟ್ಟಡದ ದುರಸ್ತಿ ಕಾಮಗಾರಿ ಕೈಗೊಳ್ಳಲು ಮುಂದಾದಾಗ, ಕೆಲವರು ನವೀಕರಣದಿಂದ ಪಾರಂಪರಿಕ ಕಟ್ಟಡಕ್ಕೆ ಧಕ್ಕೆ ಆಗುತ್ತದೆ ಎಂದು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಸರ್ಕಾರ ಏನೂ ಮಾಡಲಾಗದು. ತಡೆಯಾಜ್ಞೆ ತೆರವಿನ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಚಿವರು ತಿಳಿಸಿದರು.



ಬೈರತಿ ಸುರೇಶ್



ಕೆ.ಶಿವಕುಮಾರ್



ಪ್ರಶ್ನೋತ್ತರ ವೇಳೆಯಲ್ಲಿ ಕೆ. ಶಿವಕುಮಾರ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಆದರೆ, ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಕಟ್ಟಡಗಳ ದುರಸ್ತಿ ಕೈಗೊಳ್ಳುತ್ತೇವೆ ಎಂದರು.

ಮೈಸೂರು ಸೇರಿದಂತೆ ರಾಜ್ಯದಲ್ಲಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಇದರ ಸಂಪೂರ್ಣ ಹೊಣೆಗಾರಿಕೆ ಮತ್ತು ನಿರ್ವಹಣೆ ಅವರಿಗೇ ಸೇರುತ್ತದೆ.

ನಮ್ಮ ಇಲಾಖೆಯು ಪಾರಂಪರಿಕ ಕಟ್ಟಡಗಳ ಸಮಿತಿ ರಚನೆ ಮಾಡಿದೆ, ಯಾವುದೇ ಕಟ್ಟಡ ಶಿಥಿಲಾವಸ್ಥೆಗೆ ತಲುಪಿದೆ ಎಂದರೆ ಅಂತಹ ಕಟ್ಟಡಗಳ ನಿರ್ವಹಣೆ ಬಗ್ಗೆ ಸಮಿತಿ ಕ್ರಮ ಕೈಗೊಳ್ಳಲಿದ್ದು, ಅಗತ್ಯ ಹಣಕಾಸು ನೆರವು ಸರ್ಕಾರ ನೀಡಲಿದೆ ಎಂದರು.





### ಯುದ್ಧ ನಿಲ್ಲಿಸುವುದಾಗಿ ಒಂದೆಡೆ ಅಮೆರಿಕ ಹೇಳಿಕೆ

## ಇತ್ತ ಇರಾನ್‌ನ 50 ಸ್ಥಳಗಳ ಮೇಲೆ ದಾಳಿ ಮಾಡಿದ ಇಸ್ರೇಲ್



**ಟೆಲ್ಅವಿವ್:** ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ (IRGC) 50ಕ್ಕೂ ಹೆಚ್ಚು ನೆಲೆಗಳ ಮೇಲೆ ತಡ ರಾತ್ರಿ ದಾಳಿ ನಡೆಸಿದ್ದು, ಐಆರ್ ಜಿಸಿಯ ಕಮಾಂಡ್ ಕೇಂದ್ರಗಳು, ಶಸ್ತ್ರಾಸ್ತ್ರಗಳ ಸಂಗ್ರಹಣಾ ಸೌಲಭ್ಯಗಳು ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳ ಮೇಲೆ ದಾಳಿ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಪಡೆಗಳು ಮಂಗಳವಾರ ತಿಳಿಸಿವೆ.

Xನಲ್ಲಿನ ಪೋಸ್ಟ್‌ನಲ್ಲಿ ಈ ಕುರಿತಾದ ವಿವರಗಳನ್ನು ಹಂಚಿಕೊಂಡ ಇಸ್ರೇಲ್ ರಕ್ಷಣಾ ಪಡೆಗಳು, ಆಪರೇಷನ್ ರೋರಿಂಗ್ ಲಯನ್ ಪ್ರಾರಂಭವಾದಾಗಿನಿಂದ ಇರಾನ್‌ನಾದ್ಯಂತ 3000ಕ್ಕೂ ಹೆಚ್ಚು ದಾಳಿಗಳನ್ನು ನಡೆಸಲಾಗಿದೆ ಎಂದು ತಿಳಿಸಿವೆ.

ಆಪರೇಷನ್ ರೋರಿಂಗ್ ಲಯನ್ ಆರಂಭವಾದಾಗಿನಿಂದ ಇರಾನ್‌ನಾದ್ಯಂತ 3,000ಕ್ಕೂ ಅಧಿಕ ದಾಳಿಗಳು ನಡೆದಿವೆ. ನಿನ್ನೆ, ಐಆರ್‌ಜಿಸಿ ಕಮಾಂಡ್ ಕೇಂದ್ರಗಳು, ಶಸ್ತ್ರಾಸ್ತ್ರ ಸಂಗ್ರಹಣಾ ಸೌಲಭ್ಯಗಳು ■ 6ನೇ ಪುಟಕ್ಕೆ

## ಅಮೆರಿಕ ಜೊತೆ ಮಾತುಕತೆಗೆ ಮೊಜ್ತಬಾ ಖಮೇನಿ ಸಿದ್ಧ: ಇಸ್ರೇಲ್ ಮಾಧ್ಯಮ

ಟೆಹ್ರಾನ್, ಮಾ.24– ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಾಬಾ ಖಮೇನಿ ಅಮೆರಿಕನ್ನರೊಂದಿಗೆ ಮಾತುಕತೆ ನಡೆಸಲು ಸಿದ್ಧರಿದ್ದಾರೆ ಎಂದು ಇಸ್ರೇಲಿ ಮಾಧ್ಯಮ ಸಂಸ್ಥೆ ಯೆಡಿಯೊತ್ ಅಹ್ರೊನೊತ್ ವರದಿ ಮಾಡಿರುವುದನ್ನು ಅರಬ್ ನ್ಯೂಸ್ ಉಲ್ಲೇಖಿಸಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಮತ್ತು ಅಮೆರಿಕದ ಮಧ್ಯವರ್ತಿ ಸ್ಟೀವ್ ವಿಟ್ಕಾಫ್ ನಡುವಿನ ಒಪ್ಪಂದವನ್ನು ಅಹ್ರೊನೊತ್ ಉಲ್ಲೇಖಿಸಿದೆ. ಇದಕ್ಕೂ ಮೊದಲು, ಇರಾನ್‌ನ ವಿದೇಶಾಂಗ ಸಚಿವಾಲಯದ ವಕ್ತಾರರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇರಾನ್ ಜೊತೆಗಿನ ಮಾತುಕತೆಯ ಹೇಳಿಕೆಯನ್ನು ತಳ್ಳಿಹಾಕಿದ್ದರು. ಇಸ್ಲಾಮಿಕ್ ಗಣರಾಜ್ಯದ ವಿರುದ್ಧದ ಅಪ್ರಚೋದಿತ ಅಮೆರಿಕ–ಇಸ್ರೇಲ್ ಯುದ್ಧದ ಕಳೆದ 24 ದಿನಗಳಲ್ಲಿ ಟೆಹ್ರಾನ್ ವಾಷಿಂಗ್ಟನ್‌ನೊಂದಿಗೆ ಯಾವುದೇ ಮಾತುಕತೆಗಳನ್ನು ನಡೆಸಿಲ್ಲ ಎಂದು ಇರಾನ್ ವಕ್ತಾರರು ಹೇಳಿದ್ದರು. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಮಧ್ಯೆ ಪ್ರಮುಖ ■ 6ನೇ ಪುಟಕ್ಕೆ



ಮೊಜ್ತಾಬಾ ಖಮೇನಿ

## ಪರಿಶಿಷ್ಟರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದರೆ ಎಸ್‌ಸಿ ಸ್ಥಾನಮಾನ ಲಭ್ಯವಿಲ್ಲ

### ಅಂತಹವರಿಗೆ ದೌರ್ಜನ್ಯ ಕಾಯ್ದೆಯಡಿ ರಕ್ಷಣೆಯೂ ಇಲ್ಲ; 'ಸುಪ್ರೀಂ' ಸ್ಪಷ್ಟನೆ

ಬೆಂಗಳೂರು, ಮಾ.24 (ಕೆಎಂಶಿ)– ಕ್ರಿಶ್ಚಿಯನ್ ಸೇರಿದಂತೆ ಯಾವುದೇ ಧರ್ಮಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಮತಾಂತರಗೊಂಡರೆ ಅಂತಹ ವ್ಯಕ್ತಿಗಳು ಪರಿಶಿಷ್ಟ ಜಾತಿ ಸ್ಥಾನಮಾನ ಕಳೆದುಕೊಳ್ಳುತ್ತಾರೆ ಎಂದು ಸುಪ್ರೀಂಕೋರ್ಟ್ ಇಂದು ಮಹತ್ವದ ತೀರ್ಪು ನೀಡಿದೆ.




ಅಂತಹ ವ್ಯಕ್ತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ ಅಡಿ ರಕ್ಷಣೆಯನ್ನೂ ಕೇಳುವಂತಿಲ್ಲ ಎಂದು ಸ್ಪಷ್ಟಪಡಿಸಿದೆ. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ದಲಿತ ವ್ಯಕ್ತಿಯೊಬ್ಬರು ಎಸ್‌ಸಿ, ಎಸ್‌ಟಿ ಕಾಯಿದೆಯಡಿ ರಕ್ಷಣೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಕೆ.ಮಿಶ್ರ ಹಾಗೂ ನ್ಯಾಯಮೂರ್ತಿ ಮನಮೋಹನ್ ಅವರಿದ್ದ ವಿಭಾಗೀಯ ಪೀಠ ಈ ಐತಿಹಾಸಿಕ ತೀರ್ಪು ನೀಡಿದೆ. ಹಿಂದೂ, ಸಿಖ್, ಬೌದ್ಧ ಧರ್ಮ ಹೊರತುಪಡಿಸಿ ಕ್ರಿಶ್ಚಿಯನ್ ಧರ್ಮದಂತಹ ಬೇರ್‍ಯಾವುದೇ ಧರ್ಮಕ್ಕೆ ಮತಾಂತರಗೊಂಡರೆ ಪರಿಶಿಷ್ಟ ಜಾತಿಯ ■ 6ನೇ ಪುಟಕ್ಕೆ

### ಪ್ರಸಕ್ತ ಸಾಲಿನಲ್ಲಿ ಮಳೆ ಅಭಾವ ಸಾಧ್ಯತೆ

## ಜಲಾಶಯಗಳ ನೀರು ಕುಡಿಯಲು ಮಾತ್ರ ಮೀಸಲು



- ಸರ್ಕಾರದ ತೀರ್ಮಾನ
- ಈ ಬಾರಿ ವಾಡಿಕೆಗಿಂತ ಅಧಿಕ ತಾಪಮಾನ



ಬೆಂಗಳೂರು, ಮಾ.24(ಕೆಎಂಶಿ)– ಪ್ರಸಕ್ತ ವರ್ಷ ಮಳೆ ಕೊರತೆ ಉಂಟಾಗಬಹುದೆಂಬ ಹಿನ್ನೆಲೆಯಲ್ಲಿ ರಾಜ್ಯದ ಜಲಾಶಯಗಳಲ್ಲಿನ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಕಾಯ್ದಿರಿಸಲು ಸರ್ಕಾರ ತೀರ್ಮಾನಿಸಿದೆ.

ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ನಡೆದ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಪ್ರಸ್ತುತ ವರ್ಷ ಜೂನ್, ಜುಲೈ ತಿಂಗಳಲ್ಲಿ ವಾಡಿಕೆ ಮಳೆ ಆಗಲಿದೆ, ತದನಂತರ ಮಳೆ ಕೊರತೆ ಎದುರಾಗುವ ಸಾಧ್ಯತೆ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಮಳೆ ಕೊರತೆಯಾಗಲಿದೆ. ಈ ಬೇಸಿಗೆಯಲ್ಲಿ ಕರಾವಳಿ ಭಾಗದಲ್ಲಿ ವಾಡಿಕೆಗಿಂತ ತಾಪಮಾನ ಹೆಚ್ಚಾಗಲಿದೆ. ಉತ್ತರ ಕರ್ನಾಟಕದಲ್ಲಿ ಬಿಸಿಗಾಳಿಯ ತೀವ್ರತೆ ಹೆಚ್ಚಲಿದೆ. ಈ ಕಾರಣಕ್ಕಾಗಿ ಕೆರೆ–ಕಟ್ಟೆ ಮತ್ತು ಜಲಾಶಯಗಳಲ್ಲಿ ಇರುವ ನೀರನ್ನು ಕುಡಿಯಲು ಮಾತ್ರ ಬಳಸಲು ತೀರ್ಮಾನಿಸಿದೆ.



ಕೃಷ್ಣಬೈರೇಗೌಡ

ಸಭೆ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪೂರ್ವ ಮುಂಗಾರಿನಲ್ಲಿ 17 ಜಿಲ್ಲೆಗಳಲ್ಲಿ ಅತ್ಯಧಿಕ ಮಳೆ, 5 ಜಿಲ್ಲೆಗಳಲ್ಲಿ ಅಧಿಕ ಮಳೆ, 6 ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗಿದ್ದರೆ, 3 ಜಿಲ್ಲೆಗಳಲ್ಲಿ ಮಳೆ ಕೊರತೆ ಉಂಟಾಗಿದೆ ಎಂದರು.

ಮುಂಬರುವ ತಿಂಗಳು ಲಾ ನಿನಾ ಪರಿಸ್ಥಿತಿ ತಟಸ್ಥವಾಗುವ ನಿರೀಕ್ಷೆ ಇದೆ. 2026ರ ಮೇ–ಜುಲೈವರೆಗೆ ಲಾ ನಿನಾ ತಟಸ್ಥವಾಗಿ ಮುಂದುವರೆಯುವ ಸಾಧ್ಯತೆ. 2026ರ ಜೂನ್–ಆಗಸ್ಟ್ ಅವಧಿಗೆ ಲಾ ನಿನಾ ಪರಿಸ್ಥಿತಿ ತಲೆದೋರಲಿದ್ದು, ವರ್ಷಾಂತ್ಯದವರೆಗೆ ಮುಂದುವರೆಯಲಿದೆ. ■ 6ನೇ ಪುಟಕ್ಕೆ

## ಭಾರತದಲ್ಲಿ ಕಚ್ಚಾ ತೈಲ ಸಾಕಷ್ಟು ಲಭ್ಯವಿದೆ

### ರಾಷ್ಟ್ರಕ್ಕೆ ಪ್ರಧಾನಿ ಮೋದಿ ಅಭಯ



ನವದೆಹಲಿ, ಮಾ.24– ದೇಶದಲ್ಲಿ ಕಚ್ಚಾ ತೈಲ ಸಾಕಷ್ಟು ಲಭ್ಯವಿದೆ. ಭಾರತವು ಕಚ್ಚಾ ತೈಲಕ್ಕಾಗಿ ಸಾಕಷ್ಟು ಸಂಗ್ರಹಣಾ ಸೌಲಭ್ಯಗಳು ಮತ್ತು ವಿಶ್ವಾಸಾರ್ಹ ಪೂರೈಕೆ ವ್ಯವಸ್ಥೆಗಳನ್ನ ಹೊಂದಿದೆ ಎಂದು ನಾನು ರಾಷ್ಟ್ರಕ್ಕೆ ಮತ್ತು ಸದನಕ್ಕೆ ಭರವಸೆ ನೀಡುತ್ತೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ರಾಜ್ಯಸಭೆಯಲ್ಲಿ ಈ ಕುರಿತು ಮಾತನಾಡಿದ ಅವರು, ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಜಾಗತಿಕವಾಗಿ ಗಂಭೀರ ಇಂಧನ ಬಿಕ್ಕಟ್ಟು ಸೃಷ್ಟಿಸುತ್ತಿರುವುದರಿಂದ ಕೇಂದ್ರ ಸರ್ಕಾರ, ಸಾಧ್ಯವಿರುವ ಎಲ್ಲಾ ಮೂಲಗಳಿಂದ ಇಂಧನ ಖರೀದಿಸಲು ಯತ್ನಿಸುತ್ತಿದೆ. ಮುಂದಿನ ದಿನಗಳಲ್ಲೂ ಪ್ರಯತ್ನ ಮುಂದುವರಿಯಲಿದೆ ಎಂದು ತಿಳಿಸಿದರು.

ಯಾವುದೇ ಒಂದು ಇಂಧನ ಮೂಲದ ಮೇಲಿನ ಅತಿಯಾದ ಅವಲಂಬನೆಯನ್ನ ತಪ್ಪಿಸುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ದೇಶೀಯ ಅನಿಲ ಪೂರೈಕೆಯನ್ನ ಹೆಚ್ಚಿಸಲು ದ್ರವೀಕೃತ ಪೆಟ್ರೋಲಿಯಂ ಅನಿಲ ಜೊತೆಗೆ ಪೈಪ್ಡ್ ನೈಸರ್ಗಿಕ ಅನಿಲ ಬಳಕೆಯನ್ನ ಉತ್ತೇಜಿಸುತ್ತಿದ್ದೇವೆ ಎಂದರು. ಇದಕ್ಕೂ ಮುನ್ನ, ಭಾರತವು ತನ್ನ ಇಂಧನ ಅಗತ್ಯಗಳಿಗಾಗಿ 27 ದೇಶಗಳಿಂದ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿ ಅನ್ನು ಆಮದು ಮಾಡಿಕೊಳ್ಳುತ್ತಿದೆ. ಇಂದು ದೇಶವು 41 ದೇಶಗಳಿಂದ ■ 6ನೇ ಪುಟಕ್ಕೆ



### ಅದೇ ರಸ್ತೆ, ಅದೇ ಹೈಟೆನ್ಷನ್ ಲೈನ್ ಕೆಳಗೆ; ಆದರೆ ಸ್ಥಳ ಮಾತ್ರ ಬೇರೆ

# ಮತ್ತೆ ತಲೆ ಎತ್ತುತ್ತಿವೆ ಫುಡ್ ಸ್ಟಾಲ್‌ಗಳು

■ ವ್ಯಾಪಾರಸ್ಥರೇ ಸಾರ್ವಜನಿಕ ಸ್ಥಳದಲ್ಲಿ ತಮ್ಮಿಷ್ಟದಂತೆ ಸ್ಟಾಲ್‌ಗಳಿಗೆ ಸ್ಥಳ ನಿಗದಿ ■ ಕಣ್ಮುಚ್ಚಿ ಕುಳಿತ ನಗರ ಪಾಲಿಕೆ ■ ವಿಜಯನಗರ 2ನೇ ಹಂತದ ಹೈಟೆನ್ಷನ್ ಲೈನ್ ಕೆಳಗಿದ್ದ ಫುಡ್ ಸ್ಟಾಲ್‌ಗಳು; ಈಗ ಅದೇ ರಸ್ತೆಯ ರಿಂಗ್ ರೋಡ್ ಜಂಕ್ಷನ್ ಬಳಿ ವ್ಯಾಪಾರ ವಹಿವಾಟಿಗೆ ಸಿದ್ಧತೆ

ಮೈಸೂರು, ಮಾ.24(ಪಿಎಂ)– ಅದೇ ರಸ್ತೆ–ಅದೇ ಹೈಟೆನ್ಷನ್ ಲೈನ್ ಕೆಳಗೆ, ಆದರೆ ಇವರಿಗೆ ನೋ ಟೆನ್ಷನ್! ವಿಜಯನಗರ 2ನೇ ಹಂತದ ಹೈಟೆನ್ಷನ್ ಲೈನ್ ಕೆಳಗೆ ಇದ್ದ ರಸ್ತೆ ಬದಿ ವ್ಯಾಪಾರಿಗಳ ವಿಚಾರದಲ್ಲಿ ಈ ಮಾತು ಹೇಳಲೇಬೇಕು. ಏಕೆಂದರೆ, ಹೈಟೆನ್ಷನ್ ಲೈನ್ ಕೆಳಗೆ ಫಾಸ್ಟ್‌ಫುಡ್ ವ್ಯಾಪಾರ (ರಸ್ತೆ ಬದಿ ವ್ಯಾಪಾರ) ಅಪಾಯಕಾರಿ, ಸುರಕ್ಷಿತ ವಲ್ಲವೆಂದು ತೆರವುಗೊಳಿಸಿದರೆ, ಮತ್ತೆ ಅದೇ ಲೈನ್ ಕೆಳಗೆ ಮತ್ತೊಂದು ಸ್ಥಳದಲ್ಲಿ ವಹಿವಾಟಿಗೆ ಸದರಿ ವ್ಯಾಪಾರ ಸ್ಥರು ಸಿದ್ಧತೆ ಮಾಡುತ್ತಿದ್ದಾರೆ. ದುರಂತವೆಂದರೆ ಇತ್ತ ತಿರುಗಿಯೂ ನೋಡದೇ ಮೈಸೂರು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದೆ.

ವಿಜಯನಗರ 2ನೇ ಹಂತದ ಹೈಟೆನ್ಷನ್ ರಸ್ತೆಯಲ್ಲಿ ಹೈಟೆನ್ಷನ್ ಲೈನ್ ಕೆಳಗೆ ಅನಧಿಕೃತವಾಗಿ ನಡೆಯುತ್ತಿದ್ದ ಫಾಸ್ಟ್‌ಫುಡ್ ಸ್ಟಾಲ್‌ಗಳ ತೆರವು ಕಾರ್ಯಾಚರಣೆಯು ಪಾಲಿಕೆಯ ವಲಯ ಕಚೇರಿ 5ರ ವತಿಯಿಂದ ಮಾ.12ರಂದು ನಡೆದಿತ್ತು. ಎಸ್‌ಬಿಐ ಬ್ಯಾಂಕ್ ವಿಜಯನಗರ ಶಾಖೆ ಎದುರು ಈ ರಸ್ತೆಯ ಹೈಟೆನ್ಷನ್ ಲೈನ್ ಕೆಳಗೆ ಅನಧಿಕೃತವಾಗಿ ತಲೆ ಎತ್ತಿದ್ದ 70ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಅಂದು ತೆರವುಗೊಳಿಸಲಾಗಿತ್ತು. ಇದಕ್ಕೆ ಹೈಟೆನ್ಷನ್ ಲೈನ್ ಕೆಳಗೆ ಇರುವುದು ಪ್ರಮುಖ ಕಾರಣವಾಗಿತ್ತು. ಇದೀಗ ರಿಂಗ್ ರಸ್ತೆ ಜಂಕ್ಷನ್ (ಅಪ್ಪು ಸರ್ಕಲ್) ಸಮೀಪ ಅದೇ ಹೈಟೆನ್ಷನ್ ಲೈನ್ ಕೆಳಗೆಯೇ ಸ್ವತಃ ವ್ಯಾಪಾರಸ್ಥರೇ ಸ್ಟಾಲ್ ಆರಂಭಿಸಲು ಗಿಡ ಗಂಟಿ ತೆರವುಗೊಳಿಸಿ ಕಲ್ಲುಗಳನ್ನು ನೆಟ್ಟು ತಮಗೇ ತಾವೇ ಇಚ್ಛಿಸಿದ ಜಾಗಗಳನ್ನು ಹಂಚಿಕೊಳ್ಳುವ ಪ್ರಕ್ರಿಯೆಗೆ ಮುಂದಾಗಿದ್ದಾರೆ.




ಮೈಸೂರಿನ ವಿಜಯನಗರ 2ನೇ ಹಂತದ ರಿಂಗ್ ರಸ್ತೆ ಜಂಕ್ಷನ್ ಸಮೀಪ ಹೈಟೆನ್ಷನ್ ಲೈನ್ ಕೆಳಗೆ ಉದ್ಯಾನವನಕ್ಕೆ ಮೀಸಲಾದ ಜಾಗದಲ್ಲಿ ಫುಡ್ ಸ್ಟಾಲ್‌ಗಳ ತೆರೆಯಲು ಗಿಡಗಂಟಿ ತೆರವುಗೊಳಿಸಿ, ತಮ್ಮ ಅಗತ್ಯಾನುಸಾರ ಸ್ಥಳ ಮೀಸಲಿಗೆ ಕಲ್ಲು ನೆಟ್ಟಿರುವುದು.

ಇಷ್ಟೆಲ್ಲಾ ಚಟುವಟಿಕೆ ನಡೆಯುತ್ತಿದ್ದರೂ ವಲಯ ಕಚೇರಿ 5ರ ಅಧಿಕಾರಿ–ಸಿಬ್ಬಂದಿ ತಮಗೆ ಅರಿವಿಲ್ಲದಂತೆ ಮೌನಕ್ಕೆ ಶರಣಾಗಿದ್ದಾರೆ. ಹೈಟೆನ್ಷನ್ ರಸ್ತೆಯ ಹೈಟೆನ್ಷನ್ ಲೈನ್ ಕೆಳಗೆ ತಮ್ಮಿಷ್ಟದಂತೆ ಅನಧಿಕೃತವಾಗಿ ಖಾಯಂ ಮಾದರಿಯಲ್ಲಿಯೇ ಕಾಂಕ್ರೀಟ್ ಬಳಸಿ ಸ್ಟಾಲ್‌ಗಳನ್ನು ನಿರ್ಮಿಸಿಕೊಳ್ಳಲಾಗಿತ್ತು. ಅಂದು ಕಾರ್ಯಾಚರಣೆ ನಡೆಸಿ, ಜೆಸಿಬಿಗಳ ಮೂಲಕ ಕಾಂಕ್ರೀಟ್ ಸಮೇತ ಸ್ಟಾಲ್‌ಗಳನ್ನು ತೆರವುಗೊಳಿಸಲಾಗಿತ್ತು. ಆದರೆ, ಅಂದು ಪಾಲಿಕೆ ತೋರಿದ್ದ ಉತ್ಸಾಹ ಅಷ್ಟಕ್ಕೇ ಸೀಮಿತವೇ ಎನ್ನುವಂತಹ ಸನ್ನಿವೇಶ ಈಗ ನಿರ್ಮಾಣವಾಗಿದೆ. ಹೈಟೆನ್ಷನ್ ಲೈನ್ ಕೆಳಗೆಯೇ ಮತ್ತೊಂದು ಸ್ಥಳದಲ್ಲಿ ಬೀದಿಬದಿ ವ್ಯಾಪಾರಿಗಳೇ ಸ್ಟಾಲ್‌ಗಳ ತೆರೆಯಲು ಜಾಗ ಸಜ್ಜುಗೊಳಿಸುತ್ತಿದ್ದರೂ ಪಾಲಿಕೆಗೆ ಗೊತ್ತೇ ಇಲ್ಲವೆಂದರೆ ■ 6ನೇ ಪುಟಕ್ಕೆ

### ಹೈಟೆನ್ಷನ್ ಲೈನ್ ಕೆಳಗೆ ವಹಿವಾಟಿಗೆ ಅವಕಾಶವಿಲ್ಲ...

▶ ಹೈಟೆನ್ಷನ್ ಲೈನ್ ಕೆಳಗೆ ಇರುವುದು ಅಪಾಯಕಾರಿ ಎಂದು ಇತ್ತೀಚೆಗೆ ತೆರವು ಮಾಡಿಸಿದ್ದೇವೆ. ಸುರಕ್ಷತೆ ದೃಷ್ಟಿಯಿಂದ ಈ ಕ್ರಮ ವಹಿಸಲಾಗಿತ್ತು. ಅವರಿಗೆ ಪರ್ಯಾಯ ಸ್ಥಳ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ. ಆದರೆ ಮತ್ತೆ ಮತ್ತೊಂದು ಭಾಗದ ಹೈಟೆನ್ಷನ್ ಲೈನ್ ಕೆಳಗೆ ವಹಿವಾಟು ಆರಂಭಿಸಲು ಸಿದ್ಧತೆ ಮಾಡುತ್ತಿರುವ ಬಗ್ಗೆ ತಿಳಿಯಿತು. ಅದಕ್ಕೆ ಅವಕಾಶ ಕೊಡುವುದಿಲ್ಲ. ವಲಯ ಆಯುಕ್ತರಿಗೆ ಪರಿಶೀಲಿಸಲು ಸೂಚನೆ ನೀಡುತ್ತೇನೆ. ಅವರು ಕ್ರಮ ವಹಿಸುತ್ತಾರೆ. ಪಾಲಿಕೆಯ ಪ್ರತಿ ವಲಯದಲ್ಲಿ ರಸ್ತೆಬದಿ ವ್ಯಾಪಾರಿಗಳಿಗೆ ಪರ್ಯಾಯವಾಗಿ ಸೂಕ್ತ ಜಾಗ ಗುರುತಿಸಿ ವಹಿವಾಟಿಗೆ ಅವಕಾಶ ಕಲ್ಪಿಸಲು ಪ್ರಕ್ರಿಯೆ ನಡೆಯುತ್ತಿದೆ.



–ನಿತೇಶ್ ಪಾಟೀಲ್, ಆಡಳಿತಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ ಹಾಗೂ ಪ್ರಾದೇಶಿಕ ಆಯುಕ್ತರು. ಮೈಸೂರು.

ಮೈಸೂರು ಮಿತ್ರ


# ಮೈಸೂರಲ್ಲಿ ಶೃಂಗೇರಿ ಭಾರತಿ ತೀರ್ಥ ಸ್ವಾಮಿಗಳ 76ನೇ ವರ್ಧಂತಿ ಮಹೋತ್ಸವ



ಶ್ರೀ ಶೃಂಗೇರಿ ಶಾರದಾ ಪೀಠದ 36ನೇ ಜಗದ್ಗುರು ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ 76ನೇ ವರ್ಧಂತಿ ಮಹೋತ್ಸವವನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಹಾಗೂ ಶ್ರೀ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ ಭಕ್ತವೃಂದದಿಂದ ಆಚರಿಸಲಾಯಿತು.

ಮೈಸೂರು,ಮಾ.24(ಜಿಎ)–ಶ್ರೀ ಶೃಂಗೇರಿ ಶಾರದಾ ಪೀಠದ 36ನೇ ಜಗದ್ಗುರು ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ 76ನೇ ವರ್ಧಂತಿ ಮಹೋತ್ಸವವನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಹಾಗೂ ಶ್ರೀ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ ಭಕ್ತವೃಂದದಿಂದ ಆಚರಿಸಲಾಯಿತು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಗಿಡ ನೆಟ್ಟು ನಂತರ ಸಿಹಿ ವಿತರಿಸಿ ಶ್ರೀ ಶೃಂಗೇರಿ ಶಾರದಾ ಪೀಠದ 36ನೇ ಜಗದ್ಗುರು ಶ್ರೀ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ 76ನೇ ವರ್ಧಂತಿ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಈ ವೇಳೆ ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷ ಎನ್.ಎಂ. ನವೀನ್‌ಕುಮಾರ್ ಮಾತನಾಡಿ, ಶೃಂಗೇರಿ ಶಂಕರ ಮಠ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ನಾಡಿನ ಶ್ರೇಷ್ಠ ಮಹಾನ್ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿದೆ. ಭಾರತೀಯ ಸನಾತನ ಧರ್ಮವನ್ನು ಉಳಿಸಿ ಬೆಳೆಸುವ ಶ್ರೇಷ್ಠ ಕಾರ್ಯವನ್ನು ನಿತ್ಯ ನಿರಂತರವಾಗಿ 1200ಕ್ಕೂ ಹೆಚ್ಚು ವರ್ಷಗಳಿಂದ ನೆರವೇರಿಸಿಕೊಂಡು ಬಂದಿದೆ. ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಶೃಂಗೇರಿ ವಿಶ್ವದ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿದ್ದು, ಕೋಟ್ಯಾಂತರ ಭಕ್ತರಿಗೆ ಸನ್ಮಾರ್ಗದಲ್ಲಿ ನಡೆಯಲು ಮಹಾನ್ ಸ್ಪೂರ್ತಿ ಮತ್ತು ಶಕ್ತಿಯನ್ನು ನೀಡುತ್ತಿದೆ ಎಂದರು.

ಮನುಷ್ಯ ಸನ್ಮಾರ್ಗದಲ್ಲಿ ಬೆಳೆಯಲು ಗುರು ಪರಂಪರೆಯೊಂದೇ ಮುಖ್ಯವಾಗಿದೆ. ಗುರು ಭಕ್ತಿ ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಗುರುವಿನ ಆಶೀರ್ವಾದದಿಂದ ಈ ಮಾನವ ಜನ್ಮ ಶಕ್ತಿಶಾಲಿಯಾಗಿ ಹಾಗೂ ಪ್ರೇರಣದಾಯಕವಾಗಿ ಬದುಕಿ ಬಾಳಲು ಸಹಕಾರಿಯಾಗುವುದು. ಪ್ರತಿಯೊಬ್ಬರೂ ಪ್ರತಿನಿತ್ಯ ಗುರು ಸ್ಮರಣೆಯನ್ನು ಮಾಡಿಕೊಳ್ಳುವ ಮೂಲಕ ಭಾರತೀಯ ಸಂಸ್ಕೃತಿ ಪರಂಪರೆಯ ಗುರು ಶ್ರೇಷ್ಠತೆಯನ್ನು ನಾವೆಲ್ಲರೂ ಮುನ್ನಡೆಸಿಕೊಂಡು ಮಾನವ ಜನ್ಮವನ್ನು ಪಾವನಗೊಳಿಸಿಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಎಂ.ಆರ್. ಬಾಲಕೃಷ್ಣ, ಪಂಚಮುಖಿ ಆಂಜನೇಯ ದೇವಸ್ಥಾನದ ಪ್ರಧಾನ ಅರ್ಚಕ ವಿದ್ವಾನ್ ಎಸ್.ಕೃಷ್ಣಮೂರ್ತಿ,ಅಪೂರ್ವ ಸುರೇಶ್, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ರಾಕೇಶ್ ಭಟ್, ಕಡಕೊಳ ಜಗದೀಶ್, ಸಂದೀಪ್, ಜೀವಧಾರ ಗಿರೀಶ್, ಬಸವರಾಜು, ಜಯಸಿಂಹ, ಕೆಎಂ ನಿಶಾಂತ್, ಲಕ್ಷ್ಮಿ ದೇವಿ, ರೇಣುಕಾರಾಜ್, ವಿಜಯ್ ಕುಮಾರ್, ಟಿಎಸ್ ಅರುಣ್, ಸುಚೇಂದ್ರ, ಶಿವು ಪಟೇಲ್, ಮಹೇಶ್ ನಾಯಕ್, ಮನೋಜ್ ಮತ್ತಿತರರು ಉಪಸ್ಥಿತರಿದ್ದರು.

# ಪರಿಶಿಷ್ಟ ಪಂಗಡದವರ ಮೇಲೆ ದೌರ್ಜನ್ಯ ಎಸಗಿದರೆ ಆಯೋಗಕ್ಕೆ ದೂರು ನೀಡಿ

## ಎಸ್‌ಟಿ ರಾಷ್ಟ್ರೀಯ ಆಯೋಗದ ಸದಸ್ಯೆ ಡಾ.ಆಶಾ ಲಕ್ರಾ ಸಲಹೆ



ಮೈಸೂರಿನ ಹೆಚ್.ಡಿ.ಕೋಟೆಯ ಜಾಗನಕೋಟೆ ಹಾಡಿಯ ಪ್ರಕೃತಿ ಫುಡ್ ಪ್ರಾಡೆಕ್ಟ್‌ಗೆ ಮಂಗಳವಾರ ಭೇಟಿ ನೀಡಿದ ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗದ ಸದಸ್ಯೆ ಡಾ.ಆಶಾ ಲಕ್ರಾ ಅವರು ಮಹಿಳೆಯರ ಸ್ವಉದ್ಯೋಗವನ್ನು ಉತ್ತೇಜಿಸಿದರು.

ಮೈಸೂರು,ಮಾ.24(ಬಿಎಲ್‌ಯು)–ಪರಿಶಿಷ್ಟ ಪಂಗಡ (ಎಸ್‌ಟಿ) ದವರ ಮೇಲೆ ದೌರ್ಜನ್ಯ ನಡೆಸಿದರೆ ತಕ್ಷಣವೇ ಆಯೋಗಕ್ಕೆ ದೂರು ಸಲ್ಲಿಸಿ ಎಂದು ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗದ ಸದಸ್ಯೆ ಡಾ.ಆಶಾ ಲಕ್ರಾ ಹಾಡಿ ಜನರಿಗೆ ಸಲಹೆ ನೀಡಿದರು.

ಮೈಸೂರಿನ ಹೆಚ್.ಡಿ.ಕೋಟೆಯ ಹ್ಯಾಂಡ್‌ಪೋಸ್ಟ್ ಬಳಿ ಕುರುಬ ಸಮುದಾಯದ ಮಹಿಳೆಯೊಬ್ಬರು ನಡೆಸುತ್ತಿರುವ ಸಿರಿಧಾನ್ಯ ಸ್ಟೋರ್‌ಗೆ ಭೇಟಿ ನೀಡಿದ ವೇಳೆ ಮಹಿಳೆಯರೊಂದಿಗೆ ನಡೆಸಿದ ಸಂವಾದದಲ್ಲಿ ಅವರು ಮಾತನಾಡಿದರು.

ವಿವಿಧ ಹಾಡಿಗಳಲ್ಲಿ ವಾಸ ಮಾಡುವ ಪರಿಶಿಷ್ಟ ಪಂಗಡಗಳ ಜನರಿಗೆ ರಕ್ಷಣೆ ನೀಡಿ ಗೌರವಯುತ ಜೀವನ ನಡೆಸಲು ಸಹಕಾರ ನೀಡುವುದು ಆಯೋಗದ ಉದ್ದೇಶ. ಈ ಹಿನ್ನೆಲೆಯಲ್ಲಿ ಯಾರಿಂದಲೇ ಆಗಲಿ ದೌರ್ಜನ್ಯಕ್ಕೊಳಪಟ್ಟರೆ ನೀವು ಆಯೋಗಕ್ಕೆ ದೂರು ನೀಡಿ ಎಂದು ಹೇಳಿದರು.

ಪರಿಶಿಷ್ಟ ಪಂಗಡದ ಹಾಡಿ ಜನರು ಬೆಳೆಯುವ ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಮಾರಾಟ ಮಾಡಲು ಹೊಸ ಹೊಸ ತರಬೇತಿ ನೀಡಬೇಕು. ವಿಶಿಷ್ಟ ಹಾಗೂ ಅಪರೂಪದ ಈ ಉತ್ಪನ್ನಗಳಿಗೆ ಜಿಯೋ ಟ್ಯಾಗಿಂಗ್ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪರಿಶಿಷ್ಟ ಪಂಗಡದವರು ತಯಾರಿಸುವ ಆಹಾರ ಪದಾರ್ಥಗಳನ್ನು ಭಾರತಿ ಸಹಕಾರ ಸಂಸ್ಥೆಯೊಂದಿಗೆ ಮಾರಾಟ ಮಾಡಲು ಆನ್‌ಲೈನ್ ವೇದಿಕೆ ಕಲ್ಪಿಸುವಂತೆ ಸಲಹೆ ನೀಡಿದರು. ಹೊಸಹಳ್ಳಿ ವಿವೇಕ ಸ್ಕೂಲ್ ಆಫ್ ಲರ್ನಿಂಗ್ ಸಂಸ್ಥೆಗೂ ಭೇಟಿ ನೀಡಿ ಅಲ್ಲಿನ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿದರು. ಹೆಣ್ಣು ಮಕ್ಕಳಿಗೂ ಮೆಕ್ಯಾನಿಕಲ್ ಟೂಲ್ ತರಬೇತಿ ಹಾಗೂ ಟಿಎಸ್‌ಪಿ ಅನುದಾನದಲ್ಲಿ ಟೈಲರಿಂಗ್ ಕೌಶಲ ತರಬೇತಿ ನೀಡುವಂತೆ ಡಾ.ಆಶಾ ಲಕ್ರಾ, ಅಧಿಕಾರಿಗಳಿಗೆ ಸೂಚಿಸಿದರು.

### ಅಕ್ರಮ ಮದ್ಯ ಸೇವಿಸಿ ವಿದ್ಯಾರ್ಥಿಗಳು ಬಲಿ ಆಗುತ್ತಿದ್ದಾರೆ

ಹಾಡಿಗಳ ಸುತ್ತ ಮುತ್ತ ಅಕ್ರಮ ಮದ್ಯ ಮಾರಾಟದಿಂದ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದು, ಗಂಡಸರು ಮಾತ್ರವಲ್ಲದೆ, ವಿದ್ಯಾರ್ಥಿಗಳು ಕೂಡ ಕುಡಿತಕ್ಕೆ ಬಲಿಯಾಗುತ್ತಿದ್ದಾರೆ ಎಂದು ಹಾಡಿ ಮಹಿಳೆಯರು ಆಯೋಗದ ಸದಸ್ಯೆ ಡಾ.ಆಶಾ ಲಕ್ರಾ ಅವರಲ್ಲಿ ಅಳಲು ತೋಡಿಕೊಂಡರು.

ಹೆಚ್.ಡಿ.ಕೋಟೆಯ ಜಾಗನಕೋಟೆ ಹಾಡಿಯ ಪ್ರಕೃತಿ ಫುಡ್ ಪ್ರಾಡಕ್ಟ್‌ಗೆ ಭೇಟಿ ನೀಡಿದ ವೇಳೆ ಹಾಡಿ ಮಹಿಳೆಯರು ತಮ್ಮ ನೋವು ತೋಡಿಕೊಂಡರು. ಅಕ್ರಮ ಮದ್ಯ ಸೇವಿಸಿ ಕಾಲೇಜು ವಿದ್ಯಾರ್ಥಿಗಳು ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಅವರ ಜೀವಕ್ಕೆ ಅಪಾಯ ಎದುರಾಗಿದೆ ಎಂದು ಡಾ.ಆಶಾ ಲಕ್ರಾ ಅವರು ಆತಂಕ ವ್ಯಕ್ತಪಡಿಸಿದರು.

ಈ ಸಂಬಂಧ ಆಯೋಗ ಅಬಕಾರಿ ಅಧಿಕಾರಿಗಳೊಂದಿಗೆ ಮಾತನಾಡಿ ಅಕ್ರಮ ಮದ್ಯ ಮಾರಾಟ ಕೇಂದ್ರಗಳ ಮೇಲೆ ಅನಿರೀಕ್ಷಿತ ದಾಳಿ ಮಾಡಿ ಮದ್ಯ ಮಾರಾಟ ತಡೆಗಟ್ಟಲಾಗುವುದು ಎಂದು ಭರವಸೆ ನೀಡಿದರು. ಆಹಾರ ಪದಾರ್ಥಗಳ ಮಾರಾಟದಿಂದ ಮಹಿಳೆಯರಾದ ನಾವು ಸಬಲೀಕರಣಗೊಳ್ಳುತ್ತಿದ್ದೇವೆ. ರಾಗಿಯಿಂದ ಸುಮಾರು 11 ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿ ತಿಂಗಳಿಗೆ 1.50 ಲಕ್ಷ ಆಹಾರ ಪದಾರ್ಥ ಮಾರಾಟ ಮಾಡುತ್ತಿದ್ದೇವೆ ಎಂದು ಪರಿಶಿಷ್ಟ ಪಂಗಡದ ಮಹಿಳೆಯರು ಡಾ.ಆಶಾ ಲಕ್ರಾ ಅವರಿಗೆ ಮಾಹಿತಿ ನೀಡಿದರು.

## ಪೂಜಾ ಕಾರ್ಯಕ್ರಮ...



ಮೈಸೂರಿನ ಗಾಂಧಿನಗರದ 11ನೇ ಕ್ರಾಸ್‌ನಲ್ಲಿ ಶ್ರೀ ಕೊಲ್ಲಾಪುರದಮ್ಮನವರ ದೇವಾಲಯದಲ್ಲಿ ಅದ್ದೂರಿ ಪೂಜಾ ಕಾರ್ಯಕ್ರಮ ನಡೆಯಿತು. ಈ ವೇಳೆ ಸಮಿತಿಯ ಸದಸ್ಯರಾದ ಶ್ಯಾಮ್, ಆರ್. ರವಿಕುಮಾರ್, ಸ್ವಾಮಿ, ಚೇತನ್, ಮಧು, ಶಿವು, ಹರೀಶ್, ಸುಜಾತಾ ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

### ಗಾಂಜಾ ಸೇವನೆಗೆ ಸೂಕ್ತ ಜಾಗದ ಹುಡುಕಾಟದಲ್ಲಿದ್ದ

# ಇಬ್ಬರ ವಿರುದ್ಧ ಪ್ರಕರಣ ದಾಖಲು; ಮಾರಾಟ ಮಾಡಿದ್ದವ ಪೊಲೀಸ್ ವಶಕ್ಕೆ

ಮೈಸೂರು,ಮಾ.24(ಪಿಎಂ)– ಗಾಂಜಾ ಸೇವನೆಗೆ ಸೂಕ್ತ ಜಾಗ ಹುಡುಕುತ್ತಿದ್ದ ಇಬ್ಬರು ಕೇರಳ ಮೂಲದ ಯುವಕರ ವಿರುದ್ಧ ಪ್ರಕರಣ ದಾಖಲಿಸಿರುವ ಮಂಡಿ ಠಾಣೆ ಪೊಲೀಸರು, ಇವರಿಗೆ ಗಾಂಜಾ ಮಾರಾಟ ಮಾಡಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಇವರಿಂದ ಒಟ್ಟಾರೆ 111 ಗ್ರಾಂ ಗಾಂಜಾ ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೂಲತಃ ಕೇರಳ ರಾಜ್ಯದ ಮೈಸೂರಿನ ಬನ್ನಿಮಂಟಪದ ಎಸ್‌ಎಸ್ ನಗರದ ನಿವಾಸಿಗಳಾದ ಕೆ.ಕೆ.ಪಿನಾಸ್ (28) ಮತ್ತು ಎಸ್.ಆದಿತ್ಯನ್ (22) ಇಬ್ಬರು ಗಾಂಜಾ ಸೇವನೆಗೆ ಜಾಗ ಹುಟುಕಾಟ ಮಾಡುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದು ಇವರಿಗೆ ಗಾಂಜಾ ಮಾರಾಟ ಮಾಡಿದ್ದ ಮಂಡಿ ಮೊಹಲ್ಲಾ ಮೀರ್ ಮುಜುಬುದ್ದೀನ್ ಅಲಿಯಾಸ್ ಸೈಯದ್ ಮುಜ್ಜು (37) ಎಂಬಾತನನ್ನು ಸಹ ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಂಡಿ ಮೊಹಲ್ಲಾದ ಬಿಇಓ ಕಚೇರಿ ಸಮೀಪ ಕೆ.ಕೆ.ಪಿನಾಸ್ ಮತ್ತು ಆದಿತ್ಯನ್ ಇಬ್ಬರು ಬೈಕ್ ನಿಲ್ಲಿಸಿಕೊಂಡು ಅನುಮಾನಾಸ್ಪದವಾಗಿ ಕುಳಿತಿದ್ದು, ಪೊಲೀಸರನ್ನು ಕಂಡು ಬೈಕ್‌ನೊಂದಿಗೆ ಪರಾರಿಯಾಗಲು ಯತ್ನಿಸಿ ಕೊನೆಗೆ ಸಿಕ್ಕಿ ಬಿದ್ದಿದ್ದಾರೆ. ಇವರ ಬಳಿ ಗಾಂಜಾ ಪತ್ತೆಯಾಗಿದ್ದು, ಇದನ್ನು ಎಲ್ಲಿ ಖರೀದಿಸಿದ್ದೀರಿ ಎಂದು ವಿಚಾರಣೆ ಮಾಡಿದಾಗ, ಮಂಡಿ ಮೊಹಲ್ಲಾದ ವಾಸಿ ಸೈಯದ್ ಮುಜ್ಜು ಎಂಬಾತನಿಂದ 2 ಸಾವಿರ ರೂ.ಗೆ ಖರೀಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಅಲ್ಲದೆ, ಇವರ ಬಳಿಯಿದ್ದ 62 ಗ್ರಾಂ ಗಾಂಜಾವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಳಿಕ ಸಾಡೇ ರಸ್ತೆಯ ಗಲ್ಲಿಯಲ್ಲಿ ಮೀರ್ ಮುಜುಬುದ್ಧೀನ್ ಅಲಿಯಾಸ್ ಸೈಯದ್ ಮುಜ್ಜುನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈತನ ಬಳಿ ಇದ್ದ 49 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡು ಪೊಲೀಸರು, ಈತನ ಮೊಬೈಲ್ ಹಾಗೂ ಸ್ಕೂಟರ್ ಅನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

# ಆತ್ಮ ವಿಶ್ವಾಸ, ಶಿಕ್ಷಣದಿಂದ ಮಹಿಳೆಯರಿಂದ ಸಾಧನೆ ಸಾಧ್ಯ

## ಜಿಲ್ಲಾ ನೋಂದಣಾಧಿಕಾರಿ ಆರ್.ವಿಜಯಲಕ್ಷ್ಮಿ ಅಭಿಮತ



ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಮಾಜ ಸೇವಕರು, ಸತ್ಯವತಿ ವಿಜಯ ರಾಘವ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಪುಷ್ಪ ಅಯ್ಯಂಗಾರ್, ವೈದೇಹಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.24(ಜಿಎ)–ಆತ್ಮ ವಿಶ್ವಾಸ ಮತ್ತು ಶಿಕ್ಷಣವಿದ್ದರೆ ಮಹಿಳೆ ಯರು ಯಾವುದೇ ಸವಾಲನ್ನು ಎದುರಿಸಬಲ್ಲರು ಎಂದು ಜಿಲ್ಲಾ ನೋಂದಣಾಧಿಕಾರಿ ಆರ್.ವಿಜಯಲಕ್ಷ್ಮಿ ಇನಾಂದಾರ್ ತಿಳಿಸಿದರು.

ಮೈಸೂರಿನ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಮತ್ತು ಸಾಧಕಿಯರಿಗೆ ಸನ್ಮಾನ ಹಾಗೂ ವಿಶ್ವ ಮಹಿಳಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆ ಎಂದರೆ ಕೇವಲ ವ್ಯಕ್ತಿಯಲ್ಲ, ಅವಳೊಂದು ಶಕ್ತಿ ಎಂದರು.

ಮಹಿಳೆಯರು ಸಮಾಜದ ಕಣ್ಣುಗಳಿದ್ದಂತೆ. ಅವರ ಸಬಲೀಕರಣದಿಂದ ಮಾತ್ರ ಸದೃಢ ಸಮಾಜ ನಿರ್ಮಾಣ ಸಾಧ್ಯ. ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸುತ್ತಿರುವುದು ಹೆಮ್ಮೆಯ ವಿಷಯ. ಮಹಿಳೆಯರು ಇಂದು ಕೇವಲ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿಲ್ಲ. ಆಡಳಿತ, ಶಿಕ್ಷಣ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನವಾಗಿ ಬೆಳೆಯುತ್ತಿದ್ದಾರೆ ಎಂದು ವಿದ್ಯಾರ್ಥಿನಿಯರಿಗೆ ಸ್ಫೂರ್ತಿ ತುಂಬಿದರು.

ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿನಿಯರು ಕೌಶಲ್ಯವನ್ನು ಬೆಳೆಸಿಕೊಳ್ಳುವ ಅವಶ್ಯಕತೆ ಇದೆ. ವಿದ್ಯಾರ್ಥಿನಿಯರು ಕೇವಲ ಪದವಿ ಪಡೆಯುವುದಷ್ಟೇ ಅಲ್ಲದೆ ಸಮಾಜದಲ್ಲಿ ಗೌರವಯುತ ಸ್ಥಾನ ಪಡೆಯಲು ಶ್ರಮಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರು, ಸತ್ಯವತಿ ವಿಜಯ ರಾಘವ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಪುಷ್ಪ ಅಯ್ಯಂಗಾರ್, ವೈದೇಹಿ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲೆ ಡಾ.ಶಾರದ ಹಾಗೂ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.

# ಮಕ್ಕಳಿಗೆ ವಿಶೇಷ ಅನ್‌ಕ್ಯಾಂಪ್ ಶಿಬಿರ

ಮೈಸೂರು, ಮಾ.24(ಜಿಎ)–ರೋಲ್ ಅಂಡ್ ಡೈಸ್ ಸಂಸ್ಥೆ ವತಿಯಿಂದ ಬೇಸಿಗೆ ರಜಾ ದಿನಗಳ ಹಿನ್ನೆಲೆಯಲ್ಲಿ ಮಕ್ಕಳು ಮನೆಯಲ್ಲೇ ಇದ್ದು, ಪಾಲ್ಗೊಳ್ಳಬಹುದಾದ ಅನ್‌ಕ್ಯಾಂಪ್ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥೆ ತನುಶ್ರೀ ಎಸ್.ಎನ್. ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಮಕ್ಕಳ ವಯೋಮಿತಿ ಆಧರಿಸಿದ 14ರಿಂದ 21 ದಿನಗಳ ಮಾರ್ಗದರ್ಶಿತ್ವದ ಕಾರ್ಯಕ್ರಮವಾಗಿದೆ. ಇದರಲ್ಲಿ ಮಕ್ಕಳಿಗೆ ಪ್ರತಿದಿನ ಸರಳ ಮತ್ತು ಆಸಕ್ತಿದಾಯಕ ಚಟುವಟಿಕೆ ನೀಡಲಾಗು ತ್ತದೆ. ಮಕ್ಕಳು ಈ ಚಟುವಟಿಕೆಗಳಲ್ಲಿ ಪ್ರತಿದಿನ ತಮ್ಮ ಕುಟುಂಬದವರೊಂದಿಗೆ ಪಾಲ್ಗೊಳ್ಳಬಹುದಾಗಿದೆ. 8ರಿಂದ 14 ವರ್ಷ ಹಾಗೂ 4ರಿಂದ 8 ವರ್ಷದೊಳ ಗಿನ ಮಕ್ಕಳಿಗೆ ಪ್ರತ್ಯೇಕ ರೀತಿಯ ಚಟು ವಟಿಕೆ ಇರಲಿವೆ. ಏ.1ರಿಂದ ಶಿಬಿರ ಪ್ರಾರಂಭವಾಗಲಿದ್ದು, ಮಾಹಿತಿಗೆ ತಮ್ಮನ್ನು ಮೊ. 80889 32576ರ ಮೂಲಕ ಸಂಪರ್ಕಿಸಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಗೀತಾಶ್ರೀ, ಶಶಿಶೇಖರ್ ಉಪಸ್ಥಿತರಿದ್ದರು.


# ಅರಣ್ಯ ಇಲಾಖೆ ಸಿಬ್ಬಂದಿ ವಿರುದ್ಧ ಹಲ್ಲೆ ಆರೋಪ; ಪ್ರಕರಣ ದಾಖಲು

ಮೈಸೂರು, ಮಾ.24(ಪಿಎಂ)–ಪತ್ರಿಕೆಯೊಂದರ ವರದಿಗಾರನ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಹಲ್ಲೆ ನಡೆಸಿದ ಆರೋಪದಡಿ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹುಣಸೂರು ತಾಲೂಕು ಕೊಳಘಟ್ಟ ಗ್ರಾಮದ ನಿವಾಸಿ ಹಾಗೂ ವರದಿಗಾರ ವಿಶಾಂತ್ (30) ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದು, ಇದರನ್ವಯ ಪ್ರಕರಣ ದಾಖಲಾಗಿದೆ. ಮಾ.22ರಂದು ರಾತ್ರಿ 9.30ರ ಸಮಯದಲ್ಲಿ ನಾನು ಕೊಳಘಟ್ಟ ಗ್ರಾಮಕ್ಕೆ ತೆರಳಲು ಹುಣಸೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಮೂಡಲಕೊಪ್ಪಲು ಮಧ್ಯದಲ್ಲಿ ಮಾದಳ್ಳಿ ಮಠದ ರಸ್ತೆಯ ಮಾರ್ಗವಾಗಿ ಹೋಗುವಾಗ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ 3 ಆನೆಗಳನ್ನು ಎರಡು ಲಾರಿಗಳಲ್ಲಿ ರಸ್ತೆಯಲ್ಲಿಯೇ ನಿಲ್ಲಿಸಿಕೊಂಡು ಮದ್ಯಪಾನ ಮಾಡುತ್ತಿದ್ದರು ಎಂದು ವಿಶಾಂತ್ ದೂರಿನಲ್ಲಿ ಆರೋಪಿಸಿದ್ದಾರೆ.

ಮದ್ಯಪಾನ ಮಾಡುತ್ತಿದ್ದ ದೃಶ್ಯ ವಿಡಿಯೋ ಚಿತ್ರೀಕರಣ ಮಾಡುವಾಗ ಒಬ್ಬನೇ ಇದ್ದ ನನ್ನ ಮೇಲೆ ಏಕಾಏಕಿ ಹತ್ತಾರು ಸಿಬ್ಬಂದಿ ಒಟ್ಟಾಗಿ ಹಲ್ಲೆ ನಡೆಸಿದರು. ಅಲ್ಲದೆ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಆನೆಯಿಂದ ತುಳಿಸಿ ಸಾಯಿಸಿ ಯಾವುದೇ ಕೇಸ್ ಇಲ್ಲದಂತೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. ಆಗ ಅದೇ ರಸ್ತೆಯಲ್ಲಿ ಓಡಾಡುತ್ತಿದ್ದ ಅಪರಿಚಿತ ವ್ಯಕ್ತಿಗಳು ನನ್ನನ್ನು ರಕ್ಷಣೆ ಮಾಡಿದರು. ಈ ಸ್ಥಳದಲ್ಲಿ ಸಿಬ್ಬಂದಿಯ ಎರಡು ಜೀಪ್‌ಗಳು ಸಹ ಇದ್ದವು. ನನ್ನಿಂದ ಬಲವಂತವಾಗಿ ಮೊಬೈಲ್ ಅನ್ನು ಕಿತ್ತುಕೊಂಡು ಸಾಕ್ಷಿ ನಾಶ ಮಾಡಿದ್ದಾರೆ ಎಂದು ವಿಶಾಂತ್ ದೂರಿನಲ್ಲಿ ಆಪಾದಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

25.3.2026 ಬುಧವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ –ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಮೃತಾ ನಿತಿನ್ ಶಾಸ್ತ್ರಿ ಮತ್ತು ಸಿ.ವಿಶ್ವನಾಥ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಅಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಉಸ್ತಾದ್ ಬಿಸ್ಮಿಲ್ಲ ಖಾನ್ – ಶೆಹನಾಯ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜಿ. ಎನ್. ಬಾಲಸುಬ್ರಹ್ಮಣ್ಯಂ – ಹಾಡುಗಾರಿಕೆ, 4.00 ಮಹಿಳಾರಂಗ ನಾಟಕ ನಾವೂ ಸೂಪರ್ ವುಮೆನ್ನೇ!?, ರಚನೆ–ನೇತ್ರಾ . ಕೆ, ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್ .ಬಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಈಶ್ವರ ಭಟ್‌ಎಸ್., 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸ್ ಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಬಳಕೆಗೆ ನೇರ ಲಭ್ಯವಿರುವ ಕಟ್ಟಡ ನಿರ್ಮಾಣ ಸಾಮಾಗ್ರಿಗಳು ಭಾಗವಹಿಸುತ್ತಾರೆ ಮೈಸೂರಿನ ಪ್ರಮೂರ್ ಗ್ರೂಪ್ ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕರಾದ ಎಸ್. ಪ್ರಕಾಶ್, ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ ಕೃಷಿ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಕೃಷಿ ನವೋದ್ಯಮಗಳ ಪಾತ್ರ ಈ ಕುರಿತು ಮಾತನಾಡುತ್ತಾರೆ ಮೈಸೂರಿನ ಅಗ್ರಿಯಾನ ಟೂರಿಸಂ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರದ ಆರ್. ಎಸ್. ನವೀನ್., ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ವಿಧಾನ ಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಕರ್ನಾಟಕ ಶಾಸ್ತ್ರೀಯ ಸಂಗೀತ, ದಿಂಡಿಗಲ್ ನಟರಾಜ್ ಎಸ್.ಪಿ. – ವೇಣುವಾದನ, 9.30 ಕ್ರೀಡಾಲೋಕ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಕಿಡ್ನಿ ತಪಾಸಣೆ ಶಿಬಿರ, ಬೆಳಗ್ಗೆ 9.30 ರಿಂದ ಮೈಗ್ರೇನ್ ಮತ್ತು ಯಾವುದೇ ತರಹದ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಅನ್ನಪೂರ್ಣ ಐ ಹಾಸ್ಪಿಟಲ್ :** ಯುಗಾದಿ ಮತ್ತು ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ :** ಶ್ರೀಮತಿ ಪದ್ಮಜಾ ಪ್ರಸಾದ್ ಸ್ಮಾರಕ ಅಂತರ ಕಾಲೇಜು ಸಂಗೀತ ಸ್ಪರ್ಧೆ, ಉದ್ಘಾಟನೆ : ಪಿಪಿಎಂಎಫ್ ಮ್ಯಾನೇಜಿಂಗ್ ಟ್ರಸ್ಟಿ ಎನ್.ಎನ್. ಪ್ರಸಾದ್, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಆರ್.ಎನ್. ಪದ್ಮನಾಭ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಸಮಿತಿ ಸಂಚಾಲಕ ಪ್ರೊ. ರಾಚಯ್ಯ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ :** 46ನೇ ವಾರ್ಷಿಕೋತ್ಸವ, ನವೋನ್ಮೇಷ, ದಿವ್ಯಾಶೀರ್ವಾದ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಎಸ್.ಪಿ. ಉಮಾದೇವಿ, ಉಜ್ವಲ ವಾರ್ಷಿಕ ಸಂಚಿಕೆ ಬಿಡುಗಡೆ : ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಕೆ.ಜಿ. ಬಸವಕುಮಾರ, ಅಧ್ಯಕ್ಷತೆ : ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ವಿ.ಬಿ. ಲೋಕೇಶ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಧ್ವನಿ ಮಹಿಳಾ ಒಕ್ಕೂಟ** : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಕಾಳಚನ್ನೇಗೌಡ, ಉದ್ಘಾಟನೆ : ಮಾಜಿ ಮೇಯರ್ ಶ್ರೀಮತಿ ಪುಷ್ಪವಲ್ಲಿ, ಅಧ್ಯಕ್ಷತೆ : ಒಕ್ಕೂಟದ ಗೌರವ ಅಧ್ಯಕ್ಷೆ ಶ್ರೀಮತಿ ಶೋಭಾ, ಸ್ಥಳ: ಪುರಭವನ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ** : ವಿಶ್ವ ಗ್ಲುಕೋಮಾ ಸಪ್ತಾಹ ಗ್ಲುಕೋಮಾ ಜಾಗೃತಿ ಅಭಿಯಾನ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಅತಿಥಿಗಳು : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ. ಎಚ್. ಬಸವನಗೌಡಪ್ಪ, ನಿರ್ದೇಶಕ ಆರ್. ಮಹೇಶ್, ನಿರ್ದೇಶಕ ಡಾ. ಸಿ.ಪಿ. ಮಧು, ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್** : ಬರಗೂರು : ಬಹುತ್ವದ ಬೇರು ಸೌಹಾರ್ದ ಬದುಕಿನ ಆಶಯಗಳ ಚಿಂತನ ಒಂದು ದಿನದ ವಿಚಾರ ಸಂಕಿರಣ, ಉದ್ಘಾಟನೆ : ಚಲನಚಿತ್ರ ನಟಿ ಭಾವನಾ ರಾಮಣ್ಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಟ್ರಸ್ಟ್ ಖಜಾಂಚಿ ಶ್ರೀಮತಿ ಲತಾ, ಸ್ಥಳ:ಬಿ.ಎಂ. ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.45ಕ್ಕೆ.

■ **ಮಹಾರತ್ನ ಟ್ರಸ್ಟ್** : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗೆ ಸಾಂಸ್ಕೃತಿಕ ಮತ್ತು ವಿವಿಧ ಆಟೋಟಗಳ ಸ್ಪರ್ಧೆ, ಉದ್ಘಾಟನೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಮುಖ್ಯ ಅತಿಥಿಗಳು : ಗಾಯಕಿ ಶ್ರೀಮತಿ ಆಶಾ ಅರುಂಧತಿ, ಅಧ್ಯಕ್ಷತೆ : ಟ್ರಸ್ಟ್ ಗೌರವಾಧ್ಯಕ್ಷ ಸಿ.ವಿ. ಪಾರ್ಥಸಾರಥಿ, ಉಪಸ್ಥಿತರು : ಹಿನ್ನೆಲೆ ಗಾಯಕ ಎಂ. ಮೈಸೂರು ಮಹಾಲಿಂಗ, ಶ್ರೀಮತಿ ರೂಪ, ಶ್ರೀಮತಿ ಎಂ. ನಾಗರತ್ನ, ಸ್ಥಳ: ಬಸವ ಸಮಿತಿ ಸಭಾಂಗಣ (ಕೊಡವ ಸಮಾಜದ ಪಕ್ಕ), ವಿಜಯನಗರ 1ನೇ ಹಂತ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ರಾಮಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ** : 32ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ಸುದಿತಿ–ರೂಪನಗುಡಿ ರತ್ನ ತೇಜ – ಸುಹಾಸ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದ್ವಾನ್ ಸಿಕ್ಕಿಲ್ ಗುರುಚರಣ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ –ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ. ಗುರುಪ್ರಸನ್ನ–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು** : ರಾಮೋತ್ಸವ ಕಾರ್ಯಕ್ರಮ, ವಿದುಷಿ ಡಾ. ನಾಗಲಕ್ಷ್ಮಿ ನಾಗರಾಜನ್ ಮತ್ತು ಶಿಷ್ಯ ವೃಂದದವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣ, ಸಂಜೆ 6 ರಿಂದ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್** : ಏಳನೇ ರಾಮೋತ್ಸವ, ಸಂಜೆ 6.30 ರಿಂದ ಸ್ವರಾಂಜಲಿ ಸಂಗೀತ ಶಾಲೆಯ ತಂಡದವರಿಂದ ದೇವರ ನಾಮಗಳು, ಸಂಜೆ 7 ರಿಂದ ವಿದುಷಿ ಶ್ರೀಮತಿ ಕೃಪಾ ಫಡ್ಕೆ ಮತ್ತು ತಂಡದವರಿಂದ ಭಾವಯಾಮಿ ರಘುರಾಮ್ ನೃತ್ಯ ವೈಭವ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ ಬ್ಲಾಕ್ ರಾಮಕೃಷ್ಣನಗರ.

# ಬಿರ್ಲಾ ಗ್ರೂಪ್‌ಗೆ 16,600 ಕೋಟಿಗೆ ಮಾರಾಟವಾದ ಆರ್‌ಸಿಬಿ!

**ಬೆಂಗಳೂರು:** ಐಪಿಎಲ್ 2025ರ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬರೋಬ್ಬರಿ 1.78 ಬಿಲಿಯನ್ ಡಾಲರ್ (ಸುಮಾರು 16,600 ಕೋಟಿ) ಮೊತ್ತಕ್ಕೆ ಮಾರಾಟವಾಗುವ ಮೂಲಕ ಹೊಸ ದಾಖಲೆ ಬರೆದಿದೆ. ಪ್ರಸ್ತುತ ಮಾಲೀಕರಾದ ಡಿಯಾಜಿಯೊ ಸಂಸ್ಥೆಯಿಂದ ಈ ತಂಡವನ್ನು ಪ್ರಮುಖ ಹೂಡಿಕೆದಾರರ ಒಕ್ಕೂಟವು ಖರೀದಿಸಿದೆ. ಆದಿತ್ಯ ಬಿರ್ಲಾ ಗ್ರೂಪ್, ಟೈಮ್ಸ್ ಆಫ್ ಇಂಡಿಯಾ ಗ್ರೂಪ್, ಬೋಲ್ಟ್ ವೆಂಚರ್ಸ್ ಮತ್ತು ಅಮೆರಿಕದ ಖಾಸಗಿ ಇಕ್ವಿಟಿ ದೈತ್ಯ ಬ್ಲ್ಯಾಕ್‌ಸ್ಟೋನ್ ಈ ತಂಡವನ್ನು ಜಂಟಿಯಾಗಿ ಖರೀದಿಸಿವೆ.

16,600 ಕೋಟಿ ರೂ. ಮೊತ್ತದ ಈ ಒಪ್ಪಂದವು ಐಪಿಎಲ್ ಇತಿಹಾಸದಲ್ಲೇ ಅತ್ಯಂತ ದುಬಾರಿ ಫ್ರಾಂಚೈಸಿ ಎಂಬ ಹೆಗ್ಗಳಿಕೆಗೆ ಆರ್‌ಸಿಬಿಯನ್ನು ಪಾತ್ರವಾಗಿಸಿದೆ. ಆರ್ಯಮಾನ್ ವಿಕ್ರಮ್ ಬಿರ್ಲಾ ಅವರು ಈ ಹೊಸ ಮಾಲೀಕತ್ವದ ಅಡಿಯಲ್ಲಿ ತಂಡದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ. ಐಪಿಎಲ್ 2026ರ ಸೀಸನ್ ಮುಗಿದ ನಂತರ ಈ ಹೊಸ ಮಾಲೀಕತ್ವವು ಅಧಿಕೃತವಾಗಿ ಜಾರಿಗೆ ಬರಲಿದೆ. ಅಲ್ಲಿಯವರೆಗೆ ಡಿಯಾಜಿಯೊ ಸಂಸ್ಥೆಯೇ ತಂಡದ ಜವಾಬ್ದಾರಿಯನ್ನು ಮುಂದುವರಿಸಲಿದೆ ಈ ಒಪ್ಪಂದವು ಕೇವಲ ಪುರುಷರ ತಂಡಕ್ಕೆ ಸೀಮಿತವಾಗಿಲ್ಲ ಆರ್‌ಸಿಬಿ ಮಹಿಳಾ ತಂಡವನ್ನೂ ಇದೇ ಒಕ್ಕೂಟವು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಕಳೆದ 2 ದಶಕಗಳಲ್ಲಿ, ಐಪಿಎಲ್ ಜಾಗತಿಕ ಕ್ರೀಡಾ ಶಕ್ತಿ ಕೇಂದ್ರವಾಗಿ ಮಾರ್ಪಟ್ಟಿದೆ, ಇದು ಭಾರತೀಯ ಕ್ರಿಕೆಟ್‌ನ ಮುಖವನ್ನೇ ಬದಲಿಸಿದೆ, ಭಾರತಕ್ಕೆ ಅಗಾಧ ಮೌಲ್ಯವನ್ನು ಸೃಷ್ಟಿಸಿದೆ. ಆಧುನಿಕ ಕ್ರೀಡೆಯಲ್ಲಿ ಅತ್ಯಂತ ಪ್ರಭಾವಶಾಲಿ ಫ್ರಾಂಚೈಸಿಗಳಲ್ಲಿ ಒಂದಾದ ಆರ್‌ಸಿಬಿ, ಆದಿತ್ಯ ಬಿರ್ಲಾ ಗ್ರೂಪ್‌ಗೆ ತನ್ನ ಸಂಸ್ಥೆ–ನಿರ್ಮಾಣದ ಪರಂಪರೆಯನ್ನು ಜಾಗತಿಕ ಕ್ರೀಡಾ ಕ್ಷೇತ್ರಕ್ಕೆ ವಿಸ್ತರಿಸಲು ಒಂದು ವಿಶಿಷ್ಟ ವೇದಿಕೆಯನ್ನು ನೀಡುತ್ತದೆ. ಈ ಆಸ್ತಿಯ ಪಾಲಕರಾಗಲು ನಾವು ಸಂತೋಷ ಪಡುತ್ತೇವೆ ಮತ್ತು ಈ ಅಸಾಧಾರಣ ಪರಂಪರೆಯನ್ನು ಮತ್ತಷ್ಟು ನಿರ್ಮಿಸಲು ಬದ್ಧರಾಗಿದ್ದೇವೆ" ಎಂದು ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷ ಕುಮಾರ್ ಮಂಗಲಂ ಬಿರ್ಲಾ ಹೇಳಿದ್ದಾರೆ.

# ನಾಳೆ ವಿದ್ಯಾವರ್ಧಕ ಸಂಘದಿಂದ ಅಭಿನಂದನಾ ಸಮಾರಂಭ


ಪಿ.ವಿಶ್ವನಾಥ್


ಡಾ.ಗುರುಮೂರ್ತಿ


ಮೈಸೂರು, ಮಾ.24– ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಅತ್ಯುನ್ನತ 'ಸಿಲ್ವರ್ ಎಲಿಫೆಂಟ್' ಪ್ರಶಸ್ತಿಗೆ ಭಾಜನರಾಗಿರುವ ಪಿ.ವಿಶ್ವನಾಥ್ ಹಾಗೂ ಡಾ.ಕೆ.ಬಿ.ಗುರುಮೂರ್ತಿ ಅವರಿಗೆ ಮಾ.26ರಂದು ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ.

ನಗರದ ಗೋಕುಲಂ 3ನೇ ಹಂತದಲ್ಲಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆವರಣದ ಸಾಹುಕಾರ್ ಚನ್ನಯ್ಯ ಸಭಾಂಗಣದಲ್ಲಿ ಅಂದು ಮಧ್ಯಾಹ್ನ 3.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕದ ಮುಖ್ಯ ಆಯುಕ್ತರಾದ ಮಾಜಿ ಸಚಿವ ಡಾ.ಪಿಜಿಆರ್ ಸಿಂಧ್ಯಾ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಉಪಾಧ್ಯಕ್ಷ ಬಿ.ಶಿವಲಿಂಗಪ್ಪ, ಖಜಾಂಚಿ ಶ್ರೀಶೈಲ ರಾಮಣ್ಣವರ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

**ಅಭಿನಂದಿತರ ಸಂಕ್ಷಿಪ್ತ ವಿವರ:** **ಪಿ.ವಿಶ್ವನಾಥ್:** ಶಿಕ್ಷಣ ತಜ್ಞ ಹಾಗೂ ಮಾಜಿ ಸಚಿವ ಕೆ.ಪುಟ್ಟಸ್ವಾಮಿ ಹಾಗೂ ಶ್ರೀಮತಿ ಜಯಲಕ್ಷ್ಮಮ್ಮ ಅವರ ಸುಪುತ್ರರಾಗಿ 1949ರ ಮೇ 10ರಂದು ಜನಿಸಿದ ಪಿ.ವಿಶ್ವನಾಥ್ ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರು. ಪ್ರತಿಭಾನ್ವಿತ ಶಿಕ್ಷಣ ತಜ್ಞ, ಆಡಳಿತಗಾರ, ಇಂಜಿನಿಯರ್, ಕೈಗಾರಿಕೋದ್ಯಮಿ, ಸಮಾಜ ಸೇವಕರಾಗಿ ಗುರುತಿಸಿಕೊಂಡಿರುವ ಇವರು, ತಮ್ಮ 34ನೇ ವಯಸ್ಸಿನಲ್ಲೇ ಮೈಸೂರು ಮಹಾನಗರ ಪಾಲಿಕೆಯ ಪ್ರಥಮ ಮೇಯರ್ ಆಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಪಡೆದಿದ್ದಾರೆ. ಮೈಸೂರು ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷರಾಗಿ, ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿ, ಮೈಸೂರಿನ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿಯಾಗಿ, ಬೇಡೆನ್ ಪೊವೆಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಜಿಲ್ಲೆ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಜವಾಬ್ದಾರಿಗಳನ್ನು ನಿರ್ವಹಿಸಿ, 2015ರಲ್ಲಿ 'ಸಿಲ್ವರ್ ಸ್ಟಾರ್' ಹಾಗೂ 2025ರಲ್ಲಿ 'ಸಿಲ್ವರ್ ಎಲಿಫೆಂಟ್' ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಡಾ.ಕೆ.ಬಿ.ಗುರುಮೂರ್ತಿ:** ಸ್ಕೌಟ್ಸ್ ಅಂಡ್ ಗೈಡ್ಸ್ ಅಭಿಯಾನದ ಮುಂಚೂಣಿ ನಾಯಕರಾಗಿದ್ದ ಶ್ರೀ ಕೊಂಡಜ್ಜಿ ಬಸಪ್ಪ ಮತ್ತು ಶ್ರೀಮತಿ ಸರ್ವಮಂಗಳಮ್ಮನವರ ಪುತ್ರರಾಗಿ 1945ರ ಜೂನ್ 2ರಂದು ಜನಿಸಿದ ಡಾ.ಕೆ.ಬಿ.ಗುರುಮೂರ್ತಿಯವರು, ವೃತ್ತಿಯಲ್ಲಿ ವೈದ್ಯರಾಗಿ, ಪ್ರಾಧ್ಯಾಪಕರಾಗಿ, ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ವೈದ್ಯಕೀಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಬೇಡನ್ ಪೊವೆಲ್ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿಯಲ್ಲಿ ಹಾಲಿ ಕಾರ್ಯದರ್ಶಿಯಾಗಿರುವ ಇವರು, ಮೈಸೂರಿನ ರೆಡ್‌ಕ್ರಾಸ್ ಸೊಸೈಟಿ ಅಧ್ಯಕ್ಷರಾಗಿ, ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಖಜಾಂಚಿಯಾಗಿ, ಜಿಲ್ಲಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ಇವರಿಗೂ 2016ರಲ್ಲಿ 'ಸಿಲ್ವರ್ ಸ್ಟಾರ್', 2025ರಲ್ಲಿ 'ಸಿಲ್ವರ್ ಎಲಿಫೆಂಟ್' ರಾಷ್ಟ್ರೀಯ ಪ್ರಶಸ್ತಿ ಸಂದಿವೆ.

# ಅಮೂಲ್ಯ ನೆನಪುಗಳ ಫ್ರೇಂ....



**–ಆರ್.ಜಿ.ಸಿಂಗ್**
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ

ಮೈಸೂರು ರಾಜವಂಶದ ಸವಿನೆನಪು

ರಾಜ ದಂಪತಿಗಳಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮಹಾರಾಣಿ ಪ್ರತಾಪ ಕುಮಾರಿ ಲಕ್ಷ್ಮೀ ವಿಲಾಸ ಸನ್ನಿಧಾನ ಅವರ ಅಧಿಕೃತ ವಿವಾಹದ ತೈಲವರ್ಣ ಚಿತ್ರ ಇದಾಗಿದ್ದು, ಇದು ರಾಜಾ ರವಿವರ್ಮ ಅವರ ಕುಂಚದಲ್ಲಿ ಮೂಡಿಬಂದಿದೆ. ಕ್ಯಾನ್ವಾಸ್ ಮೇಲೆ ಒಡಮೂಡಿರುವ ಈ ಚಿತ್ರವು ಮೈಸೂರು ರಾಜಮನೆತನದ ಸಂಗ್ರಹದಲ್ಲಿದೆ. ಈ ಚಿತ್ರವು ಜರ್ಮನಿಯಲ್ಲಿ ಮುದ್ರಿಸಲಾದ **61x76** ಸೆಂ.ಮೀ. ಗಾತ್ರದ ಕ್ರೋಮೋಲಿಥೋಗ್ರಾಫ್ ಬಹು ಬಣ್ಣದಲ್ಲಿ ಮುದ್ರಿತವಾಗಿದೆ (ಮೂರು ಗಾತ್ರಗಳಲ್ಲಿ). ಈ ಅಪರೂಪದ ಚಿತ್ರವನ್ನು ಇಂದಿಗೂ ಮೈಸೂರಿನ ಭಜನಾ ಮಂದಿರಗಳು ಮತ್ತು ಶ್ರೀಮಂತರ ನಿವಾಸಗಳಲ್ಲಿ ಕಾಣಬಹುದು. ಈ ರಾಜ ವಿವಾಹವು ಜೂನ್ **6**ರ **1900**ರಂದು ಜಗನ್ಮೋಹನ ಅರಮನೆಯಲ್ಲಿ ನಡೆಯಿತು. ಮುಖ್ಯ ಅರಮನೆ ನಿರ್ಮಾಣ ಹಂತದಲ್ಲಿದ್ದ ಕಾರಣ ಈ ಮದುವೆಗಾಗಿ ಇಲ್ಲಿ ದೊಡ್ಡ ಸಭಾಂಗಣ ನಿರ್ಮಿಸಲಾಗಿತ್ತು. ಈ ಚಿತ್ರದಲ್ಲಿ ಹದಿನಾರು ವರ್ಷದ ಮಹಾರಾಜರು ಹಾಗೂ ಹನ್ನೊಂದು ವರ್ಷದ ಅವರ ಸಂಗಾತಿಯನ್ನು ಕಾಣಬಹುದು. ಕನ್ನಡದಲ್ಲಿದ್ದ ಆಮಂತ್ರಣ ಪತ್ರಿಕೆಯಲ್ಲಿ ವಧುವಿನ ಹೆಸರನ್ನು ಚಿ.ಸೌ.ಕು. ಪ್ರತಾಪ್ ಕುವರಿ ಎಂದು ಬರೆಯಲಾಗಿತ್ತು. ಅವರು ಝಾಲಾ ರಾಣಾ ವಿನಯ್ ಸಿಂಹ ಅವರ ಪುತ್ರಿ (ವಿನಯ್ ಸಿಂಹ ಅವರು ಸೌರಾಷ್ಟ್ರದ ಪರ್ಮಾರ್ ರಜಪೂತರ ಕುಟುಂಬಕ್ಕೆ ಸೇರಿದವರು). ಆದರೆ, ಹಯವದನ ರಾವ್ ಅವರ 'ಹಿಸ್ಟರಿ ಆಫ್ ಮೈಸೂರ್'ನಲ್ಲಿನ ಅಧಿಕೃತ ಆವೃತ್ತಿಯು ಮಹಾರಾಣಿ ಪ್ರತಾಪ ಕುಮಾರಿ ಅಮ್ಮಣ್ಣಿ ಅವರು ಲಕ್ಷ್ಮೀ ವಿಲಾಸ ಸನ್ನಿಧಾನ (ಜನನ **1889**) ಅವರು ಪಶ್ಚಿಮ ಭಾರತದ ಕಥಿಯಾವರ್ ಪ್ರದೇಶದ ಮುಳಿಯ ರಾಣಾ ಸಾಹಿಬ್, ರಾಣಾ ಶ್ರೀ ಬನೆ ಸಿನ್ಜ್ ಜಿ ಸಾಹೇಬ್ ಅವರ ಕಿರಿಯ ಪುತ್ರಿ ಎಂದು ಹೇಳುತ್ತದೆ.

# ಶಿಕ್ಷಣ ಇಲಾಖೆ ಆಡಳಿತಾತ್ಮಕ ಕಚೇರಿಗಳಿಗೆ ಅನುದಾನ ಲಭ್ಯತೆ ಅನುಸಾರ ಸ್ವಂತ ಕಟ್ಟಡ ಭಾಗ್ಯ

## ಎಂಎಲ್ಸಿ ಕೆ.ವಿವೇಕಾನಂದರಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ

ಮೈಸೂರು, ಮಾ.24– ಶಾಲಾ–ಕಾಲೇಜು ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಇಲಾಖೆ ಆಡಳಿತಾತ್ಮಕ ಕಚೇರಿಗಳಿಗೆ ಅನುದಾನ ಲಭ್ಯತೆ ಅನುಸಾರ ಪ್ರತ್ಯೇಕ ಹೊಸ ಕಟ್ಟಡ ನಿರ್ಮಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಸದಸ್ಯ ಕೆ.ವಿವೇಕಾನಂದ ಅವರು, ರಾಜ್ಯದಲ್ಲಿರುವ ಶಾಲಾ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ಕಚೇರಿಗಳ ಒಟ್ಟು ಸಂಖ್ಯೆ, ಎಷ್ಟು ಸ್ವಂತ ಕಟ್ಟಡಗಳಲ್ಲಿವೆ, ಎಲ್ಲಾ ಕಚೇರಿಗಳಿಗೂ ಪ್ರತ್ಯೇಕ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನಿಸಿದ ಹಿನ್ನೆಲೆಯಲ್ಲಿ ಸಚಿವರು ಈ ಸಂಬಂಧ ಪೂರ್ಣ ವಿವರ ನೀಡಿದರು.

ರಾಜ್ಯಾದ್ಯಂತ 31 ಡಿಡಿಪಿಐ, 204 ಬಿಇಓ ಹಾಗೂ 204 ಬಿಆರ್‌ಸಿ ಕಚೇರಿಗಳಿವೆ. ಇವುಗಳಲ್ಲಿ 25 ಡಿಡಿಪಿಐ, 150 ಬಿಇಓ ಹಾಗೂ 183 ಬಿಆರ್‌ಸಿ ಕಚೇರಿಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ


ಕೆ.ವಿವೇಕಾನಂದ


ಮಧು ಬಂಗಾರಪ್ಪ

ನಿರ್ವಹಿಸುತ್ತಿವೆ. 4 ಡಿಡಿಪಿಐ, 50 ಬಿಇಓ ಹಾಗೂ 25 ಬಿಆರ್‌ಸಿ ಕಚೇರಿಗಳು ಶಾಲಾ ಕಟ್ಟಡಗಳಲ್ಲಿದ್ದು, ಇವುಗಳಿಗೆ ಅನುದಾನದ ಲಭ್ಯತೆಯನುಸಾರ ಪರಿಶೀಲಿಸಿ, ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ದಕ್ಷಿಣ ಶಿಕ್ಷಕರ ಕ್ಷೇತ್ರದ ವಿವರ:** ಕ್ಷೇತ್ರ ವ್ಯಾಪ್ತಿಯ ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಡಿಡಿಪಿಐ ಕಚೇರಿಗಳು ಸ್ವಂತ ಕಟ್ಟಡದಲ್ಲಿದ್ದು, ಚಾಮರಾಜನಗರದಲ್ಲಿ ಜಿಲ್ಲಾಡಳಿತ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಾಗೆಯೇ ಮೈಸೂರಿನ 6 ಬಿಇಓ ಹಾಗೂ 9 ಬಿಆರ್‌ಸಿ ಕಚೇರಿಗಳು ಸ್ವಂತ ಕಟ್ಟಡದಲ್ಲಿದ್ದು, ಮೂರು ಬಿಇಓ ಕಚೇರಿಗಳು ಶಾಲಾ–ಕಾಲೇಜು ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಚಾಮರಾಜನಗರ ಜಿಲ್ಲೆಯ 1 ಬಿಇಓ ಕಚೇರಿ ಶಾಲಾ ಕಟ್ಟಡದಲ್ಲಿದೆ. ಉಳಿದಂತೆ ಹಾಸನ ಹಾಗೂ ಮಂಡ್ಯದ ಎಲ್ಲಾ ಬಿಇಓ ಹಾಗೂ ಬಿಆರ್‌ಸಿ ಕಚೇರಿಗಳು ಸ್ವಂತ ಕಟ್ಟಡದಲ್ಲಿವೆ.

# ಪ್ಲೈವುಡ್ ಮಳಿಗೆಯಲ್ಲಿ ಬೆಂಕಿ ಅವಘಡ

ಮೈಸೂರು,ಮಾ.24(ಪಿಎಂ)– ಶಾರ್ಟ್ ಸರ್ಕ್ಯೂಟ್ ಪರಿಣಾಮ ಅಗ್ನಿ ಅವಘಡ ಸಂಭವಿಸಿ ಪ್ಲೈವುಡ್ ಸೇರಿದಂತೆ ಇನ್ನಿತರ ಸಾಮಗ್ರಿಗಳಿಗೆ ಹಾನಿಯಾಗಿರುವ ಘಟನೆ ಜಯಲಕ್ಷ್ಮೀಪುರಂನ ಸಾಹಿತ್ಯ ಭವನ ರಸ್ತೆಯ ಕುವೆಂಪು ಟ್ರಸ್ಟ್ ಬಿಲ್ಡಿಂಗ್‌ನಲ್ಲಿರುವ ವಾಸು ಪ್ಲೈ ಅಂಡ್ ಹಾರ್ಡ್‌ವೇರ್ ಮಳಿಗೆಯಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.



ದಟ್ಟ ಹೊಗೆ ಆವರಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಆರಂಭದಲ್ಲಿ ಆತಂಕ ಸೃಷ್ಟಿಯಾಗಿ ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸಿದ್ದರು. ವಿಷಯ ತಿಳಿದು ವಾಹನಗಳ ಸಮೇತ ಸ್ಥಳಕ್ಕಾಗಮಿಸಿದ ಹೆಬ್ಬಾಳ ಮತ್ತು ಸರಸ್ವತಿಪುರಂ ಅಗ್ನಿಶಾಮಕ ಠಾಣೆಗಳ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಚಂದನ್, ಡಿಎಫ್‌ಓ ರಮೇಶ್, ಅಗ್ನಿಶಾಮಕ ಠಾಣಾಧಿಕಾರಿಗಳಾದ ಲಕ್ಷ್ಮಿಕಾಂತ ಯಾದವ್, ನಾಗರಾಜಪ್ಪ ಸೇರಿದಂತೆ ಇತರೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಗಿಡ ನೆಟ್ಟು ಯದುವೀರ್ ಹುಟ್ಟುಹಬ್ಬ



ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜನ್ಮದಿನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ನೇತೃತ್ವದಲ್ಲಿ ಶಾರದಾದೇವಿ ನಗರ ವೃತ್ತದ ಉದ್ಯಾನವನದಲ್ಲಿ ಗಿಡ ನೆಟ್ಟು, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಸಿಎಫ್‌ಟಿಆರ್‌ಐ ಬಡಾವಣೆ ಅಧ್ಯಕ್ಷ ಕರುಣ, ನಿವೇದಿತಾ ನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ ಶಿವಪ್ರಸಾದ್, ಮುಖಂಡರಾದ ಅಮೃತ, ಆಶಾ, ಬಸವರಾಜು, ಮಹಾದೇವ, ದ್ವಾರಕನಾಥ್, ಶ್ರೀನಿವಾಸ್, ಮೋಹನ್ ಕುಮಾರ್, ಪ್ರಸನ್ನ ಕುಮಾರ್, ಲೋಹಿತ್ ಶರ್ಮಾ, ರಘು ಮತ್ತು ನಿಶ್ಚಿತ್ ಮತ್ತಿತರರಿದ್ದರು.

# ವೇತನ ವಿಳಂಬ ಖಂಡಿಸಿ ಬಂಡೀಪುರದಲ್ಲಿ ಏ.1ರಿಂದ ಅರಣ್ಯ ಸಿಬ್ಬಂದಿ ಮುಷ್ಕರ

ಬೆಂಗಳೂರು, ಮಾ.24– ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ಪಾವತಿಸುವುದೂ ಸೇರಿದಂತೆ ತಮ್ಮ ಹಲವು ಬೇಡಿಕೆ ಮುಂದಿಟ್ಟು ಏ.1ರಿಂದ ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ಉಪಾಧ್ಯಕ್ಷ ಎಸ್.ಎಸ್. ಹರೀಶ್, ಈ ಮಾಹಿತಿ ನೀಡಿದ್ದು, ರಾಜ್ಯದಲ್ಲಿ ಸುಮಾರು 6,000 ತಾತ್ಕಾಲಿಕ ಸಿಬ್ಬಂದಿ ಇದ್ದಾರೆ. ಇವರಲ್ಲಿ 4,000ಕ್ಕೂ ಹೆಚ್ಚು ಮಂದಿ ಮುಷ್ಕರದಲ್ಲಿ ಭಾಗವಹಿಸಲು ಒಪ್ಪಿದ್ದಾರೆ. ವಾಚರ್‌ಗಳು, ಗಾರ್ಡ್‌ಗಳು, ಡ್ರೈವರ್‌ಗಳು ಸೇರಿದಂತೆ ಅರಣ್ಯದ ಸಿಬ್ಬಂದಿ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆಂದು ಹೇಳಿದ್ದಾರೆ.

ಇದೇ ವೇಳೆ ಸಿಬ್ಬಂದಿ ಮಂಗಳವಾರ ನಡೆಯಬೇಕಿದ್ದ ವೀಡಿಯೊ ಕಾನ್ಫರೆನ್ಸ್‌ನಲ್ಲೂ ಭಾಗವಹಿಸಲು ನಿರಾಕರಿಸಿದ್ದು, ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು ನೇರವಾಗಿ ಸಭೆ ನಡೆಸಬೇಕು. ಕೇವಲ ಆನ್‌ಲೈನ್ ಚರ್ಚೆಯಿಂದ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ತಿಳಿಸಿದ್ದಾರೆ.

ಈ ಮುಷ್ಕರದಿಂದ ಅರಣ್ಯ ಪ್ರದೇಶಗಳಲ್ಲಿ ಗಸ್ತು ತಿರುಗುವಿಕೆ ಮತ್ತು ದಿನನಿತ್ಯದ ಕಾರ್ಯಗಳಿಗೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ವಿಶೇಷವಾಗಿ ಬೇಸಿಗೆ ವೇಳೆ ಕಾಡ್ಗಿಚ್ಚು ಸಂಭವಿಸುವ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಬೆಂಕಿ ತಡೆ ಹಾಗೂ ನಿಯಂತ್ರಣ ಕಾರ್ಯಗಳಿಗೆ ಹೆಚ್ಚಿನ ಸಿಬ್ಬಂದಿ ಅಗತ್ಯವಿದೆ. ಜೊತೆಗೆ ಮಾನವ–ಪ್ರಾಣಿ ಸಂಘರ್ಷ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ, ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾಗುವ ಭೀತಿ ಇದೆ.

ಸಿಬ್ಬಂದಿಯ ಪ್ರಮುಖ ಬೇಡಿಕೆಗಳಲ್ಲಿ, ವೇತನವನ್ನು ಮಧ್ಯವರ್ತಿಗಳ ಮೂಲಕ ನೀಡುವುದನ್ನು ನಿಲ್ಲಿಸಿ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು ಎಂಬುದು ಪ್ರಮುಖವಾಗಿದೆ. ಮಧ್ಯವರ್ತಿಗಳ ಮೂಲಕ ವೇತನ ನೀಡುವ ವ್ಯವಸ್ಥೆಯಿಂದ ಒಂದು ತಿಂಗಳವರೆಗೂ ವಿಳಂಬವಾಗುತ್ತಿರುವುದಾಗಿ ಆರೋಪಿಸಿದ್ದಾರೆ

ಇದಲ್ಲದೆ, ಅರಣ್ಯ ಇಲಾಖೆಯಲ್ಲಿ 10 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ತಾತ್ಕಾಲಿಕ ಸಿಬ್ಬಂದಿಗೆ ಶಾಶ್ವತ ನೌಕರರ ಸಮಾನ ಸೌಲಭ್ಯಗಳು ಮತ್ತು ಪರಿಹಾರ ಹಣ ನೀಡಬೇಕೆಂದೂ ಬೇಡಿಕೆ ಇಟ್ಟಿದ್ದಾರೆ. 2017ರವರೆಗೆ ನೇರವಾಗಿ ವೇತನ ಜಮಾ ಮಾಡಲಾಗುತ್ತಿತ್ತು. ಆದರೆ, ಬಳಿಕ ಈ ವ್ಯವಸ್ಥೆ ಬದಲಾಗಿದ್ದು, ಇದನ್ನು ಮತ್ತೆ ಜಾರಿಗೆ ತರುವಂತೆ ಸಿಬ್ಬಂದಿ ಆಗ್ರಹಿಸಿದ್ದಾರೆ.

ಹಿಂದೆ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಕಾರ್ಯದರ್ಶಿ ಮತ್ತು ಕೊಡಗು ಶಾಸಕ ಎ.ಎಸ್. ಪೊನ್ನಣ್ಣ ಅವರು ನಮ್ಮನ್ನು ಭೇಟಿ ಮಾಡಿ ನೇರ ವೇತನ ಪಾವತಿಯ ಭರವಸೆ ನೀಡಿದ್ದರು. ಆದರೂ ಅದು ಇನ್ನೂ ಜಾರಿಗೆ ಬಂದಿಲ್ಲ ಎಂದು ಸಂಘದ ಪ್ರತಿನಿಧಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಂ.ಎಂ. ಹಿಲ್ಸ್‌ನಲ್ಲಿ ನಡೆದ ಹುಲಿ ವಿಷ ಪ್ರಕರಣದ ಸಂದರ್ಭದಲ್ಲಿ, ಅರಣ್ಯ ಸಚಿವ ಈಶ್ವರ್ ಖಂಡ್ರೆ ನಮಗೆ ಸಕಾಲಿಕ ವೇತನ ಮತ್ತು ಸಿಬ್ಬಂದಿಗೆ ಸಮಾನವಾದ ಇತರ ಸೌಲಭ್ಯಗಳನ್ನು ಭರವಸೆ ನೀಡಿದ್ದರೂ ನೀಡಲಿಲ್ಲ. 15 ದಿನಗಳ ಹಿಂದೆ ಇಲಾಖೆಯ ಪ್ರಧಾನ ಕಚೇರಿಗೆ ಮನವಿ ಪತ್ರವನ್ನು ಸಲ್ಲಿಸಲಾಗಿದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು, ಎಲ್ಲಾ ಇಲಾಖೆಗಳಲ್ಲೂ ತಾತ್ಕಾಲಿಕ ಸಿಬ್ಬಂದಿಗೆ ಸಂಸ್ಥೆಗಳ ಮೂಲಕವೇ ವೇತನ ನೀಡಲಾಗುತ್ತಿದೆ. ಅಂತಿಮ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ.

ಈ ಮಧ್ಯೆ, ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ–ಪ್ರಾಣಿ ಸಂಘರ್ಷ ಸಮಸ್ಯೆ ಕುರಿತು ಚರ್ಚಿಸಲು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಉನ್ನತ ಮಟ್ಟದ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಸಂಸದರಾದ ತೇಜಸ್ವಿ ಸೂರ್ಯ, ಕೋಟ ಶ್ರೀನಿವಾಸ ಪೂಜಾರಿ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ. ಸಿ.ಎನ್. ಮಂಜುನಾಥ್ ಮತ್ತು ಮಲ್ಲೇಶ್ ಬಾಬು ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆಂದು ತಿಳಿದುಬಂದಿದೆ.

ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ಸಭೆ ಮಹತ್ವ ಪಡೆದುಕೊಂಡಿದೆ.

# ಶಾಲಾ ಮಕ್ಕಳು ಒಂದು ಗಂಟೆ ಅಷ್ಟೆ ಮೊಬೈಲ್ ಬಳಸಿದರೆ ಸಾಕಲ್ಲವೆ?

## ಡಿಜಿಟಲ್ ಬಳಕೆಗೆ ಸಂಬಂಧಿಸಿದ ಕರಡಿನಲ್ಲಿ ಶಿಫಾರಸು



ಬೆಂಗಳೂರು, ಮಾ.24– ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಡಿಜಿಟಲ್ ಗೀಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಜವಾಬ್ದಾರಿಯುತ ಡಿಜಿಟಲ್ ಬಳಕೆಗೆ ಸಂಬಂಧಿಸಿದ ಕರಡು ನೀತಿಯನ್ನು ಬಿಡುಗಡೆ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಜೆಟ್ ಘೋಷಣೆಯ ನಂತರ ಈ ಕರಡು ನೀತಿ ರೂಪುಗೊಂಡಿದ್ದು, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ನಿರ್ಬಂಧ ವಿಧಿಸುವ ದಿಕ್ಕಿನಲ್ಲಿ ಸರ್ಕಾರ ನಿರ್ಧಾರ ಕೈಗೊಳ್ಳಲು ಮುಂದಾಗಿದೆ.

ಈ ಕರಡು ನೀತಿ ಪ್ರಕಾರ, ಶಾಲೆ ಚಟುವಟಿಕೆ ಹೊರತುಪಡಿಸಿ ವಿದ್ಯಾರ್ಥಿಗಳು ದಿನಕ್ಕೆ ಗರಿಷ್ಠ 1 ಗಂಟೆ ಮಾತ್ರ ಮೊಬೈಲ್ ಬಳಸಬೇಕು ಎಂದು ಶಿಫಾರಸು ಮಾಡಲಾಗಿದೆ. ಜೊತೆಗೆ, ನಿದ್ರೆಗೆ ಒಂದು ಗಂಟೆ ಮೊದಲು ಎಲ್ಲಾ ಡಿಜಿಟಲ್ ಸಾಧನಗಳನ್ನು ನಿಲ್ಲಿಸುವ 'ಟೆಕ್ ಕರ್ಫ್ಯೂ' ಜಾರಿಗೊಳಿಸುವಂತೆ ಸೂಚಿಸಲಾಗಿದೆ.

**ಡಿಜಿಟಲ್ ವೆಲ್ನೆಸ್ ಸಮಿತಿ:** ಪ್ರತಿ ಶಾಲೆಯು ತನ್ನದೇ ಆದ ಡಿಜಿಟಲ್ ಬಳಕೆ ನೀತಿ ರೂಪಿಸಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಮತ್ತು ಡಿಜಿಟಲ್ ವೆಲ್ನೆಸ್ ಸಮಿತಿ ಸ್ಥಾಪಿಸಬೇಕು. ಈ ಸಮಿತಿಯಲ್ಲಿ ಪ್ರಾಂಶುಪಾಲರು, ಶಿಕ್ಷಕರು, ಮಾನಸಿಕ ಆರೋಗ್ಯ ತಜ್ಞರು, ಪೋಷಕರ ಪ್ರತಿನಿಧಿಗಳು, ವಿದ್ಯಾರ್ಥಿಗಳು ಮತ್ತು ಸೈಬರ್ ಕ್ರೈಂ ಪೊಲೀಸ್ ಅಧಿಕಾರಿಗಳು ಇರಬೇಕಾಗಿದೆ.

ನೀತಿಯನ್ನು ರೂಪಿಸುವಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಿಮ್ಹಾನ್ಸ್, ಶಿಕ್ಷಣ ಇಲಾಖೆ, ವಿವಿಧ ಶಿಕ್ಷಣ ಸಂಸ್ಥೆಗಳ ತಜ್ಞರು, ಪೋಷಕರು ಹಾಗೂ ಸೈಬರ್ ಕ್ರೈಂ ಇಲಾಖೆ ಭಾಗವಹಿಸಿವೆ.

ಈ ನೀತಿಯಡಿಯಲ್ಲಿ, ಶಾಲೆಗಳು ಸೈಬರ್ ಬುಲಿಯಿಂಗ್ ಮತ್ತು ಡಿಜಿಟಲ್ ದುರುಪಯೋಗ ತಡೆಯಲು ವಿಶೇಷ ಪ್ರೋಟೋಕಾಲ್ ರೂಪಿಸಬೇಕು. ಶಿಕ್ಷರಿಗೆ ವಿದ್ಯಾರ್ಥಿಗಳ ಡಿಜಿಟಲ್ ಬಳಕೆಯನ್ನು ನಿಯಂತ್ರಿಸುವುದು ಮತ್ತು ಸುರಕ್ಷಿತ ಬಳಕೆಯ ಬಗ್ಗೆ ಮಾರ್ಗದರ್ಶನ ನೀಡುವುದು ಪ್ರಮುಖ ಜವಾಬ್ದಾರಿಯಾಗಲಿದೆ. ಶಿಕ್ಷಕರಿಗೆ ವಿಶೇಷ ತರಬೇತಿ ನೀಡುವುದರಿಂದ, ವಿದ್ಯಾರ್ಥಿಗಳಲ್ಲಿ ಮೊಬೈಲ್ ಗೀಳಿನ ಲಕ್ಷಣಗಳನ್ನು ಗುರುತಿಸಲು ಸಹಾಯವಾಗುತ್ತದೆ ಎಂದು ಸೂಚಿಸಲಾಗಿದೆ.

ಇದಲ್ಲದೆ, ವಾಟ್ಸಾಪ್ ಮೂಲಕ ನೇರ ಸಂಪರ್ಕದ ಬದಲು 'ಡೈರಿ ಸಿಸ್ಟಮ್' ಬಳಕೆ ಮಾಡುವಂತೆ ಶಾಲೆಗಳಿಗೆ ಸಲಹೆ ನೀಡಲಾಗಿದೆ. ಡಿಜಿಟಲ್ ತಂತ್ರಜ್ಞಾನ ಮತ್ತು ಮೀಡಿಯಾ ಕ್ಷೇತ್ರಗಳೊಂದಿಗೆ ಸಹಕರಿಸಿ, ಮಕ್ಕಳಿಗೆ ಸೂಕ್ತವಾದ ವಿಷಯ ಅಭಿವೃದ್ಧಿ ಹಾಗೂ ವಯೋಮಿತಿ ನಿಯಂತ್ರಣದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ

ಮಕ್ಕಳ ವಯಸ್ಸಿಗೆ ಸೂಕ್ತವಾದ ಫೋನ್‌ಗಳನ್ನು ಅಭಿವೃದ್ಧಿಪಡಿಸಲು ಮತ್ತು ಅವರು ವಯಸ್ಸಾದಂತೆ ಸಾಧನಕ್ಕಾಗಿ OS ನವೀಕರಣವನ್ನು ನೀಡಲು ಸಹ ಕರೆ ನೀಡಲಾಗಿದೆ. ಆಡಿಯೋ–ಮಾತ್ರ ಹೊಂದಿರುವ ಫೋನ್‌ಗಳಿಗಾಗಿ ವಿಶೇಷ 'ಮಕ್ಕಳ ಯೋಜನೆ'ಯನ್ನು ರೂಪಿಸಲು ಮತ್ತು ಸಂಜೆ 7 ಗಂಟೆಯೊಳಗೆ ಡೇಟಾ ಬಳಕೆಯನ್ನು ನಿಲ್ಲಿಸಲು ಸಹ ಇದು ಸೂಚಿಸಿದೆ.

ಶಾಲೆಗಳು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಗಮನದಲ್ಲಿಟ್ಟು, ಕೌನ್ಸೆಲಿಂಗ್‌ಗೆ ಸಂಬಂಧಿಸಿದ ಮಾಹಿತಿಯನ್ನು ಗೌಪ್ಯವಾಗಿ ದಾಖಲಿಸಬೇಕು ಮತ್ತು ಸೈಬರ್ ಬುಲಿಯಿಂಗ್ ಪ್ರಕರಣಗಳನ್ನು ತ್ವರಿತವಾಗಿ ಪರಿಹರಿಸಬೇಕು. ವಿದ್ಯಾರ್ಥಿಗಳಲ್ಲಿ ಯಾವುದೇ ಅನುಮಾನಾಸ್ಪದ ಅಥವಾ ಅಪಾಯಕಾರಿ ಆನ್‌ಲೈನ್ ವರ್ತನೆ ಕಂಡುಬಂದರೆ, ಅಧಿಕಾರಿಗಳು ಅಥವಾ ಕೌನ್ಸೆಲರ್‌ಗೆ ತಿಳಿಸಲು ಪ್ರೋತ್ಸಾಹಿಸಲಾಗುತ್ತದೆ. ಜೊತೆಗೆ, ಸಲಹೆಗಾಗಿ ಟೆಲಿ ಮಾನಸ್ 14416 ಸಂಪರ್ಕಿಸಲು ಜಾಗೃತಿ ಮೂಡಿಸಲಾಗುತ್ತದೆ.

ಈ ನೀತಿ ಶಾಲೆಗಳಷ್ಟೇ ಅಲ್ಲದೆ, ಶಿಕ್ಷಕರ ತರಬೇತಿ ಕಾರ್ಯಕ್ರಮಗಳಲ್ಲೂ ಸೇರಿಸಬಹುದಾಗಿದೆ. NIMHANS ತಜ್ಞರ ಸಹಾಯದಿಂದ ಶಿಕ್ಷಕರಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡಬಹುದು ಎಂದು ಸೂಚಿಸಲಾಗಿದೆ.

ಇದಲ್ಲದೆ, ಪೋಷಕರಿಗೂ ಮಹತ್ವದ ಜವಾಬ್ದಾರಿ ನೀಡಲಾಗಿದ್ದು, ಮಕ್ಕಳೊಂದಿಗೆ ಹೆಚ್ಚು ಆಫ್‌ಲೈನ್ ಸಂವಹನ, ಆಟ, ಓದು ಚಟುವಟಿಕೆಗಳು ನಡೆಸುವಂತೆ ಸಲಹೆ ನೀಡಲಾಗಿದೆ. ಮಕ್ಕಳು ಬಳಸುವ ಆಪ್‌ಗಳು, ಆನ್‌ಲೈನ್ ಸ್ನೇಹಿತರು ಮತ್ತು ಅವರು ಹಂಚಿಕೊಳ್ಳುವ ಮಾಹಿತಿಯ ಬಗ್ಗೆ ನಿಯಮಿತವಾಗಿ ಗಮನ ನೀಡುವುದು ಅಗತ್ಯ ಎಂದು ಹೇಳಲಾಗಿದೆ.

ಒಟ್ಟಿನಲ್ಲಿ, ಈ ಕರಡು ನೀತಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ, ಸುರಕ್ಷತೆ ಮತ್ತು ಸಮತೋಲನದ ಡಿಜಿಟಲ್ ಬಳಕೆ ಕಡೆಗೆ ದೊಡ್ಡ ಹೆಜ್ಜೆಯಾಗಿದೆ. ಕರಡು ನೀತಿಯನ್ನು ಆರೋಗ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸಾರ್ವಜನಿಕ ಅಭಿಪ್ರಾಯವನ್ನು ಆಹ್ವಾನಿಸಲಾಗಿದೆ.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಯಾಕ್ರೀ ಆವಾಗವಾಗ ನನ್ನ ಮುಖದ ಮೇಲೆ ನೀರು ಚಿಮುಕಿಸುತ್ತೀರ?

ಗಂಡ : ನಿಮ್ಮ ಅಪ್ಪ ನಿನ್ನ ಹೂವಿನ ತರ ನೋಡ್ಕೋಳಕ್ಕೆ ಹೇಳಿದ್ದಾರೆ ಕಣೇ. ಅದಕ್ಕೆ ಬಾಡಬಾರದು ಅಂತಾ...!!

ಮೈಸೂರು ಮಿತ್ರ
ಬುಧವಾರ, ಮಾರ್ಚ್ 25, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

## ಅಮೃತ ವಾಹಿನಿ.........

ಕೋಪವೆಂಬುದು ಬೇರೆಯವರ ಮೇಲೆ
ನಾವು ಎಸೆಯಲು ಹಿಡಿದ ಕೆಂಡದಂತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು

## ನಿಮ್ಮ ಪತ್ರಗಳು

### ಕಾಮಗಾರಿಯ ಗುಣಮಟ್ಟ



ಮಾನ್ಯರೇ,

ಸಾಮಾನ್ಯವಾಗಿ ನಾವು ಪತ್ರಿಕೆಗಳಲ್ಲಿ ಸೇತುವೆ ಅಥವಾ ರಸ್ತೆ ಕುಸಿದಿರುವ ಬಗ್ಗೆ ಮತ್ತು ಅದರ ಕಳಪೆ ಕಾಮಗಾರಿಯ ಬಗ್ಗೆ ಓದುತ್ತಿರುತ್ತೇವೆ. ನಂತರ ಇದಕ್ಕೆಲ್ಲಾ ಕಳಪೆ ಗುಣಮಟ್ಟದ ಸಾಮಾಗ್ರಿಗಳ ಬಳಕೆ ಮತ್ತು ಅದರಲ್ಲಿನ ಕಿಕ್‌ಬ್ಯಾಕ್‌ಗಳ ಬಗ್ಗೆ ತಿಳಿದರೂ ಸುಮ್ಮನೆ ಇದ್ದು ಬಿಡುತ್ತೇವೆ. ಇದು ಏಕೆ ಹೀಗೆ ಎನ್ನುವ ಓದುಗರಿಗೊಂದು ನಿದರ್ಶನ ಇಲ್ಲಿದೆ

ನಗರದ ವಿಜಯನಗರ ರೈಲ್ವೆ ಬಡಾವಣೆಯಲ್ಲಿ ಕೆಲವೇ ತಿಂಗಳುಗಳ ಹಿಂದೆ ಅಲ್ಲಿನ ರಸ್ತೆಗಳ ಮೇಲೆ ಕಿರು ಸೇತುವೆ ಅರ್ಥಾತ್ ಮೋರಿ ನಿರ್ಮಾಣ ಮಾಡಲಾಗಿತ್ತು. ಆಹಾ, ಅದೇನು ಸಾಮಗ್ರಿಗಳನ್ನು ಬಳಸಿದ್ದರೋ ನೋಡಬೇಕಿತ್ತು. ಹೇಗೋ ಕಾಮಗಾರಿ ಕೆಲಸವೂ ಮುಗಿಯಿತು. ಇದಾದ ಕೆಲವೇ ತಿಂಗಳುಗಳಲ್ಲಿ ಕಿರು ಸೇತುವೆ ಕುಸಿಯುತ್ತಿದೆ. ಮರಳಿಗೆ ಸಿಮೆಂಟೋ, ಸಿಮೆಂಟಿಗೆ ಮರಳೋ! ಒಟ್ಟಿನಲ್ಲಿ ಎಲ್ಲವೂ ಅರಳು ಮರಳು. (ಪಟ ನೋಡಿ) ಚಿತ್ರದಲ್ಲಿನ ಕಿರು ಸೇತುವೆ ಹೇಗೆ ಒಡೆದಿದೆ. ಬಹುಶಃ ಒಂದು ಪುಟ್ಟ ಕ್ಯಾಂಟರ್ ವಾಹನ ಸಾಗುವುದೇ ಇಲ್ಲಿ ಕಷ್ಟ ಸಾಧ್ಯ. ಈ ರೀತಿಯ ಕಾಮಗಾರಿಗಳನ್ನು ಪರಿಶೀಲಿಸುವವರು ಯಾರು? ಗುಣಮಟ್ಟ ಪರಿಶೀಲಿಸುವವರು ಯಾರು? ಪದೇ ಪದೆ ದುರಸ್ತಿಗೊಳಗಾಗುವ ಬದಲಿಗೆ ಗುತ್ತಿಗೆದಾರರಿಂದ ಗುಣಮಟ್ಟದ ಬಗ್ಗೆ ಖಾತ್ರಿ ಪಡೆದು ಬಿಲ್ ಪಾವತಿಸಬಾರದೇಕೆ. ಇದಕ್ಕೆ ಸರ್ಕಾರದ ಅಥವಾ ಸಂಬಂದಿಸಿದ ಇಲಾಖೆ ಉತ್ತರಿಸುತ್ತದೆಯೇ?

ಇಂತಹ ಕಾಮಗಾರಿ ಉಸ್ತುವಾರಿಗೆ ಅಂತಲೇ ಪಾಲಿಕೆ ವಲಯ ಕಚೇರಿಗಳಲ್ಲಿ ಡೆವಲಪ್‌ಮೆಂಟ್ ಆಫೀಸರ್‌ಗಳ ವ್ಯವಸ್ಥೆ ಮಾಡಲಾಗಿದೆಯಂತೆ. ಈ ಏರಿಯಾ ಡೆವಲಪ್‌ಮೆಂಟ್ ಆಫೀಸರ್ ಕಣ್ಣು ಮುಚ್ಚಿ ಬಿಲ್ ಪಾಸ್ ಮಾಡಿರಬೇಕು!

–ವಿಜಯ್ ಹೆಮ್ಮಿಗೆ, ಮೈಸೂರು

### ಸರಳ, ಸಜ್ಜನ ವಿಕ್ರಾಂತ್ ಪಿ.ದೇವೇಗೌಡರು!

ಮಾನ್ಯರೆ,

ಇತ್ತೀಚೆಗೆ ನಿಧನರಾದ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡರು ಮೈಸೂರಿನ ಜನಪ್ರಿಯ ವ್ಯಕ್ತಿಗಳಲೊಬ್ಬರು. 64ನೇ ವಯಸ್ಸಿಗೆ ಅವರು ನಮ್ಮೆಲ್ಲರನ್ನಗಲಿದರು. ಕೇವಲ ಎರಡು ಮೂರು ತಿಂಗಳ ಹಿಂದೆಯಷ್ಟೇ ಇವರಿಗೆ ಆರೋಗ್ಯ ಸಮಸ್ಯೆ ಕಾಣಿಸಿ ಕೊಂಡಿತ್ತು. ಸದಾ ಹಸನ್ಮುಖಿಯಾಗಿ ಎಲ್ಲರೊಂದಿಗೂ ಆತ್ಮೀಯವಾಗಿ ಬೆರೆಯುತ್ತಿದ್ದ ಅವರ ಗುಣ ಅನುಸರಣೀಯ. ಕಾಂಗ್ರೆಸ್ ಮೈಸೂರು ಜಿಲ್ಲಾ ಉಪಾಧ್ಯಕ್ಷರಾಗಿದ್ದರೂ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಆತ್ಮೀಯವಾಗಿದ್ದರು. ಎಲ್ಲಾ ಪಕ್ಷಗಳ, ಜಾತಿ–ಜನಾಂಗಗಳ ಮುಖಂಡರು ವಿಕ್ರಾಂತ್ ಪಿ.ದೇವೇಗೌಡರ ಅಂತಿಮ ದರ್ಶನ ಪಡೆದಿದ್ದು, ಅವರ ಮಾದರಿ ವ್ಯಕ್ತಿತ್ವಕ್ಕೆ ಸಾಕ್ಷಿ.



ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್, ಮಾಜಿ ಶಾಸಕ ಸೋಮಶೇಖರ್, ಎಸ್.ಎಂ.ಕೃಷ್ಣ ಅವರ ಪುತ್ರಿ ಮಾಳವಿಕಾ, ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀ ಸೋಮೇಶ್ವರ ನಾಥ ಸ್ವಾಮೀಜಿ, ಮಾಜಿ ಮೇಯರ್ ಪಿ.ವಿಶ್ವನಾಥ್ ಸೇರಿದಂತೆ ಅಪಾರ ಗಣ್ಯರು ಸಂತಾಪ ಸೂಚಿಸಿದರು. ತಮಗಿದ್ದ ಪ್ರಭಾವಿಗಳ ಸಂಪರ್ಕವನ್ನು ಬಳಸಿಕೊಂಡು ರಾಜಕೀಯ ಹಾಗೂ ಆರ್ಥಿಕವಾಗಿ ಬೆಳೆಯಲು ವಿಫುಲ ಅವಕಾಶಗಳಿದ್ದರೂ ವಿಕ್ರಾಂತ್ ಪಿ.ದೇವೇಗೌಡರು ತಮ್ಮತನ ಬಿಟ್ಟುಕೊಡಲಿಲ್ಲ. ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳದೆ ಪ್ರಾಮಾಣಿಕರಾಗಿಯೇ ಬದುಕು ಮುಗಿಸಿದರು.

ಇವರು ಮಾಜಿ ಮುಖ್ಯಮಂತ್ರಿ, ಕೇಂದ್ರದ ಮಾಜಿ ಸಚಿವ ದಿವಂಗತ ಎಸ್.ಎಂ.ಕೃಷ್ಣ ಅವರ ಕುಟುಂಬಕ್ಕೆ ನಿಷ್ಠಾವಂತರಾಗಿದ್ದರು. ಸದಾಕಾಲ ಅವರ ಕುಟುಂಬದ ಏಳ್ಗೆಯನ್ನು ಬಯಸುತಿದ್ದರು. ಯಾವುದೇ ದೇವಸ್ಥಾನಕ್ಕೆ ಹೋದರು, ಮೊದಲು ಎಸ್.ಎಂ.ಕೃಷ್ಣ, ಅವರ ಧರ್ಮಪತ್ನಿ ಪ್ರೇಮ ಕೃಷ್ಣ ಮತ್ತು ಕುಟುಂಬದ ಸದಸ್ಯರ ಹೆಸರಿನಲ್ಲಿ ದೇವರಿಗೆ ಅರ್ಚನೆ ಮಾಡಿಸಿ, ನಂತರ ತಮ್ಮ ಕುಟುಂಬದವರ ಹೆಸರಿನಲ್ಲಿ ಅರ್ಚನೆ ಮಾಡಿಸುತ್ತಿದ್ದರು. ಅವರು ಹಣ ಮಾಡುವ ಉದ್ದೇಶದಿಂದ ಬಣ್ಣದ ಅಂಗಡಿ ಇಟ್ಟುಕೊಂಡಿರಲಿಲ್ಲ. ಅದರಲ್ಲೂ ಸಾರ್ವಜನಿಕರ ಸಂಪರ್ಕ ವಿಸ್ತರಿಸಿಕೊಳ್ಳುವ ಏಕಮಾತ್ರ ಉದ್ದೇಶವಿತ್ತು. ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗರಾದಿಯಾಗಿ ಯಾರನ್ನೂ ಏಕವಚನದಲ್ಲಿ ಸಂಭೋದಿಸದೆ ಗೌರವದಿಂದ ಮಾತನಾಡಿಸುವ ಸಂಸ್ಕಾರ ಅವರಲ್ಲಿ ಹಾಸುಹೊಕ್ಕಾಗಿತ್ತು.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

### ಅಶ್ಲೀಲ ಸಾಹಿತ್ಯ ನಿರ್ಬಂಧಿಸಿ

ಮಾನ್ಯರೇ,

ಕನ್ನಡ ಚಲನಚಿತ್ರಗಳು ಭಾರತೀಯ ಸಿನಿರಂಗದಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಕನ್ನಡ ಚಲನಚಿತ್ರಗಳಲ್ಲಿ ಹಾಡುಗಳನ್ನು ಕೇಳುವುದೇ ಒಂದು ರೀತಿ ಆನಂದದಾಯಕವಾಗಿರುತ್ತದೆ. ಒಂದು ಹಾಡನ್ನು ಬರೆಯಬೇಕಾದರೆ ಒಂದೊಂದು ಪದವನ್ನು ಸಹ ಅರ್ಥಗರ್ಭಿತವಾಗಿ ಬರೆಯುವುದರ ಮುಖಾಂತರ ಪ್ರತಿಯೊಬ್ಬರ ಮನಸ್ಸಿನಲ್ಲೂ ನಾಟುವಂತೆ, ತಮ್ಮದೇ ಆದ ಶೈಲಿಯಲ್ಲಿ ಸಾಹಿತ್ಯವನ್ನು ಬರೆಯುತ್ತಿದ್ದರು. ಇಂತಹ ಹಾಡುಗಳು ಕೇಳುಗರ ಅಂತರಾಳದಲ್ಲಿ ಬೆರೆತು, ಜೀವನದ ಬದಲಾವಣೆ ಕ್ರಮವನ್ನೇ ಬದಲಾಯಿಸುವ ಶಕ್ತಿ ಇಂತಹ ಹಾಡುಗಳಿಗೆ ಇರುತ್ತಿತ್ತು, ಆದರೆ ಈಗಿನ ಕಾಲಕ್ಕೆ ಹೋಲಿಸಿದರೆ ಇಂತಹದ್ದು ತದ್ವಿರುದ್ಧವಾಗಿದೆ. ಚಲನಚಿತ್ರಗಳಲ್ಲಿ ಬರತಕ್ಕಂತಹ ಹಾಡುಗಳು ಕೇಳಲು ಸಾಧ್ಯವಾಗದ ಸ್ಥಿತಿಗೆ ತಲುಪಿದ್ದೇವೆ, ಜೊತೆಗೆ ಇಂತಹ ಹಾಡುಗಳನ್ನು ಕಣ್ಣಿಂದ ನೋಡಲು ಕೂಡ ಕಷ್ಟಕರವಾಗಿದೆ, ಅಲ್ಲದೆ ಸಾಮಾನ್ಯವಾಗಿ ಮಕ್ಕಳಿಗೆ ಒಂದು ಹಾಡು ಇಷ್ಟವಾದರೆ ಅದು ಅವರ ಬಾಯಲ್ಲಿ ಇರುತ್ತದೆ, ಆದರೆ ಈಗಿನ ಕನ್ನಡ ಹಾಡುಗಳಲ್ಲಿ ಇರುವ ಸಾಹಿತ್ಯ ಅಶ್ಲೀಲತೆಯನ್ನೇ ಬಿಂಬಿಸುವ ರೀತಿ ಇದೆ, ಕೆಲ ಇಂತಹ ಹಾಡುಗಳು ಮಕ್ಕಳ ಬಾಯಲ್ಲಿ ಕೇಳುವುದು ವಿಷಾದನೀಯ ಸಂಗತಿ. ಆದ್ದರಿಂದ ಇಂತಹ ಅಶ್ಲೀಲ ಸಾಹಿತ್ಯ ಹೊಂದಿರುವ ಕನ್ನಡ ಹಾಡುಗಳನ್ನು ಪರಿಶೀಲಿಸಿ, ನಂತರ ನಿರ್ಬಂಧಿಸುವ ಮುಖಾಂತರ ಸಾಮಾಜಿಕ ಕಾಳಜಿಯನ್ನು ವಹಿಸಬೇಕಾಗಿದೆ. – **ಸಾಯಿ ಸಂದೇಶ್ ಬಿ.ಎಸ್, ಮೈಸೂರು**



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

## ಸಂಸ್ಕೃತಿ ಚಿಂತನಾ

# ಮಸೂರದಲ್ಲಿ ಗ್ರಾಮ ಪ್ರಪಂಚ ದರ್ಶನ..!



ಭಾರತದಲ್ಲಿ ಸಾವಿರಾರು ಗ್ರಾಮಗಳಿವೆ. ಅವುಗಳ ಇತಿಹಾಸವನ್ನು ಕೆದಕಿ ನೋಡಿದರೆ, ಅಲ್ಲಿರುವ ಜನಗಳ ಐತಿಹ್ಯವನ್ನು ಅರಿತರೆ, ಒಂದೊಂದು ಊರಿನ ಜನರ ಸಾಧನೆ–ಸಿದ್ಧಿಗಳನ್ನು ವೀಕ್ಷಿಸಿದರೆ ಅನೇಕ ವಿಸ್ಮಯ ಜನಕ ಸ್ವಾರಸ್ಯ ಪೂರ್ಣ ಮಾಹಿತಿಗಳು ಬೆಳಕಿಗೆ ಬರುತ್ತವೆ. ಬೇರೆ ಎಲ್ಲೂ ಕಾಣದ ವಿಶೇಷಗಳು ಗೋಚರಿಸುತ್ತವೆ. ಆದರೆ ಇದೆಲ್ಲ ಸಾಧ್ಯವಾಗುವುದು ಕಾಣುವ ಕಣ್ಣುಗಳಿದ್ದಾಗ ಮಾತ್ರ.

ಅಂತಹ ಕಣ್ಣುಗಳನ್ನುಳ್ಳವರು ಕೆ. ರಮೇಶ್. ಅವರು ಕನ್ನಡದ ವಾಚಕರಿಗೆ ಈಗಾಗಲೇ ಪರಿಚಿತರು. 2018ರಲ್ಲಿ ಗ್ರಾಮನಿಧಿ, 2024 ರಲ್ಲಿ ಕಾಣದ ಗ್ರಾಮಕ್ಕೆ ಕೈಮರ ಎಂಬ ಪುಸ್ತಕಗಳನ್ನು ಬರೆದು ಪ್ರಖ್ಯಾತ ರಾಗಿದ್ದಾರೆ. ವೃತ್ತಿಯಿಂದ ಲೋಹಶಾಸ್ತ್ರದ (Mottellurgy) ಇಂಜಿನಿಯರ್ ಆದರೂ ಪ್ರವೃತ್ತಿಯಿಂದ ಅನ್ವೇಷಕರು, ಸಾಹಿತ್ಯ ರಚನಾಕಾರರು. ಅವರಿಗೆ ಭಾರತ ದೇಶದ ಹಳ್ಳಿಗಳಲ್ಲಿ ಸುತ್ತುವ, ಅವುಗಳ ವಿಶೇಷಾಂಶಗಳನ್ನು ಹುಡುಕುವ ಹವ್ಯಾಸವಿದೆ. ಮಸೂರ ದಲ್ಲಿ ಗ್ರಾಮ ಎಂಬ ಪ್ರಸ್ತುತ ಪುಸ್ತಕದಲ್ಲಿ ಭಾರತ ದೇಶದ ನೂರ ಮೂವತ್ತು ಗ್ರಾಮಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಮಸೂರ ಎಂದರೆ Lens, ದುರ್ಬೀನು, ಸೂಕ್ಷ್ಮದರ್ಶಕ. ಅದು ಸ್ಥೂಲವಾದ ಕಣ್ಣಿಗೆ ಕಾಣದುದನ್ನೂ ತೋರಿಸಬಲ್ಲ ಶಕ್ತಿಯುಳ್ಳ ಯಂತ್ರ. ಇಲ್ಲಿ ಕೆ. ರಮೇಶರೇ ಅಂತಹ ಮಸೂರವಾಗಿ ವಾಚಕರಿಗೆ ಗ್ರಾಮ ಪ್ರಪಂಚವನ್ನು ತೋರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಪುಸ್ತಕದ ವಿಶೇಷವೇನೆಂದರೆ ಅದರಲ್ಲಿರುವ ಚಿತ್ರಗಳು. ಒಂದೊಂದು ಗ್ರಾಮದ ಪರಿಚಯದಲ್ಲೂ ಅದರ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಚಿತ್ರವಿದೆ. ಇದರಿಂದ ಅವರು ಹೇಳುವ ಮಾಹಿತಿಗೆ ಆಧಿಕಾರಿಕತೆ (authenticity) ದೊರಕಿದೆ. ಅದು ಓದುಗರಿಗೆ ಆ ಹಳ್ಳಿಗಳನ್ನು ನೋಡಲು ಕುತೂಹಲವನ್ನು ಕೆರಳಿಸುತ್ತದೆ. ಪುಸ್ತಕದ ಕವಚವನ್ನು ವಿನ್ಯಾಸಗೊಳಿಸಿದ ಕಲಾವಿದರು ಶ್ರೀ ಡಿ. ಮಂಜುನಾಥ್. ಅಲ್ಲಿರುವ ಹಳ್ಳಿಯ ಚಿತ್ರ ಕಾಲ್ಪನಿಕ, ಆದರೂ ರಮಣೀಯ.

ಇಲ್ಲಿ ವರ್ಣಿತವಾದ ಹಳ್ಳಿಗಳಲ್ಲಿ ಕೆಲವು ಪುರಾಣೇತಿಹಾಸ ಪ್ರಸಿದ್ಧವಾದವು. ನಂದಿ ಗ್ರಾಮ ವಾಲ್ಮೀಕಿ ರಾಮಾಯಣದ ಕಥೆಗೆ ಸಂಬಂಧಿಸಿದುದು. ರಾಮನ ಪಾದುಕೆಗಳನ್ನು ಹೊತ್ತು ತಂದ ಭರತನು ನಂದಿ ಗ್ರಾಮದಲ್ಲೇ ಇದ್ದು ಕೋಸಲ ದೇಶದ ಆಡಳಿತವನ್ನು ರಾಮಪಾದುಕೆಗಳ ಹೆಸರಿನಲ್ಲಿ ನಡೆಸಿದನಂತೆ. ಆ ನಂದಿಗ್ರಾಮ ಅಯೋಧ್ಯೆಗೆ ಮೂವತ್ತು ಮೈಲಿ ದೂರದಲ್ಲಿ ಈಗಲೂ ಇದೆಯಂತೆ. ಅದರ ವಿಶೇಷತೆಯನ್ನು ಗ್ರಂಥಕರ್ತರು ತಿಳಿಸಿಕೊಟ್ಟಿದ್ದಾರೆ. ಹಾಗೆಯೇ ಪಾರಿಜಾತ ಎಂಬ ಗ್ರಾಮ ಉತ್ತರ ಪ್ರದೇಶದಲ್ಲಿ, ಲಕ್ನೋ ನಿಂದ 45 ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿರುವ ಪಾರಿಜಾತ ವೃಕ್ಷ ಮಹಾಭಾರತದ ಕಾಲದ್ದು. ಅರ್ಜುನ ಸ್ವರ್ಗದಿಂದ ತಂದು ಇಲ್ಲಿ ನೆಟ್ಟ ವೃಕ್ಷವೆಂದು ಕೆಲವರು ಹೇಳುತ್ತಾರೆ. ಶ್ರೀಕೃಷ್ಣನೇ ಸತ್ಯಭಾಮೆಗೋಸ್ಕರ ತಂದು ನೆಟ್ಟ ವೃಕ್ಷವೆಂದು ಇತರರ ಅಂಬೋಣ. ರಾಮಾಯಣ–ಮಹಾಭಾರತಗಳು ಭಾರತೀಯ ಸಂಸ್ಕೃತಿಯಲ್ಲಿ ಹೇಗೆ ಹೆಣೆದುಕೊಂಡಿವೆ ಎಂಬುದಕ್ಕೆ ಇವೆಲ್ಲ ಸಾಕ್ಷಿಗಳು. ರಿವೋನ, ನಂದೇಶ್ವರ, ಮೊಹದ್, ಹೊಸಹಳ್ಳಿ ಎಂಬ ಗ್ರಾಮಗಳಲ್ಲಿ ಎಲ್ಲ ಜನರೂ ಸಂಸ್ಕೃತ ಭಾಷೆಯನ್ನು ದೈನಂದಿನ ಜೀವನದಲ್ಲಿ ಬಳಸುತ್ತಾರೆ ಎಂಬ ಮಾಹಿತಿಯೂ ಈ ಪುಸ್ತಕದಲ್ಲಿ ದೊರೆಯುತ್ತದೆ. ಸಂಸ್ಕೃತವನ್ನು ಭಾರತೀಯರು ಮರೆತೇ ಹೋಗಬಹುದು ಎಂಬ ಭಯವಿರುವ ಈ ಕಾಲದಲ್ಲಿ ಕೆಲವು ಹಳ್ಳಿಗಳಲ್ಲಾದರೂ ಅದು ಜೀವಂತವಾಗಿದೆ ಎಂಬುದು ಆನಂದದ ವಿಷಯ.

ಮನುಷ್ಯರು ಯಾವ ಪ್ರಾಣಿಗಳನ್ನು ಪೂಜಿಸುತ್ತಾರೆ? ಗೋವು ಕಾಮಧೇನು ಎಂದು ನಾವು ಪೂಜಿಸುತ್ತೇವೆ. ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ ಇವುಗಳೆಂದು ಮೀನು, ಆಮೆ, ಕಾಡುಹಂದಿ, ಸಿಂಹಗಳನ್ನೂ ಪೂಜಿಸುವುದುಂಟು. ಹಾಗೆ ಗಣೇಶನೆಂದು ಆನೆಯನ್ನೂ, ಹಯಗ್ರೀವನೆಂದು ಕುದುರೆಯನ್ನೂ ಪೂಜಿಸುವವರಿದ್ದಾರೆ. ಆದರೆ ಆಶ್ಚರ್ಯದ ವಿಷಯವೇನೆಂದರೆ ಯಾವ ದೇವರ ಅವತಾರವೂ ಅಲ್ಲದ ಬೆಕ್ಕನ್ನು ಪೂಜಿಸುವ ಗ್ರಾಮವೂ ಇದೆ. ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಬೆಕ್ಕಳಲೆ ಎಂಬ ಊರಿನಲ್ಲಿ ಬೆಕ್ಕನ್ನೇ ಪೂಜಿಸುತ್ತಾರಂತೆ. ಇಲ್ಲಿ ಯಾರೂ ಯಾವ ಬೆಕ್ಕಿಗೂ ಹಾನಿ ಮಾಡಬಾರದು ಎಂಬ ನಿಯಮವನ್ನು ಎಲ್ಲರೂ ಪಾಲಿಸುತ್ತಾರೆ. ಈ ವಿಷಯವನ್ನು ಹೇಳುವಾಗ ಗ್ರಂಥಕಾರರು ಜಪಾನಿನಲ್ಲೂ ಒಂದು ಬೆಕ್ಕಿನ ದೇವಾಲಯವಿರುವ ಸಂಗತಿಯನ್ನು ಹೇಳಿದ್ದಾರೆ.

ಅನೇಕ ಗ್ರಾಮಗಳ ಬಗೆಗೆ ತಿಳಿದುಕೊಂಡು ಆನಂದಪಡಬಹುದು. ಹಾಗೆ ದುಃಖವನ್ನು ತರುವ ಹಲವು ಗ್ರಾಮಗಳೂ ಇವೆ. ಧಡ್‌ಕಾಯ್ ಗ್ರಾಮದ ಶೋಕಮಯ ಸ್ಥಿತಿಯನ್ನು ಕೆ.ರಮೇಶ್ ವರ್ಣಿಸಿದ್ದಾರೆ. (ಪು. 30)

ಜಮ್ಮು ಕಾಶ್ಮೀರ ರಾಜ್ಯದ ದೊಡಾಜಿಲ್ಲೆಯ ಒಂದು ಪುಟ್ಟ ಗ್ರಾಮ ಧಡ್‌ಕಾಯ್. ಇದು ಜಮ್ಮು ನಗರದಿಂದ ಸುಮಾರು 220 ಕಿ.ಮೀ. ದೂರದಲ್ಲಿದೆ. ಹಾಗೂ ದೋಡಾದಿಂದ 70 ಕಿ.ಮೀ. ದೂರದಲ್ಲಿದೆ. ಇಲ್ಲಿಯ ಜನಸಂಖ್ಯೆ ಕೇವಲ 1775. ಇಲ್ಲಿಯ ವಿಶೇಷವೆಂದರೆ ಪೂರಕ್ಕೆ ಪೂರ ಗ್ರಾಮದವರು ಕಿವುಡರು ಮತ್ತು ಮೂಗರು. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಕಿವುಡರು ಮತ್ತು ಮೂಕರು ಇರುವ ಗ್ರಾಮ. ಆದ್ದರಿಂದಲೇ ಈ ಗ್ರಾಮಕ್ಕೆ ನಿಶ್ಯಬ್ಧ ಗ್ರಾಮ ಎಂಬ ಹೆಸರು ವಿಶ್ವದಾದ್ಯಂತ ಬಂದಿದೆ. ಇದಕ್ಕೆ ಕಾರಣವನ್ನು ವಿಜ್ಞಾನಿಗಳು ಕಂಡು ಹಿಡಿದು ಇದು ವಂಶಪಾರಂಪರ್ಯವಾದ ಒಂದು ಬೇನೆ (disorder) ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಇದು ಸಮೀಪ ಸಂಬಂಧಿ ಮದುವೆಯಿಂದ ಬಂದಿರಬಹುದೆಂದು ಶಂಕಿಸಿದ್ದಾರೆ. ವಿಶೇಷವೆಂದರೆ ಹದಿನೈದು ವಯಸ್ಸಿನ ನಂತರದವರಿಗೆ ಈ ಕಿವುಡುತನ, ಮೂಕತನ ಹೆಚ್ಚು ಕಂಡು ಬಂದಿದೆ. ಇವರೆಲ್ಲ ಸನ್ನೆಯ ಭಾಷೆಯಲ್ಲೇ ವ್ಯವ ಹರಿಸುತ್ತಾರೆ. ಇವರಿಗೋಸ್ಕರ ಒಂದು ಶಾಲೆಯನ್ನು ತೆರೆಯಲಾಗಿದೆ. ಇಲ್ಲಿಯ ಹೆಚ್ಚಿನ ಜನರು ಗುಜ್ಜಾರ್ ಸಮುದಾಯದವರು. ಅವರು ಗೊಬ್ರಿ ಹಾಗೂ ಡೋಗ್ರಿ ಭಾಷೆಯನ್ನು ಮಾತನಾಡುತ್ತಾರೆ.

ಎಷ್ಟು ದುಃಖದ ಸಂಗತಿ. ಇದೇ ರೀತಿ ಮೇಲುಕೋಟೆಯ ಬಗೆಗೆ ಹೇಳುವಾಗ ಟಿಪ್ಪುವಿನ ಸೈನಿಕರು ಏಳು ನೂರು ಜನ ಶ್ರೀ ವೈಷ್ಣವ ಬ್ರಾಹ್ಮಣರನ್ನು ದೀಪಾವಳಿಯ ಹಬ್ಬದ ದಿನ ಕತ್ತರಿಸಿ ಕೊಂದು ಹಾಕಿದರೆಂಬ ಕಾರಣದಿಂದ ಇಂದಿಗೂ ದೀಪಾವಳಿಯ ಹಬ್ಬವನ್ನು ಅಲ್ಲಿ ಆಚರಿಸುವುದಿಲ್ಲ ಎಂಬುದೂ ಹೃದಯ ವೇಧಕವಾದ ಸತ್ಯ. ಇಂತಹ ಹಲವು ಸಂದರ್ಭಗಳನ್ನು ಈ ಪುಸ್ತಕ ತೆರೆದಿಡುತ್ತದೆ.

ಪ್ರಕೃತಿಯ ವಿಚಿತ್ರಗಳು ಹಲವು. ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ರಂಗಪೇಟೆ ಸಮೀಪದ ದೊಡ್ಡಗುಂಟಾ ಎಂಬ ಗ್ರಾಮದಲ್ಲಿ ಎಲ್ಲ ದಂಪತಿಗಳಿಗೂ ಅವಳಿ ಮಕ್ಕಳಾಗಿದ್ದಾರಂತೆ. ಐನೂರಕ್ಕೂ ಹೆಚ್ಚು ಅವಳಿ ಮಕ್ಕಳೇ ಅಲ್ಲಿ ಹುಟ್ಟಿದ್ದಾರೆಂಬುದು ವಿಸ್ಮಯದ ಕಾರಣ. ಹೀಗಾಗಲು ಆ ಊರಿನ ಬಾವಿಯ ನೀರು ಕಾರಣವೆಂಬುದು ಕೆಲವರ ಊಹೆ. ವೈಜ್ಞಾನಿಕ ಕಾರಣ ಯಾರಿಗೂ ತಿಳಿಯದು.

ನಾವು ಭಾರತ ದೇಶದಲ್ಲೇ ಇದ್ದರೂ ಅದರ ವೈಚಿತ್ರ್ಯಗಳನ್ನು ಅರಿತಿಲ್ಲ. ಒಂದು ಹಳ್ಳಿಯಲ್ಲಿ ಅಥವಾ ನಗರದಲ್ಲಿ ನಾವು ನೆಲೆಸಿದ್ದರೂ ಆ ಸ್ಥಳದ ಮಹಾತ್ಮ್ಯವನ್ನೂ ಐತಿಹಾಸಿಕ ಪ್ರಾಮುಖ್ಯವನ್ನು ಅರಿತಿರುವುದಿಲ್ಲ. ಕೆ.ರಮೇಶ್ ಅವರಂತಹ ಲೇಖಕರು ಸಂಶೋಧನೆ ಮಾಡಿ ಇಂತಹ ಅಮೂಲ್ಯ ವಿಚಾರಗಳನ್ನು ತಿಳಿಸಿದಾಗ ನಮ್ಮ ಕಣ್ಣುಗಳನ್ನು ಅವರು ತೆರೆಸಿದಂತಾಗುತ್ತದೆ. ಇದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರಬೇಕು. ಶಕ್ತರಾದ ಓದುಗರು ಆ ಹಳ್ಳಿಗಳಿಗೆ ಹೋಗಿ ಸಾಕ್ಷಾತ್ಕಾರವನ್ನು ಪಡೆಯಬೇಕು. ಬೇರೆ ಗ್ರಾಮಗಳ ಬಗೆಗೆ, ವಿಶಿಷ್ಟ ಆಚರಣೆಗಳ ಬಗೆಗೆ ಅರಿವಿದ್ದವರು ಅವುಗಳಿಗೆ ಅಕ್ಷರ ರೂಪವನ್ನು ಕೊಟ್ಟು ಸರ್ವಜನವೇದ್ಯವನ್ನಾಗಿ ಮಾಡಿದರೆ ಜನರ ಜ್ಞಾನದ ಪರಿಧಿ ವಿಶಾಲವಾಗುತ್ತದೆ. ದೇಶ–ವಿದೇಶಗಳನ್ನು ಸುತ್ತಿರುವ ರಮೇಶ್ ಅವರಿಂದ ಕನ್ನಡ ಜನತೆ ಇನ್ನೂ ಹೆಚ್ಚು ಸಾರಸ್ವತ ಸೇವೆಯನ್ನು ನಿರೀಕ್ಷಿಸುತ್ತದೆ. ಈ ಹಾರೈಕೆ ಸಫಲವಾಗಲಿ.

# ಸ್ವರಾಜ್ ಗ್ರಾಮಗಳಿಂದ ಆತ್ಮನಿರ್ಭರ ಭಾರತದೆಡೆಗೆ....

ಗಾಂಧೀಜಿಯವರ ಹಿಂದ್ ಸ್ವರಾಜ್ 1909 ರಲ್ಲಿ ಗುಜರಾತಿ ಭಾಷೆಯಲ್ಲಿ ಪ್ರಕಟಗೊಂಡಿತು. ಇದರ ಹಲವು ಚಾಪ್ಟರ್‌ಗಳು ದಕ್ಷಿಣ ಆಫ್ರಿಕಾದ ಇಂಡಿಯನ್ ಒಪೀನಿಯನ್ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಈ ಪುಸ್ತಕದಲ್ಲಿ ಪ್ರಸ್ತಾಪಿಸಲ್ಪಟ್ಟ ವಿಚಾರಗಳು ಪ್ರಚೋದನಕಾರಿಯಾಗಿದ್ದು ವಸಾಹತುಶಾಹಿಯ ವಿರುದ್ಧ ಜನಾಂದೋಲನವಾಗಬಹುದು ಎಂಬ ಕಾರಣಕ್ಕಾಗಿ 1910ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರ ಈ ಪುಸ್ತಕವನ್ನು ಬ್ಯಾನ್ ಮಾಡಿತು. ಕೂಡಲೇ ಗಾಂಧೀಜಿ ಸ್ವತಃ ತಾವೇ ಇದನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಪುಸ್ತಕ ಓದುಗ ಮತ್ತು ಸಂಪಾದಕನ ನಡುವೆ ನಡೆದ ಪ್ರಶ್ನೋತ್ತರಗಳನ್ನೊಳಗೊಂಡ ಸಂಭಾಷಣೆಯ ರೂಪದಲ್ಲಿದೆ.

ಇದರಲ್ಲಿ ಪ್ರಸ್ತಾಪಿಸಲ್ಪಟ್ಟ ಸ್ವರಾಜ್ ಕಲ್ಪನೆ ಅತ್ಯಂತ ಸರಳವಾಗಿದೆ. ಬ್ರಿಟಿಷ್ ನಾಗರಿಕತೆ ಒಡ್ಡಿದ ಆಧುನಿಕತೆ ಮತ್ತು ಮಟೀರಿಯಲಿಸ್ಟಿಕ್ ಬದುಕಿನಿಂದ ಸರಳ ಹಾಗೂ ಸ್ವಾವಲಂಬಿ ಜೀವನ ನಡೆಸಬೇಕೆಂಬುದು. ಗಾಂಧೀಜಿಯವರೇ ಹೇಳುವಂತೆ ಪುಸ್ತಕದಲ್ಲಿನ ವಿಚಾರಗಳು Leo Tolstoy, John Ruskin, Henry David Thoreau ಮುಂತಾದ ಬರಹಗಾರರ ಕೃತಿಗಳಲ್ಲಿ ವ್ಯಕ್ತವಾದ Anti - industrialist ವಿಚಾರಗಳಿಂದ ಪ್ರಭಾವಿಸಲ್ಪಟ್ಟವುಗಳು. ಈ ಪುಸ್ತಕದಲ್ಲಿನ ತಾತ್ವಿಕ ಹಾಗೂ ನೈತಿಕ ಆಯಾಮಗಳನ್ನೊಳಗೊಂಡ ವಿಚಾರಧಾರೆಯಲ್ಲಿ ಗ್ರಾಮಗಳು ಸ್ವಾವಲಂಬಿಯಾಗಬೇಕೆಂಬುದೂ ಒಂದು. ನಿಜವಾದ ಭಾರತ ಹಳ್ಳಿಗಳಲ್ಲಿ ನೆಲೆಸಿದೆ ಎಂದು ನಂಬಿದ್ದ ಅವರು ಸ್ವಾವಲಂಬಿ ಗ್ರಾಮಗಳ ನಿರ್ಮಾಣ ಸ್ವಾವಲಂಬಿ ಭಾರತಕ್ಕೆ ಬುನಾದಿಯಾಗುತ್ತದೆ ಎಂಬುದನ್ನು ಮನಗಂಡಿದ್ದರು. ಹಾಗಾಗಿ ಗ್ರಾಮಗಳು ತಮ್ಮ ಅಗತ್ಯಗಳಾದ ಆಹಾರ, ಬಟ್ಟೆ, ವಸತಿ ಮುಂತಾದ ಅವಶ್ಯಕತೆಗಳನ್ನು ತಾವೇ ಉತ್ಪಾದಿಸಿ, ವಿದೇಶಿ ವಸ್ತುಗಳು ಹಾಗೂ ಯಂತ್ರಗಳ ಅವಲಂಬನೆಯನ್ನು ತ್ಯಜಿಸಿ ಸ್ವಾವಲಂಬಿಯಾಗಬೇಕೆಂಬುದು ಅವರ ಚಿಂತನೆಯಾಗಿತ್ತು.

ಆದರೆ ಹಿಂದ್ ಸ್ವರಾಜ್‌ದಲ್ಲಿ ಗಾಂಧೀಜಿ ಪ್ರತಿಪಾದಿಸಿದ ಸ್ವಾವಲಂಬಿ ಗ್ರಾಮಗಳ ಕಲ್ಪನೆ ಜಾಗತೀಕರಣಗೊಂಡ ಇಂದಿನ ಜಗತ್ತಿಗೆ ಪ್ರಸ್ತುತವೇ? ಏಕೆಂದರೆ, ಇಂದು ಪ್ರಪಂಚದ ಯಾವುದೇ ದೇಶ ಇನ್ನೊಂದು ರಾಷ್ಟ್ರದ ಜೊತೆಗೆ ವ್ಯಾಪಾರ ವಹಿವಾಟು ನಡೆಸದೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಅಸಾಧ್ಯ. ಅಲ್ಲದೇ ಹಿಂದೆಂದೂ ಇಲ್ಲದಷ್ಟು ರಾಷ್ಟ್ರವಾದವು ಇಂದು ಪ್ರತೀ ರಾಷ್ಟ್ರದ ಅಜೆಂಡಾ ಆಗಿದ್ದರೂ ಇನ್ನೊಂದು ರಾಷ್ಟ್ರದ ಅವಲಂಬನೆ ಅನಿವಾರ್ಯವಾಗಿದೆ. ಹಾಗಾಗಿ ಗಾಂಧೀಜಿ ಕಂಡ ಗ್ರಾಮ್ ಸ್ವರಾಜ್ ಕೂಡ ನಾವು ಕನಸಿನಲ್ಲಿ ಕಂಡು ಎಚ್ಚರಗೊಂಡಾಗ ಹಳಹಳಿಸುವ ಭಾವತೀವ್ರತೆ ಮಾತ್ರ; ಅದೊಂದು ಸುಂದರ ಕನಸು ಎಂದೆನಿಸಿದರೆ ಆಶ್ಚರ್ಯವಿಲ್ಲ. ಸ್ವತಃ ಜವಾಹರಲಾಲ್ ನೆಹರುರವರೇ 1945 ರಲ್ಲಿ ಗಾಂಧೀಜಿಯವರಿಗೆ ಬರೆದ ಪತ್ರದಲ್ಲಿ ಹಿಂದ್ ಸ್ವರಾಜ್ ಪುಸ್ತಕದಲ್ಲಿನ ಕೈಗಾರಿಕಾ ವಿರೋಧಿ ಮತ್ತು ಆಧುನಿಕ ವಿರೋಧಿ ದೃಷ್ಟಿಕೋನವನ್ನು ನಯವಾಗಿಯೇ ನಿರಾಕರಿಸಿದ್ದರು. ಅಷ್ಟೇ ಏಕೆ, ಹಿಂದ್ ಸ್ವರಾಜ್‌ದಲ್ಲಿನ ತತ್ವಗಳು 'ವಾಸ್ತವದಿಂದ ದೂರವಾಗಿವೆ. ಎಂದು ವಾದಿಸಿದ್ದರು. ಹಾಗಾಗಿ ಕೆಲವರಿಗೆ ಇದೊಂದು ಹಿಮ್ಮುಖ ಚಲನೆಯೆಂದು ತೋರಬಹುದು. ಹೀಗಿದ್ದೂ ನಾವು ಗ್ರಾಮ ಸ್ವರಾಜ್ಯದ ಕನಸು ಕಾಣುವುದು ಉಚಿತವೇ ಎಂಬ ಪ್ರಶ್ನೆಗೆ ಸಕಾರಾತ್ಮಕವಾಗಿ ಆಲೋಚಿಸಬಹುದು.




ದೇಶ ಆಂತರಿಕವಾಗಿ ಬಲಾಢ್ಯವಾಗಬೇಕಾದರೆ ಆರ್ಥಿಕ ಸ್ವಾವಲಂಬನೆ ಅನಿವಾರ್ಯ. ಈ ನಿಟ್ಟಿನಲ್ಲಿ ದೇಶದ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಬೇಕೆಂದರೆ ಸ್ವಾವಲಂಬನೆಯತ್ತ ನಾವು ನಡೆಯಲೇಬೇಕು. ಈ ಸ್ವಾವಲಂಬನೆಯ ಹೆಜ್ಜೆಗಳನ್ನು ನಾವು ಗ್ರಾಮಗಳಿಂದ ಪ್ರಾರಂಭಿಸಬೇಕು. ಏಕೆಂದರೆ ನಮ್ಮ ಗ್ರಾಮಗಳು ದೇಶದ ಅಭಿವೃದ್ಧಿಗೆ ಅಡಿಪಾಯಗಳಿದ್ದಂತೆ, ಗ್ರಾಮಗಳ ಬಲವರ್ಧನೆಯಿಂದ ದೇಶದ ಆರ್ಥಿಕತೆಗೆ ಒಂದು ಭದ್ರ ಬುನಾದಿ ದೊರಕುತ್ತದೆ. ಇನ್ನು ಗ್ರಾಮೀಣ ಭಾಗದ ಬಹುಪಾಲು ಜನರ ಕುಲಕಸುಬು ವ್ಯವಸಾಯ, ಹಾಗಾಗಿ ವ್ಯವಸಾಯ ಮತ್ತು ಅದಕ್ಕೆ ಪೂರಕವಾದ ಕುಲಕಸುಬುಗಳ ಅಭಿವೃದ್ಧಿಯನ್ನು ಗಾಂಧೀಜಿಯವರ ಹಿಂದ್ ಸ್ವರಾಜ್ ತತ್ವಗಳ, ಪರಿಪೇಕ್ಷೆಯಲ್ಲಿ ವಿಶ್ಲೇಷಿಸಿ ನೋಡುವ ಹಾಗೂ ಅವುಗಳನ್ನು ಸಾಕಾರಗೊಳಿಸುವ ಮಾರ್ಗೋಪಾಯಗಳೇನು ಎಂಬುದರ ಬಗ್ಗೆ ಗಂಭೀರ ಚಿಂತನೆಗಳು ಆಗಬೇಕಾದದ್ದು ಇಂದಿನ ತುರ್ತು. ಈ ದಿಶೆಯಲ್ಲಿ ಈ ಹಿಂದೆ ನಡೆದಿರುವ ಕೆಲವು ಪ್ರಯೋಗಗಳನ್ನು ನೋಡಬಹುದು.

ಇತ್ತೀಚೆಗೆ ಮೈಸೂರಿನಲ್ಲಿ ಆಶಾ ಕಿಸಾನ್ ಸ್ವರಾಜ್ ಸಂಸ್ಥೆಯ ಸಹಯೋಗದೊಂದಿಗೆ ಕರ್ನಾ ಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ – ಕಿಸಾನ್ ಸ್ವರಾಜ್' ಉತ್ಸವವನ್ನು ನೋಡಬಹುದು. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ ಸಾವಯವ ಕೃಷಿಕರು, ಕೃಷಿ ತಜ್ಞರು, ವಿಜ್ಞಾನಿಗಳು ಹಾಗೂ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳನ್ನೊಳಗೊಂಡ ಈ ಸಮ್ಮೇಳನದಲ್ಲಿ ಸಾವಯವ ಕೃಷಿ, ಬೀಜ ಹಕ್ಕು ಮತ್ತು ರೈತರ ಸ್ವಾವಲಂಬನೆಯ ಮಾರ್ಗಗಳ ಬಗ್ಗೆ ಚರ್ಚೆಗಳು ನಡೆದವು. ಅಲ್ಲದೆ ಸಾವಯವ ಉತ್ಪನ್ನಗಳ ಪ್ರದರ್ಶನ, ನೂಲುವ ನೇಯ್ದು ಪ್ರದರ್ಶನ ಮುಂತಾದ ಪ್ರಾತ್ಯಕ್ಷಿಕೆಗಳನ್ನೊಳಗೊಂಡ ಈ ಉತ್ಸವ ರೈತರನ್ನು ಸ್ವಾವಲಂಬಿ ಹಾಗೂ ಸುಸ್ಥಿರ ಕೃಷಿಯತ್ತ ಸೆಳೆಯುವ ಆಶಾಕಿರಣದಂತೆ ನೆರವೇರಿದೆ. ಆದರೆ, ಇಂತಹ ಪ್ರಯೋಗಗಳು ಜಾತ್ರೆಗಳಂತೆ ವರ್ಷಕ್ಕೊಮ್ಮೆ ನಡೆದರೆ ಸಾಲದು, ಈ ರೈತೋಪಯೋಗಿ ಕಾರ್ಯಕ್ರಮಗಳು ನಿರಂತರವಾಗಿ ನಡೆದು ಸಾವಯವ ಕೃಷಿ ಕುರಿತು ಜಾಗೃತಿ ಹಾಗೂ ಮಾರ್ಗದರ್ಶನ ರೈತರಿಗೆ ದೊರಕುವಂತಾಗಬೇಕು. ಅಲ್ಲದೆ ಈ ಪ್ರಯೋಗಗಳು, ಜಿಲ್ಲಾ ಕೇಂದ್ರಗಳಿಂದ ಗ್ರಾಮೀಣ ಭಾಗಗಳತ್ತ ಮುಖ ಮಾಡಬೇಕು. ಪ್ರತಿ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಬೆಳೆವಿಮೆ ಯೋಜನೆ, ಕೃಷಿ ಉಪಕರಣ ವಿತರಣೆ, ಮಣ್ಣಿನ ಫಲವತ್ತತೆಯ ಪರೀಕ್ಷೆ ಮುಂತಾದ ಸೇವೆಗಳ ಜೊತೆಗೆ ಸಾವಯವ ಕೃಷಿ ಘಟಕ ಸ್ಥಾಪನೆಯಾಗಬೇಕು. ಆದರ ಮೂಲಕ ರೈತರಿಗೆ ಸಾವಯವ ಕೃಷಿ ವಿಧಾನ ಹಾಗೂ ಸಾವಯವ ಕೃಷಿಗೆ ಸರ್ಕಾರದ ಯೋಜನೆಗಳ ಬಗ್ಗೆ ನಿರಂತರ ಮಾರ್ಗದರ್ಶನ ಸಿಗಬೇಕು. ಅಲ್ಲದೆ ಈಗಿರುವ ಹಲವು ರೈತಪರ ಸರ್ಕಾರಿ ಯೋಜನೆಗಳು ಹಾಗೂ ಸಬ್ಸಿಡಿಗಳನ್ನು ಒಳಗೊಂಡಂತೆ ಸಾವಯವ ಕೃಷಿಗೆ ಹೆಚ್ಚಿನ ಅನುದಾನ, ಪ್ರೋತ್ಸಾಹಧನ ನೀಡುವಂತಾಗಬೇಕು. ಅಲ್ಲದೆ ಸಾವಯವ ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಗ್ರಾಹಕರು ಕೊಂಡುಕೊಳ್ಳುವ ಮಾರುಕಟ್ಟೆ ನಿರ್ಮಾಣವಾಗಬೇಕು.

ಈ ದಿಸೆಯಲ್ಲಿ ಮಂಡ್ಯದ ಪಾಂಡವಪುರದಲ್ಲಿ ಈ ಹಿಂದೆ ನಡೆದ ಸ್ವರಾಜ್ ಉತ್ಸವ ಇನ್ನೊಂದು ಅತ್ಯಂತ ಮಹತ್ವಾಕಾಂಕ್ಷೆಯ ಪ್ರಯೋಗ, ಗಾಂಧೀವಾದದ ಒಂದು ವಿಶಿಷ್ಟ ಭಾಗವಾದ ಹಿಂದ್ ಸ್ವರಾಜ್ ಎಂಬ ಸ್ವಾವಲಂಬಿ ಗ್ರಾಮಗಳ ಕಲ್ಪನೆಯ ತತ್ವಗಳ ಸಮನ್ವಯತೆ ಹಾಗೂ ಅನುಸಂಧಾನದಂತೆ ಸ್ವರಾಜ್ ಉತ್ಸವ ನೆರವೇರಿದೆ. ಪರದೆಯ ಮೇಲೆ ಭಿನ್ನ ಪಾತ್ರಗಳು ತಮ್ಮ ಪಾತ್ರಗಳ ಓರೆಕೋರೆಗಳ ಅಂಕೆಯಲ್ಲಿ ನಟಿಸಿ, ನಗಿಸಿ, ಅಳಿಸಿ ಮಾಯವಾಗುವಂತೆ ಒಂದು ದಿನದ ಈ ಸ್ವರಾಜ್ ಉತ್ಸವ ಗಾಂಧೀಜಿ ತತ್ವಧಾರೆಯ ಪ್ರಾತ್ಯಕ್ಷಿಕೆಗಳನ್ನು ಒಳಗೊಂಡಂತೆ ಸಾರ್ವಜನಿಕರಲ್ಲಿ ಭಿನ್ನ ರೀತಿಯ ಅರಿವು ಮತ್ತು ಜಾಗೃತಿ ಮೂಡಿಸುವ ಸುಮಾರು 40ಕ್ಕೂ ಹೆಚ್ಚು ಸರ್ಕಾರೇತರ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮೇಲುಕೋಟೆ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿತು. ಇಂತಹ ಪ್ರಯೋಗಗಳು ಸ್ವಾತಂತ್ರ್ಯನಂತರ ಹಲವಾರು ಕಡೆ ನಡೆದು ದೇಶಿ ಮೂಲದ ವಸ್ತು, ಮೌಲ್ಯ ಹಾಗೂ ಆಲೋಚನೆಗಳಿಗೆ ಅಭಿವ್ಯಕ್ತಿಯಾಗಿ ದೇಶದ ಜನತೆಯನ್ನು ರಂಜಿಸುವಲ್ಲಿ ಯಶಸ್ವಿಯಾಗಿವೆ. ಈ ರಂಜನೆ ಸಿನಿಮಾ ನೋಡಲು ಹೋದ ಜನತೆಯ ಅನುಭವದಂತೆ, ಸಿನಿಮಾ ಮುಗಿದು ಚಿತ್ರಮಂದಿರದಲ್ಲಿ ಬೆಳಕು ಬಿದ್ದಾಗ, ಬಿಳಿ ಪರದೆ ಸೃಷ್ಟಿಸಿದ ಆ ಭ್ರಮಾ ಲೋಕ ಕಣ್ಮರೆಯಾಗಿ ಮತ್ತೆ ನಿತ್ಯಜೀವನದ ತೊಳಲಾಟ, ಕೋಪ ತಾಪಗಳು ಹತಾಶೆ ನಮ್ಮನ್ನು ಆಕ್ರಮಿಸಿಬಿಡುತ್ತವೆ. ಇವುಗಳಿಂದ ತಪ್ಪಿಸಿಕೊಳ್ಳಲು ಮತ್ತೊಂದು ಸಿನಿಮಾ ಮತ್ತೊಂದು ಭ್ರಮಾಲೋಕ. ಇಂತಹ ಅನೇಕ ಉತ್ಸವಗಳು ಭ್ರಮಾಲೋಕವನ್ನು ಸೃಷ್ಟಿಸಿ ಕಣ್ಮರೆಯಾಗುವುದು ಇಂದು ಸ್ವಾಭಾವಿಕವಾಗಿಬಿಟ್ಟಿದೆ. ಆದರೆ, ಇಂತಹ ಪ್ರಯತ್ನಗಳ ಪ್ರಾಮುಖ್ಯತೆಯನ್ನು ಅಲ್ಲಗಳೆಯಲಾಗದು. ಈ ಉತ್ಸವಗಳನ್ನು ಪ್ರಯೋಗಶೀಲತೆಯಿಂದ ಆಚರಣೆಗಳತ್ತ ತೆಗೆದುಕೊಂಡು ಹೋಗುವ ಗುರುತರ ಜವಾಬ್ದಾರಿ ಈ ಉತ್ಸವಗಳ ಆಯೋಜಕರದ್ದು ಮಾತ್ರವಲ್ಲ, ಬದಲಾಗಿ ಇದರಲ್ಲಿ ಸಾರ್ವಜನಿಕರ ಸಹಭಾಗಿತ್ವವು ಅಷ್ಟೇ ಮುಖ್ಯವಾದುದು. ಈ ಪ್ರಯತ್ನಗಳು ಸಾಕಾರಗೊಳ್ಳಬೇಕಾದರೆ ಅವುಗಳು ನಿರಂತರವಾಗಿ ಸಾರ್ವಜನಿಕರನ್ನು ತಮ್ಮತ್ತ ಸೆಳೆಯುವಂತಾಗಬೇಕು. ಅಲ್ಲದೆ ಇಂತಹ ಉತ್ಸವಗಳು ವ್ಯಕ್ತಿಕೇಂದ್ರಿತವಾಗದೆ ತತ್ವಕೇಂದ್ರಿತವಾಗಬೇಕು. ಹಾಗಾದಾಗ ಮಾತ್ರ ಗಾಂಧೀಜಿ ಜೀವಂತ ಪ್ರಜ್ಞೆಯಾಗಿ ನಮ್ಮೊಳಗೆ ಇನ್ನೂ ಉಳಿದಿದ್ದಾರೆ. ಎಂದೇ ಹೇಳಬೇಕು. ಈ ಉತ್ಸವಗಳ ಪ್ರಸ್ತುತತೆ ಇರುವುದು ಅವು ಕೇವಲ ಪ್ರಯೋಗಗಳಾಗದೆ ಚಳವಳಿಗಳಾದಾಗ, ಹಾಗಾದರೆ ಮಾತ್ರ ನಾವು ನೈಜ ಸ್ವಾತಂತ್ರ್ಯದತ್ತ ಹೆಜ್ಜೆ ಹಾಕುತ್ತಿದ್ದೇವೆ ಎಂದರ್ಥ.

ಇತ್ತ ಪ್ರಧಾನಿ ನರೇಂದ್ರ ಮೋದಿಯವರಿಂದ ಘೋಷಿಸಲ್ಪಟ್ಟ ಮಹತ್ವಾಕಾಂಕ್ಷೆಯ ಯೋಜನೆ 'ಆತ್ಮನಿರ್ಭರ ಭಾರತ ಅಭಿಯಾನ' ನೋಡಬಹುದು. ಕೋವಿಡ್–19 ನಂತರ ಎದುರಾದ ಆರ್ಥಿಕ ಮುಗ್ಗಟ್ಟನ್ನು ಪುನಶ್ಚೇತನಗೊಳಿಸಲು ಮತ್ತು ದೇಶವನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಲು ರೂಪಿಸಲ್ಪಟ್ಟ ಮೇಕ್ ಇನ್ ಇಂಡಿಯಾ ಹಾಗೂ 'ವೋಕಲ್ ಫಾರ್ ಲೋಕಲ್' ಎಂಬ ಸ್ವಾವಲಂಬಿ ತತ್ವಗಳು ಗಾಂಧೀಜಿಯವರ ಸ್ವದೇಶಿ ಚಳವಳಿಯ ತತ್ವಗಳಿಂದ ಪ್ರೇರಿತವಾಗಿವೆ. ಈ ಅಭಿಯಾನದಡಿ ಸ್ಥಳೀಯ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಸುಮಾರು 20 ಲಕ್ಷ ಕೋಟಿಗಳ(ಜಿಡಿಪಿಯ 10%) ಅನುದಾನವನ್ನು ಕೇಂದ್ರ ಸರ್ಕಾರ ಮೀಸಲಿಟ್ಟಿದೆ. ಇದರಲ್ಲಿ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಹೆಚ್ಚಿನ ಸಾಲ ಮತ್ತು ನೆರವು ನೀಡುವುದು, ರಕ್ಷಣಾ ಉಪಕರಣಗಳ ದೇಶೀಯ ಉತ್ಪಾದನೆ, ರೈತರಿಗೆ ಉತ್ತಮ ಮಾರುಕಟ್ಟೆ ಮತ್ತು ಮೂಲಸೌಕರ್ಯ ಒದಗಿಸುವಲ್ಲಿ ಮುಖ್ಯವಾದವುಗಳು.

ಈ ಎಲ್ಲ ಮಾದರಿಗಳ ಹಿನ್ನೆಲೆಯಲ್ಲಿ ಗ್ರಾಮಗಳು ಸ್ವಾವಲಂಬಿಯಾಗುವತ್ತ ನಿರಂತರವಾಗಿ ಹೋರಾಟಗಳು, ಚಳವಳಿಗಳು ನಡೆಯಬೇಕು. ಈ ಚಳವಳಿಯ ಕೇಂದ್ರ ಕೃಷಿಕನಾಗಬೇಕಲ್ಲದೆ ದೇಶದ ಅಮೂಲಾಗ್ರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವಂತಾ ಗಬೇಕು. ಏಕೆಂದರೆ ಭಾರತದ ಒಟ್ಟು ಕಾರ್ಯಪಡೆ ಯಲ್ಲಿ ಸುಮಾರು 46–58% ರಷ್ಟು ಜನರು ನೇರವಾಗಿ ಅಥವಾ ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿ ದ್ದಾರೆ. ಆದರೆ ನೋವಿನ ಸಂಗತಿಯೆಂದರೆ ಇಷ್ಟು ದೊಡ್ಡ ಕಾರ್ಯಪಡೆ ಹೊಂದಿದ ಈ ವರ್ಗ ಸರ್ಕಾ ರದ ನಿರ್ಲಕ್ಷಕ್ಕೆ ಗುರಿಯಾಗಿರುವುದು, ಪೂರ್ಣ ಚಂದ್ರ ತೇಜಸ್ವಿಯವರು ತುಂಬಾ ವಿಷಾದದಿಂದ ಈ ಮಾತನ್ನು ಹೇಳುತ್ತಾರೆ. 'ನಮ್ಮ ರಾಜ್ಯದಲ್ಲಿ ರೈತಪರ ಚಳವಳಿಗಳು ಅನೇಕವು ನಡೆದಿವೆ. ಅವುಗಳಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಚಳುವಳಿ ಅತ್ಯಂತ ಪ್ರಮುಖವಾದುದು. ಆದರೆ ಈ ಯಾವ ಚಳವಳಿಗೂ ರೈತನನ್ನು ಪ್ರಮುಖ ರಾಜಕೀಯ ಶಕ್ತಿಯನ್ನಾಗಿ ಮಾಡಲು ಸಾಧ್ಯವಾಗಲಿಲ್ಲ' (ಸಹಜ ಕೃಷಿ, ಪುಟ 2), ದೇಶ ಕಟ್ಟುವ ನಾಯಕರು ಇನ್ನಾದರು ರೈತರ ಹಿತ ಕಾಪಾಡುವಲ್ಲಿ ನೈಜ ಕಾಳಜಿಯಿಂದ ಯೋಜನೆಗಳನ್ನು ರೂಪಿಸಲಿ. ಒಟ್ಟಾರೆಯಾಗಿ, ಆತ್ಮ ನಿರ್ಭರ ಭಾರತ ಎಂಬುದು ಸ್ವಾವಲಂಬಿ ಸ್ವರಾಜ್ ಗ್ರಾಮಗಳಿಂದ ಪ್ರಾರಂಭವಾಗಿ ದೇಶವ್ಯಾಪಿ ಚಳವಳಿಯಾಗಬೇಕು. ಹಾಗೂ ಈ ಚಳವಳಿಯಲ್ಲಿ ಪ್ರತಿಯೊಬ್ಬ ಪ್ರಜೆ ಸ್ವ–ಇಚ್ಛೆಯಿಂದ ಪಾಲ್ಗೊಂಡು ಸಕಾರಾತ್ಮಕವಾಗಿ ತಮ್ಮ ಕೈಲಾದಷ್ಟು ಕೊಡುಗೆ ನೀಡಬೇಕು. ಆಗ ಮಾತ್ರ ಗಾಂಧೀಜಿ ಪ್ರತಿಪಾದಿಸಿದ ಸ್ವಾವಲಂಬಿ ಸ್ವರಾಜ್ ಪರಿಕಲ್ಪನೆ ಸಾಕಾರಗೊಳ್ಳಬಹುದು.



–ಡಾ.ನಾಗೇಶ ಡೂಗನವರ
ಸಹಾಯಕ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ, ಮಂಡ್ಯ ಜಿಲ್ಲೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಡ್ರಗ್ಸ್ ಸೇವನೆಯಿಂದಾಗುವ ದುಷ್ಪರಿಣಾಮದ ಬಗ್ಗೆ ಯುವ ಜನರಿಗೆ ಮನವರಿಕೆ ಮಾಡಿ

## ಅಧಿಕಾರಿಗಳಿಗೆ ಡಿಸಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ

ಮೈಸೂರು, ಮಾ.24(ಎಂಟಿವೈ)– ಮೈಸೂರು ನಗರ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಡ್ರಗ್ಸ್ ಸೇವನೆ, ಮಾರಾಟಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರೊಂದಿಗೆ ಯುವ ಜನರಲ್ಲಿ ಡ್ರಗ್ಸ್ ಸೇವನೆಯಿಂದಾಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡ್ರಗ್ಸ್ ಬಳಕೆ ಮಾಡುವುದು, ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಈ ಕುರಿತು ಯುವ ಜನರಲ್ಲಿ ಡ್ರಗ್ಸ್ ಬಳಕೆಯ ಅಪಾಯದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ನಾರ್ಕೋಟಿಕ್ ರಿಲೇಟೆಡ್ ಆಗಿ ಬಳಸುವ ಔಷಧಿಗಳ ಮಾರಾಟ ಕುರಿತ ಮಾಹಿತಿಯ ರಿಜಿಸ್ಟರ್ ಅನ್ನು ಮೆಡಿಕಲ್ ಶಾಪ್‌ಗಳಲ್ಲಿ ಕಡ್ಡಾಯವಾಗಿ ಇಡಬೇಕು. ತಪ್ಪಿದಲ್ಲಿ ಅಂತಹ ಮೆಡಿಕಲ್ ಶಾಪ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು. ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ಡ್ರಗ್ಸ್ ಬಳಕೆ ಮಾಡಲಾಗುತ್ತಿದೆ ಎಂದು ಕೆಟ್ಟ ಹೆಸರು ಬರುತ್ತಿದೆ. ಯುವಕ-ಯುವತಿಯರು ಹೆಚ್ಚಾಗಿ ಡ್ರಗ್ ಅಡಿಟ್ ಆಗುತ್ತಿದ್ದಾರೆ. ಇದನ್ನು ತಡೆಗಟ್ಟಬೇಕು ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕಾರ್ಯನಿರ್ವಹಿಸಿ ಎಂದು ಸೂಚಿಸಿದರು. ಸಭೆಯಲ್ಲಿ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಡಿಸಿಪಿ ಸುಂದರ್ ರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆ ನಡೆಯಿತು.

> ಶಾಲಾ-ಕಾಲೇಜು ಕ್ಯಾಂಪಸ್‌ಗಳಲ್ಲಿ ತಪಾಸಣೆ ನಡೆಸಬೇಕು. ಡ್ರಗ್ಸ್ ಬಳಕೆ, ಮಾರಾಟ ಕಂಡುಬಂದರೆ ಕೂಡಲೇ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟ ತಡೆಗೆ ಸಾರ್ವಜನಿಕರ ಸಹಕಾರ ಪಡೆದು, ಅವರಿಂದ ಮಾಹಿತಿ ಪಡೆದುಕೊಂಡು ಕಾರ್ಯೋನ್ಮುಖರಾಗಬೇಕು. ಮಾದಕ ವಸ್ತುಗಳಿಗೆ ದಾಸರಾಗುವ ಮಕ್ಕಳ ಬಗ್ಗೆಯೂ ಪೋಷಕರು ಎಚ್ಚರಿಕೆಯಿಂದ ಗಮನಿಸಿ, ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅಮಾಯಕರಿಗೆ ಮಾದಕ ವಸ್ತು ಸರಬರಾಜು ಮಾಡುವವರ ಪತ್ತೆ ಮಾಡಬೇಕು. –ಲಕ್ಷ್ಮಿಕಾಂತರೆಡ್ಡಿ, ಡಿಸಿ.

# ಸಂಗೀತ ವಿವಿಯಲ್ಲಿ ಪ್ರತಿ ತಿಂಗಳು ವಿವಿಧ ಪ್ರದರ್ಶಕ ಕಲೆಗಳ ಪ್ರಸ್ತುತಿ

## ಪುಟ್ಟರಾಜ ಗವಾಯಿ, ಗಂಗೂಬಾಯಿ ಹಾನಗಲ್ ಜನ್ಮೋತ್ಸವದಲ್ಲಿ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ ಮಾಹಿತಿ

ಮೈಸೂರು,ಮಾ.24(ಎಂಟಿವೈ)–ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕಲಾವಿದರನ್ನು ಸೃಷ್ಟಿಸುತ್ತಿರುವ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಿಂದ ಪ್ರತಿ ತಿಂಗಳು ವಿವಿಧ ಪ್ರದರ್ಶಕ ಕಲೆಗಳ ಪ್ರಸ್ತುತಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗುವುದು ಎಂದು ಸಂಗೀತ ವಿವಿ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ ತಿಳಿಸಿದ್ದಾರೆ.

ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ ಪಂ.ಪುಟ್ಟರಾಜ ಗವಾಯಿ ಮತ್ತು ಡಾ.ಗಂಗೂಬಾಯಿ ಹಾನಗಲ್ ಅವರ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಯನ ಸಂಗೀತ, ವಾದ್ಯಗಳ, ನೃತ್ಯ, ರಂಗಭೂಮಿ ಕಲಾ ವಿಭಾಗದವರು ಒಂದೊಂದು ತಿಂಗಳು ಕಾರ್ಯಕ್ರಮದ ನಿರ್ವಹಣೆ ಮಾಡುತ್ತಾರೆ. ಆಯಾಯ ವಿಭಾಗದ ಗುರುವಿನ ಸ್ಥಾನದಲ್ಲಿರುವ ಉಪನ್ಯಾಸಕರು, ಸಂದರ್ಶನಕ ಉಪನ್ಯಾಸಕರು, ಕಲಿಯುತ್ತಿರುವ ವಿದ್ಯಾರ್ಥಿಗಳೇ ಈ ಪ್ರದರ್ಶನ ನೀಡಲಿದ್ದು, ಇದಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಿ ಕೊಡಲಾಗುತ್ತದೆ. ನಮ್ಮ ವಿವಿಯ ಗುರುಗಳು ರಾಷ್ಟ್ರ, ರಾಜ್ಯಮಟ್ಟದ ಕಲಾವಿದರನ್ನು ಸೃಷ್ಟಿ ಮಾಡಬೇಕು. ಇಂತಹ ಜವಾಬ್ದಾರಿಯು ಇಲ್ಲಿರುವ ಗುರುಗಳ ಮೇಲಿದೆ. ಇದನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು ಎಂದರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪ್ರಮುಖ, ಪ್ರಭಾವಶಾಲಿಯಾಗಿರುವ ಕಿರಾಣಾ ಘರಾನಾ ಶೈಲಿಯಲ್ಲಿ ಬೆರುಗು ಮೂಡಿಸಿದವರು ಗಂಗೂಬಾಯಿ. ಸ್ವರಗಳ ನಿಖರತೆ, ಭಾವಪೂರ್ಣ ಆಲಾಪನೆ, ನಿಧಾನಗತಿಯ ಖಯಾಲ್ ಗಾಯನಕ್ಕೆ ಹೆಸರುವಾಸಿಯಾಗಿರುವ ಘರಾನಾ ಎಂಬ ಗಂಡಿನ ಧ್ವನಿಯಲ್ಲಿ ಇವರು ಮಿಂಚಿದವರು. ಅವರ ಹೆಸರಿನಲ್ಲಿರುವ ಈ ವಿವಿ ವಿದ್ಯಾರ್ಥಿಗಳು ಸಹ ಸಾಧನೆ ಮಾಡುವ ಮೂಲಕ ಅವರಿಗೆ ಹೆಸರು ತರಬೇಕು ಎಂದು ಹೇಳಿದರು.

ಪಂಡಿತ ಪುಟ್ಟರಾಜ ಗವಾಯಿ ಸಂಗೀತ ಲೋಕಕ್ಕೆ ಅಪಾರ ಕೊಡುಗೆ ನೀಡಿ, ಭಕ್ತರ ಪಾಲಿಗೆ ನಡೆದಾಡುವ ದೇವರು ಎಂದೆನಿಸಿದ್ದವರು. ಅಂಧರಾಗಿದ್ದರೂ ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಹಾರ್ಮೋನಿಯಂ ಕಲಿಯುವ ಮೂಲಕ ಸಂಗೀತ ಸಾಮ್ರಾಟ್ ಎಂಬ ಕೀರ್ತಿಗೆ ಭಾಜನರಾದವರು. ಗಾಯನವಷ್ಟೇ ಅಲ್ಲದೆ ಸಂಗೀತ ಲೋಕದ ಅನೇಕ ವಾದ್ಯಗಾರಿಕೆಯಲ್ಲೂ ಅವರಿಗೆ ಅಪ್ರತಿಮ ಸಾಧನೆ ಮಾಡಿದವರು ಎಂದು ಹೇಳಿದರು.

ಬಳಿಕ ಹಿಂದೂಸ್ತಾನಿ ಗಾಯಕರಾದ ಶಾರದಾ ಭಟ್, ಗೋಪಾಲ್ ರಾಯಚೂರು ಅವರು ಸಂಗೀತ ಕಛೇರಿ ನಡೆಸಿಕೊಟ್ಟರು. ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ್, ಹಣಕಾಸು ಅಧಿಕಾರಿ ಸಿ.ಪಿ.ಸೌಮ್ಯಶ್ರೀ, ಅತಿಥಿ ಉಪನ್ಯಾಸಕಿ ಡಾ.ಪಾರ್ವತಿ ಜೋಡಿ ಉಪಸ್ಥಿತರಿದ್ದರು.



ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ ಪಂ.ಪುಟ್ಟರಾಜ ಗವಾಯಿ, ಡಾ.ಗಂಗೂಬಾಯಿ ಹಾನಗಲ್‌ರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಸಂಗೀತ ವಿವಿ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ ಉದ್ಘಾಟಿಸಿದರು.

> ಪುಟ್ಟರಾಜ ಗವಾಯಿ, ಗಂಗೂಬಾಯಿ ಹಾನಗಲ್ ಅವರಿಬ್ಬರು ಶಾಸ್ತ್ರೀಯ ಸಂಗೀತ ಲೋಕದ ಧ್ರುವತಾರೆಯರು. ಸಾಮಾನ್ಯ ಕುಟುಂಬದಿಂದ ಬಂದಂತಹ ಈ ಮಹನೀಯರು ದೊಡ್ಡ ಸಾಧನೆ ಮಾಡುವ ಮೂಲಕ ಇಡೀ ಸಂಗೀತ ಜಗತ್ತು ಕರ್ನಾಟಕದತ್ತ ನೋಡುವಂತೆ ಮಾಡಿದವರು. ಈಗಿನ ಯುವ ಸಂಗೀತ ಕಲಾವಿದರು ಇವರು ತೋರಿದ ದಾರಿಯಲ್ಲಿ ಸಾಗಬೇಕು.
> –ಪ್ರೊ.ಕೆ.ರಾಮಕೃಷ್ಣಯ್ಯ

# ಮನುಷ್ಯ ವಿಜ್ಞಾನವನ್ನು ಕೆಟ್ಟ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದಾನೆ

- ಮಹಿಳಾ ದಿನಾಚರಣೆಯಲ್ಲಿ ಮೈಸೂರು ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಬಿ.ಎನ್.ವೀಣಾ ವಿಷಾದ
- ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ರಮಾಬಾಯಿ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ರಮಾಬಾಯಿ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮಾ.24(ಜಿಎ)–ಮನುಷ್ಯ ಹೆಚ್ಚು ಬುದ್ಧಿವಂತನಾದಷ್ಟು ವಿಜ್ಞಾನದ ಬೆಳವಣಿಗೆಗಳನ್ನು ಕೆಟ್ಟ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾನೆ ಎನಿಸುತ್ತದೆ. ಈ ಕಾರಣದಿಂದಲೇ ಇಂದಿನ ಯುದ್ಧಗಳು ಮೊದಲಿಗಿಂತ ಹೆಚ್ಚು ವಿನಾಶಕಾರಿಯಾಗುತ್ತಿವೆ ಎಂದು ಪಾಲಿಕೆ ಹೆಚ್ಚುವರಿ ಆಯುಕ್ತೆ ಬಿ.ಎನ್.ವೀಣಾ ವಿಷಾದಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ರಮಾಬಾಯಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಇತಿಹಾಸವನ್ನು ತಿಳಿಯದವನು ಇತಿಹಾಸ ಸೃಷ್ಟಿಸಲಾರ ಎಂಬ ಮಾತು ಸದಾ ಸೂಕ್ತವಾಗಿದೆ. ಇದನ್ನು ಎಂದಿಗೂ ಮರೆಯಬಾರದು. ಇದೇ ವೇಳೆ ಪ್ರತಿಯೊಬ್ಬ ಪುರುಷನ ಸಾಧನೆ ಹಿಂದೆಯೇ ಓರ್ವ ಮಹಿಳೆ ಇದ್ದೇ ಇರುತ್ತಾಳೆ. ಅಂಬೇಡ್ಕರ್ ಅವರ ಪತ್ನಿ ರಮಾಬಾಯಿ ಹೆಚ್ಚು ಓದಿದವರಲ್ಲ. ಆದರೆ ಅಂಬೇಡ್ಕರ್ ಅವರ ಸಾಧನೆಗೆ ಅವರ ಕೊಡುಗೆಯೂ ಅಪಾರವಾದುದಾಗಿದೆ. ಇಡೀ ಕುಟುಂಬ ನಿರ್ವಹಿಸುತ್ತ ಅದರ ಹೊರೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೇಲೆ ಬೀಳದಂತೆ ನೋಡಿಕೊಂಡರೆಂದರು.

ಅಂಬೇಡ್ಕರ್ ಅವರ ಪತ್ನಿ ಅಂದು ನೀಡಿದ ಸಹಕಾರ ಸಹ ಅಂಬೇಡ್ಕರ್ ಅವರು ಅತ್ಯುತ್ತಮ ಸಂವಿಧಾನ ರಚಿಸಲು ಸಾಧ್ಯವಾಯಿತು. ಅದರ ಪರಿಣಾಮವಾಗಿ ಇಂದು ಬಹಳಷ್ಟು ಮಹಿಳೆಯರು ಶೋಷಣೆಯಿಂದ ಹೊರ ಬಂದು, ಅದರ ವಿರುದ್ಧ ಹೋರಾಡುವಂತಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಕಮಲ ನಟರಾಜ್, ಭಾನವಿ ಹೆಚ್.ಅರುಣ್‌ಕುಮಾರ್, ಸುಶೀಲ, ಲಕ್ಷ್ಮೀ, ಚಾಂದಿನಿ, ಮಹದೇವಮ್ಮ ರಮೇಶ್, ವಿದುಷಿ ಭಾಗ್ಯಲಕ್ಷ್ಮಿ, ಮಮತಶ್ರೀ, ಗೌತಮಿ ರಮೇಶ್, ವಿ.ಪಿ.ಸುಶೀಲ ಅವರನ್ನು ಆತ್ಮೀಯವಾಗಿ ಅಭಿನಂದಿಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷೆ ಕೆ.ಪುಷ್ಪವಲ್ಲಿ, ರೈತ ಮುಖಂಡ ಅರುಣ್ ಕುಮಾರ್, ಸಮಾಜ ಸೇವಕ ರಘುರಾಂ ವಾಜಪೇಯಿ, ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮನೋಹರ್, ನಾಲಾಬೀದಿ ರವಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಯಾರಿಗೂ ಯಾವುದೇ ಅರಣ್ಯ ಭೂಮಿ ಮಂಜೂರು ಮಾಡಲಾಗದು

## ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟನೆ



ಬೆಂಗಳೂರು, ಮಾ.24(ಕೆಎಂಶಿ)– ಮೀಸಲು ಅರಣ್ಯ, ಪರಿಭಾವಿತ ಅರಣ್ಯ ಹಾಗೂ ಸೆಕ್ಷನ್ 4 ಅಧಿಸೂಚನೆ ನಂತರ ಯಾವುದೇ ಅರಣ್ಯ ಭೂಮಿ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ವಿಧಾನಪರಿಷತ್ತಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಶ್ನೋತ್ತರ ವೇಳೆ, ಕಿಶೋರ್‌ಕುಮಾರ್ ಪುತ್ತೂರ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಅಕ್ರಮ ಸಕ್ರಮದಡಿ ನಮೂನೆ 50, 53, 57ರಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿಗಳಿಗೆ ಕಂದಾಯ ಭೂಮಿ ಮಂಜೂರು ಮಾಡಬಹುದೇ ಹೊರತು ಅರಣ್ಯ ಭೂಮಿ ಅಲ್ಲ ಎಂದರು.

ಒಂದೇ ಸರ್ವೆ ನಂಬರ್‌ನಲ್ಲಿ ಅರಣ್ಯ ಮತ್ತು ಕಂದಾಯ ಭೂಮಿ ಇರುವೆಡೆ ಜಂಟಿ ಸರ್ವೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಮೋಜಿಣಿ ಕಾರ್ಯಕ್ಕೆ ಸಿಬ್ಬಂದಿ ಕೊರತೆ ಇಲ್ಲ, ಕಾಲಮಿತಿಯಲ್ಲಿ ಗಡಿ ಗುರುತಿಸುವ ಕೆಲಸ ಆಗಲಿದೆ. ಒಟ್ಟು 1,20,491 ಪ್ರಕರಣಗಳಲ್ಲಿ 2,21,263 ಎಕರೆ ಅರಣ್ಯ ಪ್ರದೇಶ ಒತ್ತುವರಿ ತೆರವು ಬಾಕಿ ಇದೆ. ಒತ್ತುವರಿದಾರರ ವಿರುದ್ಧ ಅರಣ್ಯ ಅಪರಾಧ ಪ್ರಕರಣ ದಾಖಲಿಸಲಾಗುತ್ತಿದೆ. ಅರಣ್ಯ ಅತಿಕ್ರಮಣ ಪತ್ತೆ ಹಚ್ಚಲು ಉಪಗ್ರಹ ಕಣ್ಗಾವಲು ವ್ಯವಸ್ಥೆ ಒತ್ತುವರಿಯ ತಾಂತ್ರಿಕ ಸಾಕ್ಷ್ಯ ಒದಗಿಸಲಿದ್ದು, ಸಂಬಂಧಿತ ವಲಯಕ್ಕೆ ಎಚ್ಚರಿಕೆ ರವಾನಿಸುತ್ತದೆ ಎಂದು ಹೇಳಿದರು.

ಕುಶಾಲಪ್ಪ ಎಂ.ಪಿ. (ಸುಜಾ) ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ವನ್ಯಜೀವಿಗಳ ಅಂಗಾಂಗ ಹಾಗೂ ಸ್ಮರಣಿಕೆ (ಟ್ರೋಫಿ)ಯಾಗಿ ಇಟ್ಟುಕೊಳ್ಳಲು ಪರವಾನಗಿ ಅವಕಾಶ ಇಲ್ಲ. ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರಡಿ ಅದರಲ್ಲೂ ವಿಶೇಷವಾಗಿ ಕೊಡಗಿಗೆ ವನ್ಯಜೀವಿ, ಟ್ರೋಫಿಯನ್ನು ಇಟ್ಟುಕೊಳ್ಳಲು ಅವಕಾಶ ನೀಡಲು ಸಾಧ್ಯವಿಲ್ಲ. ಮನೆಗಳಲ್ಲಿರುವ ವನ್ಯಜೀವಿ ಅಂಗಾಂಗ, ಟ್ರೋಫಿಗಳ ಮಾಲೀಕತ್ವ ಪ್ರಮಾಣಪತ್ರ ಪಡೆಯಲು 30 ದಿನಗಳ ಕಾಲಾವಕಾಶ ನೀಡಲಾಗಿತ್ತು, 2003ರಲ್ಲಿ 180 ದಿನಗಳಲ್ಲಿ ಟ್ರೋಫಿ ಘೋಷಣೆಗೆ ಅವಕಾಶ ಕಲ್ಪಿಸಲಾಗಿತ್ತು, ನಂತರದ ದಿನಗಳಿಗೆ ಇಲ್ಲ. ಮತ್ತೊಮ್ಮೆ 2024ರ ಜನವರಿ 10ರಂದು ಅಧಿಸೂಚನೆ ಹೊರಡಿಸಿ, ಅಪರಾಧ ಪ್ರಕರಣ ದಾಖಲಾಗುವುದನ್ನು ತಪ್ಪಿಸಲು 90 ದಿನಗಳ ಒಳಗೆ ವನ್ಯಜೀವಿ ಅಂಗಾಂಗಗಳನ್ನು ಅಧ್ಯರ್ಪಿಸಲು ಅವಕಾಶ ನೀಡಲಾಗಿತ್ತು. ಕಾಯಿದೆಗೆ ತಿದ್ದುಪಡಿ ತರುವ ಅವಕಾಶ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ ಎಂದು ಸ್ಪಷ್ಟಪಡಿಸಿದರು.

## ಸಚಿವರಿಂದ ಕಾರ್ಯಕ್ರಮ ಉದ್ಘಾಟನೆ...



ಬೆಂಗಳೂರಿನ ರಾಜರಾಜೇಶ್ವರಿನಗರದ ಸವಿತಾ ಸಮಾಜದ ವತಿಯಿಂದ ರಾಜ್ಯಮಟ್ಟದ ವಧು-ವರರ ಸಮಾವೇಶ, ಬೃಹತ್ ಉದ್ಯೋಗ ಮೇಳ, ಆರೋಗ್ಯ ಶಿಬಿರವನ್ನು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಉದ್ಘಾಟಿಸಿದರು. ಕುಂಚೂರು ಪೀಠದ ಸವಿತಾ ಸಮಾಜದ ಶ್ರೀಧರನಂದನಾಥ ಸ್ವಾಮೀಜಿ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್, ಬೆಂಗಳೂರು ಪಶ್ಚಿಮ ಕ್ಷೇತ್ರದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ, ಸವಿತಾ ಸಮಾಜ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್, ರಾಜ್ಯ ಸವಿತಾ ಸಮಾಜದ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ಎಂ.ಬಿ.ಶಿವಕುಮಾರ್. ಮುನಿರಾಜ್, ನಾಗರಾಜ್, ಕೇಶವಮೂರ್ತಿ, ನಾಗರಾಜ್, ಹನುಮಂತರಾಜ್, ಮಂಜುನಾಥ್, ರಾಮಾಂಜಿನಪ್ಪ ಉಪಸ್ಥಿತರಿದ್ದರು.



ಮೈಸೂರು ನಗರ-ಗ್ರಾಮಾಂತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಮೀರ್‌ಕುಸ್ರು, ಶಶಾಂಕ್‌ಗೌಡರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿ ಕೆಪಿಸಿಸಿ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಂಜುನಾಥಗೌಡ ಆದೇಶ ಪ್ರತಿ ನೀಡಿದರು. ರಾಷ್ಟ್ರೀಯ ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿ ನಾಗೇಶ್ ಕರಿಯಪ್ಪ, ಮೈಸೂರು ನಗರ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಕೀರ್ತಿರಾಜ್ ಉಪಸ್ಥಿತರಿದ್ದರು.

# ನಾನಾ ಸೇವಾ ಕಾರ್ಯದೊಂದಿಗೆ ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬ ಆಚರಣೆ



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ 8500 ಚದರಡಿ ರಂಗೋಲಿಯಲ್ಲಿ ಅನಾವರಣಗೊಂಡ ಸಂಸದ ಯದುವೀರ್ ಒಡೆಯರ್ ಅವರ ಭಾವಚಿತ್ರವನ್ನು ಮಂಗಳವಾರ ಉದ್ಘಾಟಿಸಲಾಯಿತು.






ನೂರೊಂದು ಗಣಪತಿ ದೇವಸ್ಥಾನದಲ್ಲಿ ಯದುವೀರ್‌ರ ಹೆಸರಲ್ಲಿ ಅರ್ಚನೆ, ವಿಶೇಷ ಪೂಜೆ ಸಲ್ಲಿಸಲಾಯಿತು. ಸಾರ್ವಜನಿಕರಿಗೆ ಪ್ರಸಾದ ವಿನಿಯೋಗಿಸಲಾಯಿತು. (ಬಲಚಿತ್ರ)



ಸಂಸದ ಯದುವೀರ್ ಅವರ ಕಚೇರಿಯಲ್ಲಿ ರಕ್ತದಾನ ಶಿಬಿರ ನಡೆಯಿತು.



ಸಂಸದ ಯದುವೀರ್ ಒಡೆಯರ್ ಅವರ ಹುಟ್ಟುಹಬ್ಬವನ್ನು ಜನಸೇವಾ ಟ್ರಸ್ಟ್ ವತಿಯಿಂದ ಚಿಗುರು ವೃದ್ಧಾಶ್ರಮದಲ್ಲಿ ಆಚರಿಸಲಾಯಿತು. ಈ ವೇಳೆ ಆಶ್ರಮದ ವೃದ್ಧರಿಗೆ ಹಣ್ಣು ಹಂಪಲು, ಸಿಹಿ ಪದಾರ್ಥಗಳನ್ನು ವಿತರಿಸಲಾಯಿತು. ಮೈಸೂರು ನಗರ ಜಿಲ್ಲಾ ಉಪಾಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ, ಪೈಲ್ವಾನ್ ಡಿ.ರವಿ, ಎಸ್.ಆರ್.ಗೋಪಾಲ್‌ರಾವ್, ಶ್ರೀನಿವಾಸ್, ಸುನಿಲ್‌ಕುಮಾರ್, ರೇವಣ್ಣ, ಶರತ್, ಮಹಾದೇವಸ್ವಾಮಿ, ನಂಜುಂಡಸ್ವಾಮಿ, ಬಸವರಾಜ್, ರಾಘವೇಂದ್ರ, ಯೋಗೇಶ್, ಬಸವರಾಜ್, ಶಾಲಿನಿ, ರಾಧಾ, ಪಾಲಂದಿರಾ, ರೂಸ್ಟ್ ರಾಜು, ಸವಿತಾ, ಶಾಲಿನಿ ಹಾಗೂ ವಾಸಂತಿ ಇತರರು ಉಪಸ್ಥಿತರಿದ್ದರು.

ಮೈಸೂರು, ಮಾ. 24– ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸದಸ್ಯರೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು, ಹಿತೈಷಿಗಳು ಹಾಗೂ ಬಿಜೆಪಿ ಮುಖಂಡರು ರಕ್ತದಾನ, ನೇತ್ರದಾನ, ಉಚಿತ ಆರೋಗ್ಯ ತಪಾಸಣೆ, ಸ್ವಚ್ಛತಾ ಶ್ರಮದಾನ, ಹಣ್ಣು ಹಂಪಲು ವಿತರಣೆ ಸೇರಿದಂತೆ ನಾನಾ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹುಟ್ಟುಹಬ್ಬ ಆಚರಿಸಿದರು.

ಮಾಜಿ ಶಾಸಕ, ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಹಾಗೂ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ನೇತೃತ್ವದಲ್ಲಿ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ 8500 ಚದರಡಿ ರಂಗೋಲಿಯಲ್ಲಿ ಅನಾವರಣಗೊಂಡ ಯದುವೀರ್ ಅವರ ಭಾವಚಿತ್ರವನ್ನು ಉದ್ಘಾಟಿಸಲಾಯಿತು.

ಬಳಿಕ ದೇವಾಲಯದಲ್ಲಿ ಯದುವೀರರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಜನ್ಮದಿನದ ಶುಭ ಕೋರಲಾಯಿತು. ಅಲ್ಲದೆ, ಸಂಸದರ ಕಚೇರಿಯಲ್ಲಿ ರಕ್ತದಾನ ಶಿಬಿರ, ನೇತ್ರದಾನ ಶಿಬಿರ, ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಹೀಗೆ ಇತರೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಅಗ್ರಹಾರ ವೃತ್ತದಲ್ಲಿರುವ ನೂರೊಂದು ಗಣಪತಿ ದೇವಸ್ಥಾನದಲ್ಲಿ ಯದುವೀರ್ ಅವರ ಹೆಸರಿನಲ್ಲಿ ಅರ್ಚನೆ ಪೂಜೆ ಸಲ್ಲಿಸಿ ಹಾಗೂ ನೂರಾರು ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ಕೈಗಾರಿಕೋದ್ಯಮಿ ಕೆ.ಬಿ.ಲಿಂಗರಾಜು, ಬಿಜೆಪಿ ಮುಖಂಡರಾದ ಸುಶ್ರುತ ಗೌಡ, ದಿನೇಶ್‌ಗೌಡ, ಕಿರಣ್‌ಗೌಡ, ಬಿ.ಎಂ.ರಘು, ಸೋಮಸುಂದರ್ ರಾಕೇಶ್ ಭಟ್, ರವಿ, ಸ್ಮಾರ್ಟ್ ಮಂಜು, ಪಾರ್ಥ ಸಾರಥಿ, ಪ್ರತಾಪ್, ಅಶೋಕಪುರಂ ಮಹೇಶ್, ವಾಜಮಂಗಲ ಮಹದೇವ್, ತೇಜುರಾಜ್, ಅಂಜನ್‌ಕುಮಾರ್ ಅಮಿತ್ ರಾಜ್, ಜಗದೀಶ್, ಶಿವು, ರಾಜಕುಮಾರ್, ಲಕ್ಷ್ಮೀದೇವಿ, ರೇಣುಕರಾಜ್, ಮೋನಿಕಾ, ಹೇಮಾನಂದೀಶ್, ಅರುಣ್‌ಗೌಡ, ರಾಕೇಶ್ ಗೌಡ ಹಾಗೂ ಅಪಾರ ಸಂಖ್ಯೆಯಲ್ಲಿ ಸ್ನೇಹಿತರು ಹಿತೈಷಿಗಳು ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

**ಸ್ವಚ್ಛತಾ ಶ್ರಮದಾನ:** ಸಂಸದ ಯದುವೀರ್ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ವತಿಯಿಂದ ಬೋಗಾದಿಯ ರಾಜರಾಜೇಶ್ವರಿ ನಗರದ 80 ಅಡಿ ಮುಖ್ಯ ರಸ್ತೆಯಲ್ಲಿ ಸ್ವಚ್ಛತಾ ಶ್ರಮದಾನ ನಡೆಸಲಾಯಿತು.

ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್ ನೇತೃತ್ವದಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮಿ ಕಿರಣ್, ಮಂಡಲದ ಪ್ರಧಾನ ಕಾರ್ಯದರ್ಶಿ ಆರ್. ಸೋಮಶೇಖರ್, ಈರೇಗೌಡ, ಉಪಾಧ್ಯಕ್ಷರಾದ ಶಿವು ಪಟೇಲ್, ಹೆಚ್.ಎಸ್. ಹಿರಿಯಣ್ಣ, ಕಾರ್ಯದರ್ಶಿ ಸೋಮಣ್ಣ, ರಾಚಪ್ಪಾಜಿ, ಎಸ್.ಟಿ. ಮೋರ್ಚಾ ನಗರ ಉಪಾಧ್ಯಕ್ಷ ತ್ಯಾಗರಾಜ್, ಎಸ್.ಸಿ. ಮೋರ್ಚಾ ನಗರ ಉಪಾಧ್ಯಕ್ಷ ಎನ್.ಪ್ರತಾಪ್, ಮಂಡಲದ ಮೋರ್ಚಾ ಪದಾಧಿಕಾರಿಗಳಾದ ಮಧು ಸೋಮಶೇಖರ್, ರಂಗೇಶ್, ಚಂದನ್ ಗೌಡ, ಮಹೇಶ್‌ಕುಮಾರ್, ರಾಘವೇಂದ್ರ, ಸಿ.ಲೋಕೇಶ್ ನಾಯಕ್, ಜೀವ ಗೌಡ, ಗೋಪಾಲ್ ಅಯ್ಯಂಗಾರ್, ಎ.ಎಂ. ಗಿರೀಶ್, ಬೂತ್ ಅಧ್ಯಕ್ಷರಾದ ಚೇತನ್, ಮಹೇಶ್ ಗೌಡ, ಜೀವನ್ ಸೇರಿದಂತೆ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.



ಕೆ.ಆರ್.ಕ್ಷೇತ್ರದ ಚಾಮುಂಡಿಪುರಂ ಸರ್ಕಲ್ ಬಳಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೇ ಅರಸ್ ನೇತೃತ್ವದಲ್ಲಿ ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬದ ಅಂಗವಾಗಿ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಜೈ ಶಂಕರ್, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ, ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಂ ಪ್ರಸಾದ್, ವಿದ್ಯಾಅರಸ್, ಜಗದೀಶ್, ಬಿಜೆಪಿ ಮುಖಂಡರಾದ ನಾಗರಾಜ್, ಪ್ರದೀಪ್‌ಕುಮಾರ್, ಮನೋಜ್, ಪುರುಷೋತ್ತಮ, ಹರೀಶ್, ಸಂತೋಷ್, ರವಿ, ಸಂದೀಪ, ಕೀರ್ತಿ, ಶಿವಪ್ರಸಾದ್, ಹರ್ಷ, ಸರ್ವಮಂಗಳ, ಚಿಕ್ಕಮ್ಮ, ಬಸವರಾಜು, ಸೌಭಾಗ್ಯ, ಮೂರ್ತಿ, ಮಂಜುಳಾ, ಲತಾ, ನಾಗಶ್ರೀ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ನಗರ ಮಂಡಲ ವತಿಯಿಂದ ರಾಜರಾಜೇಶ್ವರಿನಗರದ 80 ಅಡಿ ಮುಖ್ಯ ರಸ್ತೆಯಲ್ಲಿ ಸ್ವಚ್ಛತಾ ಶ್ರಮದಾನ ನಡೆಸಲಾಯಿತು.

# ಬೆಂಗಳೂರು ಮಾದರಿ ಮದ್ದೂರು ನಗರಾಭಿವೃದ್ಧಿಗೆ ಆದ್ಯತೆ

## ■ ಮದ್ದೂರು ನಗರಸಭೆ ಮೊದಲ ಬಜೆಟ್‌ನಲ್ಲಿ ಘೋಷಣೆ ■ 1.5 ಕೋಟಿ ಉಳಿತಾಯ ಬಜೆಟ್ ಮಂಡನೆ

ಮದ್ದೂರು, ಮಾ.24– ನಗರ ವ್ಯಾಪ್ತಿ ಬೆಂಗಳೂರು ಮಾದರಿ ಉದ್ಯಾನವನಗಳ ಅಭಿವೃದ್ಧಿ, ನಗರವನ್ನು ಸುಂದರ ಹಾಗೂ ಹಸಿರೀಕರಣ, ಸುಸಜ್ಜಿತ ಮಾರುಕಟ್ಟೆ, ಮದ್ದೂರು, ಸೋಮನಹಳ್ಳಿ ಕೆರೆಗಳ ಅಭಿವೃದ್ಧಿ ಹಾಗೂ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಮದ್ದೂರು ನಗರಸಭೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ನಗರಸಭೆಯ ಎಸ್.ಎಂ.ಕೃಷ್ಣ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಹಾಗೂ ಆಡಳಿತಾಧಿಕಾರಿ ಡಾ.ಕುಮಾರ್ ಅವರು 2025–26ನೇ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ಅಂದಾಜು ಬಜೆಟ್ ಮಂಡಿಸಿದರು. ಆರಂಭಿಕ ಶಿಲ್ಕು 8.63 ಕೋಟಿಗಳಾಗಿದ್ದು, 2025–26ನೇ ಸಾಲಿಗೆ ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ನಿರೀಕ್ಷಿತ ಆದಾಯ 15.88 ಕೋಟಿ ಹಾಗೂ ಕೇಂದ್ರದ ಅನುದಾನ 18.95 ಕೋಟಿ ಮತ್ತು ರಾಜ್ಯ ಸರ್ಕಾರದಿಂದ 75 ಕೋಟಿ ನಿರೀಕ್ಷಿತ ಅನುದಾನ ಸೇರಿ ಒಟ್ಟು 120.66 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

2026–27ನೇ ಸಾಲಿಗೆ ನೌಕರರ ವೇತನ, ನಿರ್ವಹಣಾ ವೆಚ್ಚ, ಬಂಡವಾಳ ಕಾಮಗಾರಿಗಳು, ಕಲ್ಯಾಣ ಕಾರ್ಯಕ್ರಮಗಳು ಮತ್ತು ಸರ್ಕಾರಕ್ಕೆ ಪಾವತಿಸಬೇಕಾದ ಕರಗಳು ಹಾಗೂ ಶಾಸನಬದ್ಧ ತೆರಿಗೆಗಳು ಸೇರಿದಂತೆ ಒಟ್ಟಾರೆ 119.50 ಕೋಟಿ ಅಂದಾಜು ವೆಚ್ಚವಾಗಲಿದ್ದು, ಉಳಿದಂತೆ 1.15 ಕೋಟಿ ಉಳಿತಾಯ ಆಯವ್ಯಯವನ್ನು ಡಿಸಿ ಡಾ.ಕುಮಾರ್ ಮಂಡಿಸಿದರು.

ಅಮೃತ್ 2.0 ಯೋಜನೆಯಡಿ ಮದ್ದೂರು ನಗರದ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ, ಕೆರೆ ಅಭಿವೃದ್ಧಿ, ನಗರ ಹಸಿರೀಕರಣಕ್ಕಾಗಿ 6 ಕೋಟಿ ವೆಚ್ಚ ಮಾಡಲು ಉದ್ದೇಶಿಸಲಾಗಿದೆ ಎಂದರು.

**ಪ್ರಮುಖ ಆದಾಯ ನಿರೀಕ್ಷೆ:** ನೀರು ಬಳಕೆದಾರರ ಶುಲ್ಕ 2.50 ಕೋಟಿ, ಒಳಚರಂಡಿ ಸಂಪರ್ಕ ಮತ್ತು ಬಳಕೆದಾರರ ಶುಲ್ಕ ಸಂಗ್ರಹಣೆ 25 ಲಕ್ಷ, ಉದ್ದಿಮೆ ಪರವಾನಿಗೆ ಶುಲ್ಕ 20 ಲಕ್ಷ, ಘನತ್ಯಾಜ್ಯ ವಸ್ತು ನಿರ್ವಹಣೆ ಶುಲ್ಕ 25 ಲಕ್ಷ, ಖಾತಾ ಬದಲಾವಣೆ ಶುಲ್ಕ 10 ಲಕ್ಷ, ಬ್ಯಾಂಕ್ ಖಾತೆಗಳ ಮೇಲಿನ ಬಡ್ಡಿ ಸಂಗ್ರಹಣೆ 8 ಲಕ್ಷ, ಅಭಿವೃದ್ಧಿ ಮತ್ತು ಅಭಿವೃದ್ಧಿ ಮೇಲ್ವಿಚಾರಣೆ ಶುಲ್ಕ 1 ಕೋಟಿ, ಕಟ್ಟಡ ಪರವಾನಗಿ ಶುಲ್ಕ 40 ಲಕ್ಷ, ಅನುಪಯುಕ್ತ ವಸ್ತುಗಳ ಮಾರಾಟದಿಂದ 10 ಲಕ್ಷ, ಟ್ಯಾಕ್ಸಿ ಖಾಸಗಿ, ಸಂತೆ ಹಾಗೂ ಕಸಾಯಿಖಾನೆ ಶುಲ್ಕ 20 ಲಕ್ಷ, ಎಸ್‌ಎಫ್‌ಸಿ ಮುಕ್ತ ನಿಧಿ ಅನುದಾನ 4 ಕೋಟಿ, ಎಸ್‌ಎಫ್‌ಸಿ ವಿಶೇಷ ಅನುದಾನ 1 ಕೋಟಿ, ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಅನುದಾನ 4 ಕೋಟಿ, ಆಸ್ತಿ ತೆರಿಗೆಯೊಂದಿಗೆ ವಸೂಲಿಸಲಾಗುವ ಕರಗಳು, ಗುತ್ತಿಗೆದಾರರು ಸರಬರಾಜುದಾರರು ಹಾಗೂ ನೌಕರರ ವೇತನದ ಕಟಾವಣೆಗಳಿಂದ 1.50 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

**ಪ್ರಮುಖ ವೆಚ್ಚಗಳು:** ನಗರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸೌಲಭ್ಯ ಮತ್ತು ನಿರ್ವಹಣೆಗೆ 1.50 ಕೋಟಿ ಮೀಸಲಿಡಲಾಗಿದೆ. ಎಲ್ಲಾ ಗ್ರಾಮಗಳ ಬೀದಿ ದೀಪ ದುರಸ್ತಿ ಮತ್ತು ನಿರ್ವಹಣೆಗೆ 60 ಲಕ್ಷ, ಬೆಂಗಳೂರು ನಗರ ಮಾದರಿ ಉದ್ಯಾನವನಗಳಲ್ಲಿ ಆಕರ್ಷಕ ಅಲಂಕಾರಿಕ ಗಿಡಗಳಾದ ತಬೂಬಿಯಾ ರೋಸಿಯಾ ಗಿಡ ಬೆಳೆಸಲು 10 ಲಕ್ಷ, ನಗರಸಭೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ 4 ಗ್ರಾಪಂಗಳ 10 ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸಲು 40 ಕೋಟಿ, ರಸ್ತೆ ಸ್ವಾಗತ ಕಮಾನು ಅಳವಡಿಕೆಗೆ 1 ಕೋಟಿ, ಮಾರುಕಟ್ಟೆ ನಿರ್ಮಾಣ ಕಾಮಗಾರಿಗೆ 9 ಕೋಟಿ, ವಿದ್ಯುತ್ ಚಿತಾಗಾರಕ್ಕೆ ಡಿಪಿಆರ್ ತಯಾರಿಸಲು 4 ಕೋಟಿ, ಬೀದಿ ನಾಯಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಹಾಗೂ ರೇಬಿಸ್ ಚುಚ್ಚುಮದ್ದು ಹಾಕಲು 30 ಲಕ್ಷ, ಸಮುದಾಯ ಹಾಗೂ ಸಾರ್ವಜನಿಕ ಶೌಚಗೃಹ ನಿರ್ವಹಣೆ ಮತ್ತು ನಿರ್ಮಾಣಕ್ಕೆ 90 ಲಕ್ಷ, ನಮ್ಮ ಕ್ಲಿನಿಕ್ ನಿರ್ವಹಣೆ ಮತ್ತು ಔಷಧ ಖರೀದಿಗಾಗಿ 30 ಲಕ್ಷ ರೂ. ಮೀಸಲಿರಿಸಲಾಗಿದೆ ಎಂದು ವಿವರಿಸಿದರು.

**ಪ್ರಮುಖ ಯೋಜನೆಗಳು:** 10 ಕೋಟಿ ವೆಚ್ಚದಲ್ಲಿ ಸುಸಜ್ಜಿತ ನೂತನ ನಗರಸಭಾ ಕಚೇರಿ ನಿರ್ಮಾಣ, ನಗರದ ಪ್ರಮುಖ ವೃತ್ತಗಳ ಅಭಿವೃದ್ಧಿ ಮತ್ತು ಮಹನೀಯರ ಪುತ್ಥಳಿ ನಿರ್ಮಾಣ, ನಿವೇಶನ ರಹಿತರಿಗೆ ದೇವರಾಜ ಅರಸ್ ವಿಶೇಷ ವಸತಿ ಯೋಜನೆಯಡಿ 616 ಬೀಡಿ ಕಾರ್ಮಿಕರಿಗೆ ಜಿ+3 ಮಾದರಿಯಲ್ಲಿ ಕದಲೂರು ಗ್ರಾಮದಲ್ಲಿ 4 ಎಕರೆ 14 ಗುಂಟೆಯಲ್ಲಿ ವಸತಿ ಸಮುಚ್ಚಯ ನಿರ್ಮಾಣ, ನಗರಸಭಾ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಬಸ್ ತಂಗುದಾಣ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದೆಂದರು.

ಮದ್ದೂರು ಕೆರೆ ಮತ್ತು ಸೋಮನಹಳ್ಳಿ ಕೆರೆಗಳ ಅಭಿವೃದ್ಧಿ, ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ, ಹೆಲ್ತ್ ಚೆಕಪ್, ಬೆಳಗಿನ ಉಪಹಾರ, ನಗರಸಭಾ ಕಚೇರಿ ಆವರಣದಲ್ಲಿ ಬ್ಯಾಂಕ್ ಕೌಂಟರ್ ಸ್ಥಾಪನೆ, ಗೆಜ್ಜಲಗೆರೆ, ಚಾಮನಹಳ್ಳಿ, ಗೊರವನಹಳ್ಳಿ ಹಾಗೂ ಸೋಮನಹಳ್ಳಿ ಗ್ರಾಪಂಗಳಲ್ಲಿ ನಗರಸಭಾ ವಲಯ ಕಚೇರಿ ಸ್ಥಾಪನೆಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು. ಈ ವೇಳೆ ಯೋಜನಾ ನಿರ್ದೇಶಕ ಟಿ.ಎನ್. ನರಸಿಂಹ ಮೂರ್ತಿ, ಪೌರಾಯುಕ್ತೆ ರಾಧಿಕಾ ಇದ್ದರು.



ಜಿಲ್ಲಾಧಿಕಾರಿ ಹಾಗೂ ಆಡಳಿತಾಧಿಕಾರಿ ಡಾ.ಕುಮಾರ್ ಬಜೆಟ್ ಮಂಡಿಸಿದರು.

## ನಗರಸಭೆ ಮೊದಲ ಬಜೆಟ್‌ಗೆ ಶಾಸಕ ಉದಯ್ ಪ್ರಶಂಸೆ

**ಮದ್ದೂರು:** ಮದ್ದೂರು ನಗರಸಭೆ ಮೊದಲ ಬಜೆಟ್ ಅಭಿವೃದ್ಧಿ ವಿಷಯದಲ್ಲಿ ಇತಿಹಾಸದ ಪುಟ ಸೇರಲಿದೆ ಎಂದು ಶಾಸಕ ಕೆ.ಎಂ.ಉದಯ್ ಪ್ರಶಂಸೆ ವ್ಯಕ್ತಪಡಿಸಿದರು. ಸಭೆಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳ ನಂತರ ನಗರದಲ್ಲಿ ಅಭಿವೃದ್ಧಿ ಪರ್ವಕ್ಕೆ ಮುನ್ನುಡಿ ಬರೆಯಲಾಗಿದ್ದು, ಎಲ್ಲಾ ವರ್ಗದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳು ಹಾಗೂ ನಗರಸಭಾ ಅಧಿಕಾರಿಗಳು ಅತ್ಯುತ್ತಮ ಬಜೆಟ್ ಮಂಡಿಸಿದ್ದಾರೆ ಎಂದರು.

120 ಕೋಟಿಗೂ ಮೀರಿದ ಬಜೆಟ್ ಇದಾಗಿದ್ದು, ಲೋಕೋಪಯೋಗಿ, ನೀರಾವರಿ ಇಲಾಖೆಗಳ ಅನುದಾನಗಳ ಸದ್ಬಳಕೆ ಮಾಡಿಕೊಂಡು ನಗರವನ್ನು ಸ್ವಚ್ಛ ಹಾಗೂ ಹಸಿರು ನಗರವನ್ನಾಗಿ ಮಾಡಲಾಗುವುದು. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು. ನಗರಸಭೆಗೆ ಹೊಸದಾಗಿ ಸೇರಿರುವ ಗ್ರಾಪಂ ಗೆಜ್ಜಲಗೆರೆ, ಗೊರವನಹಳ್ಳಿ, ಸೋಮನಹಳ್ಳಿ, ಚಾಮನಹಳ್ಳಿ ವ್ಯಾಪ್ತಿಗಳ ಹಳ್ಳಿಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡುವ ಜತೆಗೆ 24X7 ಕುಡಿಯುವ ನೀರು, ಒಳಚರಂಡಿ, ಬೀದಿ ದೀಪ, ಮಳೆ ನೀರು ಸಂರಕ್ಷಣೆ, ರಸ್ತೆ ಚರಂಡಿ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

# ದೇಶಭಕ್ತರಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು

### ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ

ಮದ್ದೂರು, ಮಾ.24– ದೇಶಕ್ಕೆ ಸ್ವಾತಂತ್ರ್ಯ ಕೇವಲ ಸತ್ಯಾಗ್ರಹದಿಂದ ಮಾತ್ರವಲ್ಲ, ಸಾವಿರಾರು ದೇಶಭಕ್ತರಿಂದ ಭಾರತ ಸ್ವಾತಂತ್ರ ದೇಶವಾಯಿತು. ಆದರೆ ಸ್ವಾತಂತ್ರ್ಯದ ಬಗ್ಗೆ ಕೇವಲ ಸುಳ್ಳುಗಳನ್ನೇ ನಮ್ಮ ತಲೆಗಳಿಗೆ ಅರೆದು ತುಂಬಿದ್ದಾರೆ ಎಂದು ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ ಅಭಿಪ್ರಾಯಪಟ್ಟರು.

ನಗರದ ಹಳೇ ಬಸ್ ನಿಲ್ದಾಣದ ಆವರಣದಲ್ಲಿ ವಿವಿಧ ಹಿಂದೂಪರ ಸಂಘಟನೆಯಿಂದ ನಡೆದ ಬಲಿದಾನ್ ದಿವಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಕೇವಲ ಸತ್ಯಾಗ್ರಹದಿಂದ ಮಾತ್ರ ಸಿಕ್ಕಿದೆ ಎಂದು ಬಿಂಬಿಸಿದ್ದಾರೆ. ಆದರೆ ದೇಶದ ಪ್ರತಿ ಮನೆಯ ಪ್ರತಿ ದೇಶವಾಸಿಯ ಹೋರಾಟವು ಸ್ವಾತಂತ್ರ್ಯಕ್ಕಾಗಿತ್ತು ಎಂದು ಹೇಳಿದರು.

ಜಾತಿ ಪದ್ಧತಿಯನ್ನು ಪೋಷಿಸಿದವರು ಬ್ರಿಟಿಷರು. ಹೀಗಾಗಿ ಸಮಾಜದಲ್ಲಿ ಜಾತಿ ಹೋಗಲಾಡಿಸಿ, ಧರ್ಮ ಒಂದಾಗಬೇಕು. ಆ ಮೂಲಕ ನಮ್ಮ ಪೂರ್ವಜರ ಬಲಿದಾನ ದಿವಸ್‌ಗೆ ಅರ್ಥ ಸಿಗಬೇಕು. ಜಾತಿ ವ್ಯವಸ್ಥೆ ಹೋದರೆ ಮಾತ್ರ ದೇಶಾಭಿವೃದ್ಧಿ ಸಾಧ್ಯ. ಈ ಮೂಲಕ ಧರ್ಮ ಬೆಳೆಯಬೇಕು. ಜಾತ್ಯಾತೀತರು ಎಂದು ಕರೆಯಲ್ಪಡುವವರಿಗೆ ಅಪ್ಪ– ಅಮ್ಮನ ಪರಿಚಯವೇ ಇರುವುದಿಲ್ಲ ಎಂದು ಕಿಡಿಕಾರಿದರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಅಲ್ಪಸಂಖ್ಯಾತರು ಗಣೇಶನ ಮೇಲೆ ಕಲ್ಲು ಹೊಡೆದರೆ 2028ಕ್ಕೆ ಬುಲ್ಡೋಜರ್ ಬರುತ್ತದೆ. ಪೊಲೀಸರ ಕೈಗೆ ಎ.ಕೆ.47 ಕೊಡುತ್ತೇವೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಬಂದ ಮೇಲೆ ಹಿಂದೂಪರ ಸಂಘಟನೆಗಳ ಮೇಲೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಹಾಕಿರುವ ಮೊಕದ್ದಮೆಯನ್ನು ವಾಪಸ್ ಪಡೆಯುತ್ತೇವೆ. ಮುಂದಿನ ದಿನಗಳಲ್ಲಿ ಗಣೇಶ ಹಬ್ಬದಂದು ಬೀದರ್‌ನಿಂದ ಚಾಮರಾಜನಗರದವರೆಗೆ ಹಿಂದೂ ಸಂಘಟನೆ ಬಲಪಡಿಸುತ್ತೇವೆ. ನಮ್ಮಲ್ಲೇ ಸಹೋದರತ್ವ ಬೆಳೆಸಿಕೊಳ್ಳಬೇಕೇ ಹೊರತು ಜಾತೀವಾದ ಬಿಡಿ ಎಂದರು.

ಗಾಂಧೀಜಿ ನಮ್ಮ ಭಾರತ ದೇಶಕ್ಕೆ ರಾಷ್ಟ್ರಪಿತ ಅಲ್ಲ. ಬದಲಾಗಿ ಅವರು ಪಾಕಿಸ್ತಾನಕ್ಕೆ ರಾಷ್ಟ್ರಪಿತ. ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್, ವೀರ ಸಾವರ್ಕರ್ ಅವರಂತಹ ಸಾವಿರಾರು ಮಹನೀಯರು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಅದಕ್ಕಾಗಿ ಮಾ.23ರಂದು ಬಲಿದಾನ್ ದಿವಸ್ ಆಚರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ನಗರದ ಐ.ಬಿ.ವೃತ್ತದಿಂದ ಪೇಟೆ ಬೀದಿ ಮೂಲಕ ಹಳೇ ಬಸ್ ಸ್ಟ್ಯಾಂಡ್‌ನ ವೇದಿಕೆವರೆಗೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಶೋಭಾಯಾತ್ರೆ ನಡೆಸಲಾಯಿತು. ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ನಿತ್ಯಾನಂದ ದಿಕ್ಸೂಚಿ ಭಾಷಣ ಮಾಡಿದರು. ಶಿವಪುರದ ರಾಜು ಸ್ವಾಮೀಜಿ, ಮುಖಂಡರಾದ ನವೀನ್, ಜಗನ್ನಾಥ್, ವೀರಭದ್ರಸ್ವಾಮಿ ಸೇರಿದಂತೆ ಇದ್ದರು.


ಕಾರ್ಯಕ್ರಮವನ್ನು ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ ಉದ್ಘಾಟಿಸಿದರು.

### ಯತ್ನಾಳ್, ಹೆಗಡೆ ವಿರುದ್ಧ ದೂರು ದಾಖಲು

**ಮದ್ದೂರು:** ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಸೋಮವಾರ ವಿವಿಧ ಹಿಂದೂ ಪರ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಬಲಿದಾನ್ ದಿವಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಹಾಗೂ ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ ಅವರು ಜನರಲ್ಲಿ ಕೋಮು ದ್ವೇಷ ಉಂಟು ಮಾಡುವ ಭಾಷಣ ಮಾಡಿದ್ದಾರೆಂದು ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮನ್‌ಮುಲ್ ಉಪವ್ಯವಸ್ಥಾಪಕರ ಕಚೇರಿ ನಿರ್ಮಾಣಕ್ಕೆ ಶೀಘ್ರ ಚಾಲನೆ

### ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್


ಫಲಾನುಭವಿಗಳಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚೆಕ್‌ಗಳನ್ನು ವಿತರಿಸಿದರು.

ಪಾಂಡವಪುರ, ಮಾ.24– ಪಟ್ಟಣದಲ್ಲಿ ಮನ್‌ಮುಲ್ ವತಿಯಿಂದ 4.65 ಕೋಟಿ ವೆಚ್ಚದಲ್ಲಿ 2 ಮನ್ ಮುಲ್ ಉಪ ವ್ಯವಸ್ಥಾಪಕರ ಸ್ವಂತ ಕಚೇರಿ ಕಟ್ಟಡಕ್ಕೆ ಶೀಘ್ರ ಚಾಲನೆ ನೀಡಲಾಗುವುದು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಭರವಸೆ ನೀಡಿದರು.

ಪಟ್ಟಣದ ಮನ್‌ಮುಲ್ ಉಪ ವ್ಯವಸ್ಥಾಪಕರ ಕಚೇರಿಯಲ್ಲಿ ಒಕ್ಕೂಟದ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ 15.36 ಲಕ್ಷ ರೂ.ಗಳ ಚೆಕ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಮನ್‌ಮುಲ್ ಉಪ ವ್ಯವಸ್ಥಾಪಕರ ಸ್ವಂತ ಕಚೇರಿ ಇಲ್ಲದೆ ಆರಂಭದಿಂದಲೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತು. ಇದೀಗ ಸ್ವಂತ ಕಟ್ಟಡಕ್ಕಾಗಿ ಒಕ್ಕೂಟದಿಂದ 4.65 ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಜಿಲ್ಲೆಯಲ್ಲಿ ಹೈನುಗಾರಿಕೆ ಹೈನೋದ್ಯಮವಾಗಿ ಬೆಳೆಯುತ್ತಿದೆ. ಪ್ರಸ್ತುತ ಒಕ್ಕೂಟಕ್ಕೆ 15 ಲಕ್ಷಕ್ಕೂ ಅಧಿಕ ಹಾಲು ಪೂರೈಕೆಯಾಗುತ್ತಿದ್ದು, 2030ರ ವೇಳೆಗೆ 30 ಲಕ್ಷಕ್ಕೂ ಅಧಿಕ ಹಾಲು ಉತ್ಪಾದನೆ ನಿರೀಕ್ಷಿಸಲಾಗಿದೆ. ಇದಕ್ಕಾಗಿ ಒಕ್ಕೂಟದಲ್ಲಿ ಮತ್ತೆ 15 ಲಕ್ಷ ಹಾಲು ಸಂಗ್ರಹಿಸುವ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಾಣಕ್ಕೆ ಒಕ್ಕೂಟದಿಂದ ಕ್ರಮ ವಹಿಸಲಾಗುತ್ತಿದೆ ಎಂದರು. ಮನ್‌ಮುಲ್ ಉಪ ವ್ಯವಸ್ಥಾಪಕ ಆರ್. ಪ್ರಸಾದ್ ಮಾತನಾಡಿದರು. ಇದೇ ವೇಳೆ ರಾಸು ವಿಮೆ ಯೋಜನೆಯಡಿ 12.80 ಲಕ್ಷ, ರೈತ ಕಲ್ಯಾಣ ಟ್ರಸ್ಟ್‌ನಿಂದ 1.15 ಲಕ್ಷ, ಹಾಲು ಕರೆಯುವ ಯಂತ್ರದ ಯೋಜನೆಯಡಿ 1.40 ಲಕ್ಷ ಮೌಲ್ಯದ ಚೆಕ್‌ಗಳನ್ನು ಫಲಾನುಭವಿಗಳಿಗೆ ವಿತರಿಸ ಲಾಯಿತು. ಮಾರ್ಗ ವಿಸ್ತರಣಾಧಿಕಾರಿಗಳಾದ ಉಷಾ, ಪ್ರಜ್ವಲ್, ಟೆಕ್ನೀಶಿಯನ್ ಆನಂದ್, ಕಾರ್ಯದರ್ಶಿ ಬೋರೇಗೌಡ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

## ಮೇಲೆ ದಾಳಿ ಮಾಡಿದ ಇಸ್ರೇಲ್

ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ರಾತ್ರೋರಾತ್ರಿ, ಬ್ಯಾಲಿಸ್ಟಿಕ್ ಕ್ಷಿಪಣಿ ಸಂಗ್ರಹಣಾ ಸ್ಥಳಗಳು ಮತ್ತು ಉಡಾವಣಾ ತಾಣಗಳು ಸೇರಿದಂತೆ ಹೆಚ್ಚುವರಿಯಾಗಿ 50 ನೆಲೆಗಳ ಮೇಲೆ ದಾಳಿ ಮಾಡಲಾಯಿತು ಎಂದು ಐಡಿಎಫ್ ಎಕ್ಸ್‌ನಲ್ಲಿ ಬರೆದಿದೆ.

ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವಂತೆಯೇ, ಬಾಗ್ದಾದ್‌ನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿದೆ ಎಂದು ಅಲ್ ಜಜೀರಾ ಬ್ರೇಕಿಂಗ್ ಮಂಗಳವಾರ ವರದಿ ಮಾಡಿದೆ. ಇರಾಕ್‌ನಲ್ಲಿರುವ ಪಿಎಂಎಫ್ ನೆಲೆಯ ಮೇಲೆ ಅಮೆರಿಕ ವೈಮಾನಿಕ ದಾಳಿಯಲ್ಲಿ ಸಾವಿನ ಸಂಖ್ಯೆ 14ಕ್ಕೆ ಏರಿದೆ ಎಂದು ಅದು ಉಲ್ಲೇಖಿಸಿದೆ.

ಅಲ್ ಜಜೀರಾ ಬ್ರೇಕಿಂಗ್ ಇರಾನಿನ ಮಾಧ್ಯಮವನ್ನು ಉಲ್ಲೇಖಿಸಿ, ದೇಶದಲ್ಲಿನ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆದಿದೆ. ಕ್ರಿಮಿನಲ್ ಇರಾನಿನ ಆಕ್ರಮಣದಿಂದಾಗಿ ಇಂಧನ ಸೌಲಭ್ಯವೊಂದರಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಬಹ್ರೇನ್ ಹೇಳಿದೆ ಎಂದು ಅದು ಗಮನಿಸಿದೆ. ಇರಾನಿನ ಕ್ಷಿಪಣಿ ಟೆಲ್ ಅವೀವ್‌ಗೆ ಅಪ್ಪಳಿಸಿದ ನಂತರ ಆರು ಜನರು ಗಾಯಗೊಂಡಿದ್ದಾರೆ ಎಂದು ಟೈಮ್ಸ್ ಆಫ್ ಇಸ್ರೇಲ್ ಮಂಗಳವಾರ ವರದಿ ಮಾಡಿದೆ. ಸುಮಾರು 100 ಕೆಜಿ ಸ್ಫೋಟಕಗಳನ್ನು ಹೊತ್ತೊಯ್ಯುವ ಕ್ಷಿಪಣಿ ಕೇಂದ್ರ ಟೆಲ್ ಅವೀವ್‌ಗೆ ಅಪ್ಪಳಿಸಿದೆ. ಇದರ ಪರಿಣಾಮವಾಗಿ ಹಲವಾರು ಕಟ್ಟಡಗಳು ಮತ್ತು ವಾಹನಗಳು ಹಾನಿಗೊಳಗಾಗಿವೆ. ಕ್ಷಿಪಣಿಯ ಅವಶೇಷಗಳು ಟೆಲ್ ಅವಿವ್‌ನ ಪೂರ್ವಕ್ಕೆ ಹತ್ತಿರದ ಪ್ರದೇಶವಾದ ರೋಶ್ ಹಯಾಯಿನ್‌ನಲ್ಲಿಯೂ ಬಿದ್ದಿವೆ ಎಂದು ಪೊಲೀಸರು ಹೇಳಿರುವುದಾಗಿ ಚಾನೆಲ್ 12 ವರದಿಯನ್ನು ಅದು ಉಲ್ಲೇಖಿಸಿದೆ.

## ಮೊಜ್ತಬಾ ಖಮೇನಿ ಸಿದ್ಧ: ಇಸ್ರೇಲ್ ಮಾಧ್ಯಮ

ಜಾಗತಿಕ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯು ಶೀಘ್ರದಲ್ಲೇ ತೆರೆಯಲ್ಪಡುತ್ತದೆ ಎಂದು ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ನಂತರ ಮತ್ತು ಹಾರ್ಮುಜ್ ಯುಎಸ್ ಮತ್ತು ಇರಾನ್ ಜಂಟಿಯಾಗಿ ನಿರ್ವಹಿಸಬೇಕೆಂದು ಅವರು ಊಹಿಸಿದ್ದಾರೆ ಎಂದು ಸೂಚಿಸಿದ ನಂತರ ಈ ಪ್ರಮುಖ ಬೆಳವಣಿಗೆ ಸಂಭವಿಸಿದೆ. ಫ್ಲೋರಿಡಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಟೆಹ್ರಾನ್ ಜೊತೆ ನಡೆಯುತ್ತಿರುವ ಮಾತುಕತೆಗಳು ಯಶಸ್ವಿಯಾಗಿ ಮುಂದುವರಿದರೆ ಜಲಸಂಧಿ ಶೀಘ್ರದಲ್ಲೇ ತೆರೆಯಲ್ಪಡುತ್ತದೆ ಎಂದು ಹೇಳಿದರು. ಅವರು ಮತ್ತು ಇರಾನ್‌ನ ಹೊಸದಾಗಿ ನೇಮಕಗೊಂಡ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ನಿರ್ಣಾಯಕ ಹಡಗು ಸಾಗಣೆ ಮತ್ತು ಜಾಗತಿಕ ಇಂಧನ ಮಾರ್ಗವನ್ನು ಜಂಟಿಯಾಗಿ ನಿಯಂತ್ರಿಸುತ್ತಾರೆ ಎಂದು ಅವರು ಹೇಳಿದರು. ಇದನ್ನು ಜಂಟಿಯಾಗಿ ನಿಯಂತ್ರಿಸಲಾಗುವುದು. ನಾನು ಮತ್ತು ಅಯತೊಲ್ಲಾ, ಅಯತೊಲ್ಲಾ ಯಾರೇ ಆಗಿರಲಿ, ಮುಂದಿನ ಅಯತೊಲ್ಲಾ ಯಾರೇ ಆಗಿರಲಿ, ಹಾರ್ಮುಜ್ ಜಲಸಂಧಿಯನ್ನು ಜಂಟಿಯಾಗಿ ನಿರ್ವಹಿಸಲಾಗುತ್ತದೆ ಎಂದು ಅಮೆರಿಕದ ಅಧ್ಯಕ್ಷರು ಹೇಳಿದರು. ಹಾರ್ಮುಜ್ ಜಲಸಂಧಿ ಸಾಮಾನ್ಯವಾಗಿ ದಿನಕ್ಕೆ 15 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲ ಮತ್ತು ದಿನಕ್ಕೆ 5 ಮಿಲಿಯನ್ ಬ್ಯಾರೆಲ್ ತೈಲ ಉತ್ಪನ್ನಗಳನ್ನು ನಿರ್ವಹಿಸುವ ನಿರ್ಣಾಯಕ ಸಾರಿಗೆ ಮಾರ್ಗವಾಗಿದ್ದು, ಇದು ಜಾಗತಿಕ ಸಮುದ್ರದ ಮೂಲಕ ತೈಲ ವ್ಯಾಪಾರದ ಸರಿಸುಮಾರು 25 ಪ್ರತಿಶತವನ್ನು ಪ್ರತಿನಿಧಿಸುತ್ತದೆ. ಆದಾಗ್ಯೂ, ಈ ಪ್ರದೇಶದಲ್ಲಿನ ಸಂಘರ್ಷದಿಂದಾಗಿ, ಜಲಮಾರ್ಗವನ್ನು ಸಾಗಣೆಗೆ ಹೆಚ್ಚಿನ ಅಪಾಯವೆಂದು ಪರಿಗಣಿಸಲಾಗಿದೆ, ಇದು ಜಾಗತಿಕ ಇಂಧನ ಪೂರೈಕೆಯನ್ನು ಉಸಿರುಗಟ್ಟಿಸುತ್ತದೆ.

## ವರ್ಷಾಂತ್ಯಕ್ಕೆ ಮೋದಿ ಆಡಳಿತ ಅಂತ್ಯ

ಮತ್ತು ಅಮಿತ್ ಶಾ ರಾಜೀನಾಮೆ ನೀಡಲಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ರಾಜಕೀಯ ಪ್ರಾಬಲ್ಯವು ಇಳಿಮುಖವಾಗುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಕೂಡ ಜನರು ಸರ್ಕಾರದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಸರ್ಕಾರವು ಅದನ್ನು ತಡೆಯಲು ಯತ್ನಿಸುತ್ತಿದ್ದರು ಕೂಡ, ಅದು ಸಾಧ್ಯವಾಗುತ್ತಿಲ್ಲ. ಇದು ಮೋದಿ ಆಡಳಿತದ ಅಂತ್ಯದ ಸೂಚನೆಯಾಗಿದೆ ಎಂದು ತಿಳಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಮೋದಿ ವಿರುದ್ಧ ಮೀಮ್ ಮಾಡಿದವರನ್ನು ಜೈಲಿಗೆ ಕಳಿಸಲಾಗುತ್ತಿತ್ತು. ಆದರೆ, ಇಂದು ಸಾಮಾಜಿಕ ಜಾಲತಾಣಗಳ ತುಂಬಾ ಕೇಂದ್ರ ಸರ್ಕಾರದ ವಿರುದ್ಧ ಟೀಕೆ ವ್ಯಕ್ತವಾಗುತ್ತಿದೆ. ಇದು ಅವರ ಜನಪ್ರಿಯತೆ ಕುಸಿಯುತ್ತಿರುವುದರ ಲಕ್ಷಣವಾಗಿದೆ ಎಂದು ಹೇಳಿದ್ದಾರೆ. ಮೋದಿ ಅವರ ಜನಪ್ರಿಯತೆ ಕುಸಿಯುತ್ತಿರುವುದರ ನಡುವೆಯೂ ಅವರು ಚುನಾವಣೆ ಗೆಲ್ಲುತ್ತಿದ್ದಾರೆ ಎಂದರೆ ಅದಕ್ಕೆ ಚುನಾವಣಾ ಆಯೋಗ ಕಾರಣ. ಆದರೆ, ಮೇ.4 ರಂದು ಬಂಗಾಳದ ಜನತೆಯು ಮೋದಿ ಮತ್ತು ಶಾ ಅವರಿಗೆ ಪಾಠ ಕಲಿಸಲಿದ್ದಾರೆ. 2027ರಲ್ಲಿ ಉತ್ತರ ಪ್ರದೇಶದ ಜನರು ಬಿಜೆಪಿಯನ್ನು ಸೋಲಿಸಲಿದ್ದಾರೆ ಎಂದು ಹೇಳಿದ್ದಾರೆ.

## ಮತ್ತೆ ತಲೆ ಎತ್ತುತ್ತಿವೆ ಫುಡ್ ಸ್ಟಾಲ್‌ಗಳು

ಇದರ ಹಿಂದಿರುವ ಮರ್ಮವೇನು ಎಂದು ಸಾರ್ವಜನಿಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಅದೇ ರೀತಿಯ ಹೈಟೆನ್ಷನ್ ಲೈನ್ ಕೆಳಗೆ ತಮಗೆ ಬೇಕಾದಂತೆ ಕಲ್ಲು ಅಳವಡಿಸಿ ಬೌಂಡರಿ ಫಿಕ್ಸ್ ಮಾಡಿಕೊಂಡು ಶೀಘ್ರದಲ್ಲಿ ವ್ಯಾಪಾರ ವಹಿವಾಟು ನಡೆಸಲು ತಯಾರಿ ಮಾಡುತ್ತಿರುವ ವಿಚಾರ ಪಾಲಿಕೆ ಗಮನಕ್ಕೇ ಬಂದಿಲ್ಲವೆಂದರೆ ಇದು ನಿಜಕ್ಕೂ ವಿಪರ್ಯಾಸ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೈಟೆನ್ಷನ್ ಲೈನ್‌ನಲ್ಲೇ (ರಿಂಗ್ ರಸ್ತೆ ಜಂಕ್ಷನ್ ಸಮೀಪ) ಮತ್ತೆ ವ್ಯಾಪಾರ ವಹಿವಾಟು ಆರಂಭಿಸಿದರೂ ಪಾಲಿಕೆ ಕೈಚೆಲ್ಲಿ ಕುಳಿತರೆ, ಇಲ್ಲಿಗೆ ಭೇಟಿ ನೀಡುವ ಗ್ರಾಹಕರು, ತಮ್ಮ ವಾಹನಗಳನ್ನು ಇಲ್ಲೇ ಇರುವ ರಿಂಗ್ ರಸ್ತೆಯ ಸರ್ವೀಸ್ ರಸ್ತೆಯ ಎರಡು ಬದಿಯ ಪಾರ್ಕಿಂಗ್ ಮಾಡುವುದನ್ನೂ ತಳ್ಳಿ ಹಾಕಲಾಗದು. ಆ ಮೂಲಕ ಸದರಿ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಎದುರಾಗಲಿದೆ. ಇದು ಸ್ಥಳೀಯರಿಗೆ ಮಾತ್ರವಲ್ಲದೆ, ಇಲ್ಲಿ ಸಂಚರಿಸುವ ವಾಹನ ಸವಾರರಿಗೂ ಕಿರಿಕಿರಿ ಉಂಟು ಮಾಡುವ ಸನ್ನಿವೇಶ ಸೃಷ್ಟಿಯಾಗಲಿದೆ.

ಅದಕ್ಕೂ ಮುಖ್ಯವಾಗಿ ಇಲ್ಲಿಯೂ ಹೈಟೆನ್ಷನ್ ಲೈನ್ ಇದ್ದು, ಯಾವುದೇ ಸಂದರ್ಭದಲ್ಲಿ ಭಾರೀ ಅನಾಹುತ ಸಂಭವಿಸಲೂಬಹುದು. ಅದಾಗ್ಯೂ ಇಲ್ಲಿ ಭೂಮಿ ಸಮತಟ್ಟು ಮಾಡಿಕೊಳ್ಳುತ್ತಿರುವ ವ್ಯಾಪಾರಸ್ಥರತ್ತ ಪಾಲಿಕೆ ಯಾಕೋ ತಿರುಗಿ ಸಹ ನೋಡಿದಂತಿಲ್ಲ. ಈ ಬಗ್ಗೆ ಪಾಲಿಕೆ ವಲಯ ಕಚೇರಿ 5 ಅನ್ನು ಸಂಪರ್ಕಿಸಿದರೆ ಸುಬಂಧಿಸಿದ ಅಧಿಕಾರಿ ಸಿಬ್ಬಂದಿಗೆ ಈ ಹೊಸ ವ್ಯವಸ್ಥೆ ನಮ್ಮ ಕಚೇರಿಯಿಂದ ಮಾಡುತ್ತಿಲ್ಲ ಎನ್ನುತ್ತಾರೆ. ಇಂತಹ ಸನ್ನಿವೇಶ ಗಮನಿಸುತ್ತಿರುವ ನಾಗರಿಕರು, ಪಾಲಿಕೆಯದು ಇದ್ಯಾವ ಪರಿ ಆಡಳಿತ ಎಂದು ಪ್ರಶ್ನಿಸಿದ್ದಾರೆ.

> **ಪಾಲಿಕೆಯಿಂದ ಇನ್ನು ಅವರಿಗೆ ಹೊಸ ಜಾಗ ಗುರುತಿಸಿಕೊಟ್ಟಿಲ್ಲ. ಸೂಕ್ತ ಜಾಗದ ಹುಡುಕಾಟದ ಪ್ರಕ್ರಿಯೆ ನಡೆಯುತ್ತಿದೆ. ಆ ಮೂಲಕ ಅವರಿಗೆ ಖಾಯಂ ಸ್ಥಳ ಕಲ್ಪಿಸುವ ಸಂಬಂಧ ಕ್ರಮ ವಹಿಸಲಾಗುತ್ತಿದೆ. ಎಲ್ಲಾ 9 ವಲಯ ಕಚೇರಿ ವ್ಯಾಪ್ತಿಯಲ್ಲಿಯೂ ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತ ಜಾಗದಲ್ಲಿ ಖಾಯಂ ಸ್ಥಳ ಕಲ್ಪಿಸಲು ಪಾಲಿಕೆ ಮುಂದಾಗಿದೆ. ತೆರವುಗೊಳಿಸಿದ ಹೈಟೆನ್ಷನ್ ಲೈನ್ ಕೆಳಗೆ ಆರಂಭದಲ್ಲಿ 35 ವ್ಯಾಪಾರಸ್ಥರಿದ್ದರು. ಕೊನೆಗೆ ಈ ಸಂಖ್ಯೆ ಹೆಚ್ಚಾಗ ತೊಡಗಿತು. ಆದರೆ ಬಹುತೇಕರ ಬಳಿ ರಸ್ತೆಬದಿ ವ್ಯಾಪಾರ ಸಂಬಂಧ ಐಡಿ ಕಾರ್ಡ್ ಮತ್ತು ಪ್ರಮಾಣಪತ್ರ ಇಲ್ಲ. ಈಗ ರಿಂಗ್ ರಸ್ತೆ ಜಂಕ್ಷನ್‌ನ ಸಮೀಪ ಹೈಟೆನ್ಷನ್ ಲೈನ್‌ನಲ್ಲೇ ಬೀದಿಬದಿ ವ್ಯಾಪಾರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರೆ, ಪರಿಶೀಲಿಸಿ ಕ್ರಮ ವಹಿಸುತ್ತೇವೆ.** -ಹೀತೇಂದ್ರ, ಅಭಿವೃದ್ಧಿ ಅಧಿಕಾರಿ, ವಲಯ ಕಚೇರಿ–5, ಮೈಸೂರು ಮಹಾನಗರ ಪಾಲಿಕೆ.

> **ಇದೇನು ವಿಪರ್ಯಾಸ. ಈಗ ಸುಜ್ಜುಗೊಳಿಸುತ್ತಿರುವ ಸ್ಥಳ ಸಹ ಹೈಟೆನ್ಷನ್ ಲೈನ್ ಕೆಳಗೆಯೇ ಇದೆ. ರಿಂಗ್ ರಸ್ತೆ ಜಂಕ್ಷನ್ ಸಮೀಪದ ಈ ಹೈಟೆನ್ಷನ್ ಜಾಗದಲ್ಲಿ ಹಿಂದೆ ಕಸ ಹಾಕಿ ಬೆಂಕಿ ಹಚ್ಚುತ್ತಿದ್ದರು. ಇದರಿಂದ ದಟ್ಟ ಹೊಗೆ ಹೊಮ್ಮಿ ನಮ್ಮ ಅಪಾರ್ಟ್‌ಮೆಂಟ್ ಆವರಿಸಿಕೊಂಡು ಕಿರಿಕಿರಿ ಅನುಭವಿಸುವುದು ಮಾತ್ರವಲ್ಲದೆ, ಅನಾರೋಗ್ಯ ಸಮಸ್ಯೆ ಸಹ ಎದುರಿಸಬೇಕಾಗಿತ್ತು. ಅಲ್ಲದೆ, ವ್ಯಕ್ತಿಯೊಬ್ಬ ಶೆಡ್ ನಿರ್ಮಿಸಿ ಸ್ಕ್ರ್ಯಾಪ್ ಸಾಮಗ್ರಿ ಶೇಖರಣೆ ಮಾಡಿಕೊಂಡಿದ್ದ. ಹೈಟೆನ್ಷನ್ ಲೈನ್ ಎಂದು ತೆರವು ಮಾಡಿ, ಮತ್ತೊಂದು ಭಾಗದಲ್ಲಿ ಅದೇ ರೀತಿಯ ಲೈನ್ ಕೆಳಗೆ ಮತ್ತೆ ವ್ಯಾಪಾರ ಶುರು ಮಾಡಲು ಅವಕಾಶ ನೀಡುವುದು ಅರ್ಥಹೀನವಲ್ಲವೇ? ನಮ್ಮ ಅಪಾರ್ಟ್‌ಮೆಂಟ್ ಸುತ್ತಮುತ್ತ ಪಾರ್ಕ್ ಇಲ್ಲ. ಹಾಗಾಗಿ ರಿಂಗ್ ರಸ್ತೆ ಜಂಕ್ಷನ್ ಸಮೀಪದ ಹೆಟೆನ್ಷನ್ ಲೈನ್ ಸ್ಥಳದಲ್ಲಿಯಾದರೂ ಪಾರ್ಕ್ ಮಾಡುತ್ತಾರೆಂಬ ನಿರೀಕ್ಷೆ ಹೊಂದಿದ್ದೆವು. ಆದರೆ ಇಲ್ಲಿ ಈ ರೀತಿಯ ಬೆಳವಣಿಗೆ ಆಗುತ್ತಿರುವುದು ಕಳವಳಕಾರಿ.** -ವಿಠ್ಠಲ್ ನಾರಾಯಣ್ ರಮೇಶ್, ಮಾಜಿ ಅಧ್ಯಕ್ಷರು, ಎಸ್‌ವಿ ರೀಜೆನ್ಸಿ ಅಪಾರ್ಟ್‌ಮೆಂಟ್ ಅಸೋಸಿಯೇಷನ್, ವಿಜಯನಗರ 2ನೇ ಹಂತ, ಮೈಸೂರು.

> **ಇತ್ತೀಚೆಗೆ ತೆರವುಗೊಳಿಸಿದ ಸ್ಥಳದಲ್ಲಿ ನಾನು ಸಹ ಮಳಿಗೆ ತೆರೆದಿದ್ದ. ನನ್ನೊಂದಿಗೆ ಇನ್ನು ಐವರು ಸೇರಿ 6 ಮಳಿಗೆ ಮಾಡಿಕೊಂಡು ಜೀವನ ಮಾಡುತ್ತಿದ್ದೆವು. ತೆರವು ಮಾಡಿದ ಪರಿಣಾಮ ಈಗ ನಾವು ಜೀವನ ನಡೆಸುವುದು ಕಷ್ಟವಾಗುತ್ತಿದೆ. ಈಗ ಹೊಸ ಜಾಗದಲ್ಲಿ ಹಳೇ ಜಾಗದಲ್ಲಿ ಹೆಚ್ಚು ವರ್ಷಗಳ ಕಾಲದಿಂದ ಸ್ಟಾಲ್ ಹೊಂದಿದ್ದವರು ಮಾತ್ರ ಜಾಗ ಹಂಚಿಕೊಳ್ಳುತ್ತಿದ್ದಾರೆ. ಆದರೆ ನಮ್ಮಂತಹವರಿಗೆ ಅವಕಾಶ ನೀಡಿಲ್ಲ.** -ಭರತ್, ಮಂಚೇಗೌನಡಕೊಪ್ಪಲು.

## ಎಸ್‌ಸಿ ಸ್ಥಾನಮಾನ ಲಭ್ಯವಿಲ್ಲ

ಸ್ಥಾನಮಾನ ಕಳೆದುಕೊಳ್ಳುತ್ತಾರೆ. ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳಿಗೆ ಸೇರಿದ ವ್ಯಕ್ತಿಗಳು ಮಾತ್ರ ಪರಿಶಿಷ್ಟ ಜಾತಿ ಸ್ಥಾನಮಾನ ಪಡೆಯಬಹುದು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ದಲಿತ ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ರಕ್ಷಣೆ ಕೇಳುವಂತಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಆಂಧ್ರಪ್ರದೇಶದ ಚಿಂತಾಡ ಆನಂದ್ ಎಂಬ ಪಾದ್ರಿ ಜಾತಿ ತಾರತಮ್ಯ ಮತ್ತು ನಿಂದನೆ ಎದುರಿಸಿದ್ದಾಗಿ ಆರೋಪಿಸಿ, ಎಸ್‌ಸಿ/ಎಸ್‌ಟಿ ಕಾಯ್ದೆ ಯಡಿ ದಾಖಲಿಸಿದ ದೂರು ಆಧರಿಸಿ, ಪೊಲೀಸರು ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿದ್ದರು. ಮತಾಂತರಗೊಂಡ ಕ್ರಿಶ್ಚಿಯನ್ ಪಾದ್ರಿ ತಮ್ಮ ವಿರುದ್ಧ ದಾಖಲಿಸಿದ್ದ ಪ್ರಕರಣವನ್ನು ರದ್ದುಗೊಳಿಸುವಂತೆ ರಾಮಿರೆಡ್ಡಿ ಹೈಕೋರ್ಟ್ ಮೊರೆ ಹೋದರು. ಪಾದ್ರಿ ಆನಂದ್ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ನಂತರ ತಮ್ಮ ಎಸ್‌ಸಿ ಸ್ಥಾನಮಾನ ಕಳೆದುಕೊಂಡಿದ್ದಾರೆ. ಆದ್ದರಿಂದ ಎಸ್‌ಸಿ, ಎಸ್‌ಟಿ ಕಾಯ್ದೆಯಡಿ ರಕ್ಷಣೆ ಪಡೆಯಲು ಸಾಧ್ಯವಿಲ್ಲ ಎಂದು ಆಂಧ್ರ ಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ ಎನ್.ಹರಿನಾಥ್ ಎಫ್‌ಐಆರ್ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಪಾದ್ರಿ ಆನಂದ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

## ಕಚ್ಚಾ ತೈಲ ಸಾಕಷ್ಟು ಲಭ್ಯವಿದೆ

ತನ್ನ ಇಂಧನ ಆಮದುಗಳನ್ನು ಪಡೆಯುತ್ತಿದೆ ಮಾಹಿತಿ ನೀಡಿದರು. ಕಳೆದ ದಶಕಗಳಲ್ಲಿ ಇಂಧನ ಬಿಕ್ಕಟ್ಟುಗಳನ್ನ ಪರಿಹರಿಸಲು, ಭಾರತ ಕಚ್ಚಾ ತೈಲದ ಸಂಗ್ರಹಣೆಗೆ ಆದ್ಯತೆ ನೀಡಿದೆ. ಬಿಕ್ಕಟ್ಟಿನ ಸಮಯದಲ್ಲಿ ಸಿದ್ಧತೆಯನ್ನ ಖಚಿತಪಡಿಸಿಕೊಳ್ಳಲು ನಮ್ಮ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್‌ನ ಗಣನೀಯ ನಿಕ್ಷೇಪಗಳನ್ನ ನಿರ್ವಹಿಸುತ್ತಿವೆ. ಕಳೆದ 11 ವರ್ಷಗಳಲ್ಲಿ, 53 ಲಕ್ಷ ಮೆಟ್ರಿಕ್ ಟನ್‌ಗಳಿಗೂ ಹೆಚ್ಚು ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳನ್ನ ಸ್ಥಾಪಿಸಲಾಗಿದೆ ವಿವರಿಸಿದರು.

**ವ್ಯಾಪಾರಕ್ಕೆ ಹೊಡೆತ–ಒಪ್ಪಿಕೊಂಡ ಪ್ರಧಾನಿ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ನಮ್ಮ ವ್ಯಾಪಾರ ಮಾರ್ಗಗಳ ಮೇಲೆ ಪರಿಣಾಮ ಬೀರುತ್ತಿವೆ ಎಂದು ಪ್ರಧಾನಿ ಮೋದಿ ಒಪ್ಪಿಕೊಂಡಿದ್ದಾರೆ. ಇದರಿಂದಾಗಿ ಪೆಟ್ರೋಲ್, ಡೀಸೆಲ್, ಅನಿಲ ಮತ್ತು ರಸಗೊಬ್ಬರಗಳಂತಹ ಅಗತ್ಯ ವಸ್ತುಗಳ ನಿಯಮಿತ ಪೂರೈಕೆಗೆ ಅಡ್ಡಿಯುಂಟಾಗುತ್ತಿದೆ. ಆದ್ರೆ ದೇಶದ ಅಗತ್ಯತೆಗಳನ್ನ ಪೂರೈಸಲು ನಮ್ಮ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಂಡಿದೆ ಎಂದು ಸದನಕ್ಕೆ ತಿಳಿಸಿದರು.

## ಹಾರ್ಮುಜ್ ಜಲಸಂಧಿ ಬಗ್ಗೆ ಟ್ರಂಪ್ ಜೊತೆ ಮೋದಿ ಚರ್ಚೆ

ನವದೆಹಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಕರೆ ಮಾಡಿ ಮಾತನಾಡಿದ್ದಾರೆ. ಈ ವೇಳೆ ಇಬ್ಬರು ನಾಯಕರು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಬಗ್ಗೆ ಚರ್ಚಿಸಿದ್ದಾರೆ.



ಅಧ್ಯಕ್ಷ ಟ್ರಂಪ್ ಅವರು ಕರೆ ಮಾಡಿ ಮಾತನಾಡಿದರು. ಪಶ್ಚಿಮ ಏಷ್ಯಾ ಪರಿಸ್ಥಿತಿಯ ಬಗ್ಗೆ ಉಪಯುಕ್ತ ಅಭಿಪ್ರಾಯಗಳನ್ನು ಈ ವೇಳೆ ಹಂಚಿಕೊಂಡೆವು ಎಂದು ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಉದ್ವಿಗ್ನತೆಯನ್ನು ಆದಷ್ಟು ಬೇಗ ಕಡಿಮೆ ಮಾಡಲು ಮತ್ತು ಶಾಂತಿ ಪುನಃಸ್ಥಾಪಿಸಲು ಭಾರತ ಬಯಸುತ್ತದೆ. ಹೊರ್ಮುಜ್ ಜಲಸಂಧಿಯು ಎಲ್ಲ ಹಡಗುಗಳಿಗೆ ಮುಕ್ತ ಮತ್ತು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ಇಡೀ ಜಗತ್ತಿಗೆ ಅತ್ಯಗತ್ಯ. ಶಾಂತಿ ಮತ್ತು ಸ್ಥಿರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಪರಸ್ಪರ ಜತೆಯಾಗಿ ಕೆಲಸ ಮಾಡಲು ನಾವು ಒಪ್ಪಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹೊರ್ಮುಜ್ ಜಲಸಂಧಿಯನ್ನು ಮುಕ್ತವಾಗಿಡುವುದರ ಅಗತ್ಯತೆ ಸೇರಿದಂತೆ ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು ಎಂದು ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸೆರ್ಗಿಯೊ ಗೊರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

## ಭೂಮಿ ರಕ್ಷಣೆ ವಿಧೇಯಕ ಅಂಗೀಕಾರ

ಶಾಲಾ ಆಸ್ತಿ ಸಂರಕ್ಷಣೆಯ ಉದ್ದೇಶದಿಂದ ಈ ವಿಧೇಯಕ ವನ್ನು ತರಲಾಗಿದೆ. ಇದಕ್ಕೆ ಅನುಮೋದನೆ ನೀಡಬೇಕು ಎಂದು ಕೋರಿದರು. ವಿರೋಧಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ವಿಧೇಯಕ ವನ್ನು ನಾವು ಸ್ವಾಗತಿಸುತ್ತೇವೆ, ನಮ ಬೆಂಬಲವೂ ಇದೆ. ಜಮೀನನ್ನು ಶಾಲೆ ಹೆಸರಿಗೆ ಖಾತೆ ಮಾಡಿಸಿ ಎಂಬ ಸಲಹೆ ಕೊಟ್ಟರು.

ಜಿ.ಟಿ.ದೇವೇಗೌಡ ಸೇರಿದಂತೆ ಹಲವು ಶಾಸಕರು ಕಾಲೇಜು, ಆಸ್ಪತ್ರೆ ಸೇರಿದಂತೆ ಸರ್ಕಾರಿ ಸಂಸ್ಥೆಗಳ ಆಸ್ತಿಗಳನ್ನು ಆಯಾ ಸಂಸ್ಥೆ ಹೆಸರುಗಳಿಗೆ ದಾಖಲಾಗುವಂತೆ ಮಾಡಬೇಕು ಎಂಬ ಸಲಹೆ ಮಾಡಿದರು. ಸಭಾಧ್ಯಕ್ಷ ಯು.ಟಿ.ಖಾದರ್ ಸದನದ ಎಲ್ಲಾ ಸದಸ್ಯರ ಪರವಾಗಿ ಈ ವಿಧೇಯಕ ತಂದಿರುವುದಕ್ಕೆ ನಿಮನ್ನು ಅಭಿನಂದಿಸುತ್ತೇನೆ ಎಂದರು. ವಿಧೇಯಕವನ್ನು ಮತಕ್ಕೆ ಹಾಕಿದಾಗ ಧ್ವನಿಮತದ ಅಂಗೀಕಾರ ದೊರೆಯಿತು.

> **ಸ್ಥಳೀಯ ಸಭೆ–ಸಮಾರಂಭಗಳಲ್ಲಿ ಸರ್ಕಾರಿ ಶಾಲಾ–ಕಾಲೇಜು ಭೂಮಿಯನ್ನು ರಕ್ಷಣೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಶಾಲಾ ಮುಖ್ಯಸ್ಥರು ಹಾಗೂ ಅಧಿಕಾರಿಗಳಿಗೆ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಹೇಳುತ್ತಲೇ ಬಂದಿದ್ದರು. ಈಗ ಅದಕ್ಕೆ ಒಂದು ಕಾನೂನು ರೂಪವೇ ಬಂದುತಾಗಿದೆ ಈ ವಿಧೇಯಕ ರೂಪಿಸುವಲ್ಲಿ ಗೌಡರ ಪಾತ್ರವೂ ಪ್ರಧಾನವಾಗಿರುವುದರಲ್ಲಿ ಅನುಮಾನವೇ ಇಲ್ಲ.**

## ನೀರು ಕುಡಿಯಲು ಮಾತ್ರ ಮೀಸಲು

ಬೇಸಿಗೆಯಲ್ಲಿ 207 ತಾಲೂಕುಗಳ ಕೆಲ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ. ಈ ಪೈಕಿ 60 ತಾಲೂಕುಗಳು ಈಗಾಗಲೇ ನೀರಿನ ಕೊರತೆ ಎದುರಿಸುತ್ತಿವೆ. ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲು ಮುಂಜಾಗ್ರತಾ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಕಳೆದ ಅವಧಿಯಲ್ಲಿ ಮಲೆನಾಡು ಕರಾವಳಿ ಭಾಗದಲ್ಲಿ ಭೂ ಕುಸಿತ ಉಪಶಮನ ಕಾಮಗಾರಿಗಳಿಗಾಗಿ ಅಂದಾಜು ರೂ. 466.63 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. ಅಲ್ಲದೆ, ಸಮುದ್ರ ಕೊರತೆ ಉಪಶಮನಕ್ಕೆ ರೂ.198.88 ಕೋಟಿ ಹಣ ಕೋರಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ರಾಜ್ಯ ಸರ್ಕಾರ 2025 ನವೆಂಬರ್ 17ನೇ ತಾರೀಖು ಭಾರತ ಸರ್ಕಾರಕ್ಕೆ ಎರಡು ಜ್ಞಾಪನ ಪತ್ರಗಳನ್ನು ಸಲ್ಲಿಸಲಾಗಿದೆ. ಪರಿಹಾರವಾಗಿ ಬೆಳೆ ಇನ್ಪುಟ್ ಸಬ್ಸಿಡಿಗಾಗಿ ರೂ.614.90 ಕೋಟಿ ಮತ್ತು ಹಾನಿಗೊಳಗಾದ ಮೂಲಸೌಕರ್ಯಗಳ ಮರುಸ್ಥಾಪನೆಗಾಗಿ ಚೇತರಿಕೆ ಮತ್ತು ಪುನರ್ ನಿರ್ಮಾಣ ಅಡಿಯಲ್ಲಿ ರೂ.1521.67 ಕೋಟಿ ಕೋರಲಾಗಿದೆ. IMCT ತಂಡ 2026ರ ಜನವರಿ 11 ರಿಂದ 13 ರವರೆಗೆ ಕರ್ನಾಟಕಕ್ಕೆ ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದೆ, ಮಳೆ ಕೊರತೆ ಎದುರಿಸಲು ಮುನ್ನೆಚ್ಚರಿಕಾ ಕ್ರಮಗಳಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಾಪ್ತಾಹಿಕ ಮಳೆ ಮೇಲ್ವಿಚಾರಣೆ, ಜಿಲ್ಲಾವಾರು ಬೆಳೆ ಆಕಸ್ಮಿಕ ಯೋಜನೆ ಮತ್ತು ಬರ ನಿರೋಧಕ ಬಿತ್ತನೆ ಬೀಜ ತಳಿಗಳ ಅಭಿವೃದ್ಧಿಪಡಿಸುವುದು.

ಮೇವು ಲಭ್ಯತೆ ಬಗ್ಗೆ ನಿರಂತರ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಮೇವಿನ ಕೊರತೆಗಾಗಿ ಆಕಸ್ಮಿಕ ಯೋಜನೆಗಳನ್ನು ಸಿದ್ಧಪಡಿಸುವುದು ಎಂದರು.

ಮೈಸೂರು ಮಿತ್ರ

ಬುಧವಾರ 25 ಮಾರ್ಚ್ 2026

# ಮೇ–ಜೂನ್ ವೇಳೆಗೆ ಹೈದರಾಲಿ ರಸ್ತೆಯಲ್ಲಿ ಗಿಡ ನೆಡಲಾಗುವುದು

**ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಸ್ಪಷ್ಟನೆ**



ಶೇಕ್ ತನ್ವೀರ್ ಆಸೀಫ್

ಮೈಸೂರು, ಮಾ.24(ಬಿಎಲ್‌ಯು)– ಅಗಲೀಕರಣಗೊಂಡಿರುವ ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಮೇ ಇಲ್ಲವೆ ಜೂನ್ ವೇಳೆಗೆ ಗಿಡಗಳನ್ನು ನೆಡಲಾಗುವುದು ಎಂದು ಮೈಸೂರು ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಹೈದರಾಲಿ ರಸ್ತೆಯಲ್ಲಿ ಅರಣ್ಯ ಇಲಾಖೆಯವರು ಗಿಡ ನೆಡಲಿದ್ದಾರೆ ಎಂದರು. ಬೇಸಿಗೆ ಹಿನ್ನೆಲೆಯಲ್ಲಿ ಈಗ ಗಿಡ ನೆಟ್ಟರೆ ಒಣಗುವ ಅಥವಾ ಸರಿಯಾಗಿ ಬೆಳವಣಿಗೆ ಆಗದ ಸಾಧ್ಯತೆ ಇರುತ್ತದೆ. ಆದ ಕಾರಣ ಮಳೆಗಾಲದ ಆರಂಭದಲ್ಲಿ ಗಿಡಗಳನ್ನು ನೆಡಲಾಗುವುದು. ಮೇ ಅಥವಾ ಜೂನ್‌ನಲ್ಲಿ ಗಿಡ ನೆಟ್ಟಾಗ ಮಳೆಗಾಲದಲ್ಲಿ ಅದರ ಬೆಳವಣಿಗೆ ಹೆಚ್ಚಾಗುತ್ತದೆ. ಮಳೆಗಾಲ ಮುಗಿದ ನಂತರ ನಗರಪಾಲಿಕೆ ಆ ಗಿಡಗಳಿಗೆ ನೀರು ಹಾಕಿ ಬೆಳೆಸಲಿದೆ. ಒಟ್ಟಾರೆ ಆ ರಸ್ತೆಯಲ್ಲಿ ಗಿಡಗಳನ್ನು ನೆಟ್ಟು ನಿರ್ವಹಣೆ ಮಾಡಲಾಗುವುದು ಎಂದರು. ಮೈಸೂರು ಪಾಲಿಕೆಯಲ್ಲಿ ಒಟ್ಟು 9 ವಲಯ ಕಚೇರಿಗಳಿವೆ. ಪ್ರತಿಯೊಂದು ವಲಯ ಕಚೇರಿ ವ್ಯಾಪ್ತಿಯಲ್ಲಿ 1,500 ಗಿಡ ನೆಡುವ ಯೋಜನೆ ರೂಪಿಸಲಾಗಿದೆ ಎಂದು ಶೇಕ್ ತನ್ವೀರ್ ಆಸೀಫ್ ತಿಳಿಸಿದರು.

# ಇಂದು ಮೈಸೂರು ಪಾಲಿಕೆ ಬಜೆಟ್ ಮಂಡನೆ



ಮೈಸೂರು, ಮಾ.24(ಬಿಎಲ್‌ಯು)–ಮೈಸೂರು ನಗರ ಪಾಲಿಕೆಯ 2026–27ನೇ ಸಾಲಿನ ಬಜೆಟ್ ನಾಳೆ (ಮಾರ್ಚ್ 25) ಮಂಡನೆಯಾಗಲಿದೆ. ನಗರಪಾಲಿಕೆಯ ಶ್ರೀ ನಾಲ್ವಡಿ ಕೃಷ್ಣ ರಾಜ ಒಡೆಯರ್ ಸಭಾಂಗಣದಲ್ಲಿ ಪಾಲಿಕೆ ಆಡಳಿತಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಧ್ಯಕ್ಷತೆಯಲ್ಲಿ ನಾಳೆ ಬೆಳಿಗ್ಗೆ 11 ಗಂಟೆಗೆ ಬಜೆಟ್ ಸಭೆ ಆಯೋಜಿಸಲಾಗಿದೆ. ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಆಯವ್ಯಯ ಮಂಡಿಸಲಿದ್ದಾರೆ.

# ವಿಶ್ವ ಜಲ ದಿನಾಚರಣೆ: ನೀರಿನ ಮಿತ ಬಳಕೆ ಅವಶ್ಯ




ಅಪೂರ್ವ ಸ್ನೇಹ ಬಳಗದ ವತಿಯಿಂದ ವಿಶ್ವ ಜಲ ದಿನ ಆಚರಿಸಲಾಯಿತು.

ಮೈಸೂರು,ಮಾ.24–ನೀರು ಅಮೂಲ್ಯ ಜೀವದ್ರವ್ಯ ಆಗಿದ್ದು, ಅದರ ಸಂರಕ್ಷಣೆ ಮತ್ತು ಮಿತ ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಕಿವಿಮಾತು ಹೇಳಿದರು.

ಅಪೂರ್ವ ಸ್ನೇಹ ಬಳಗದ ವತಿಯಿಂದ ವಿಶ್ವ ಜಲ ದಿನಾಚರಣೆ ಅಂಗವಾಗಿ ಹೋಟೆಲ್‌ಗಳಲ್ಲಿ ನೀರಿನ ಮಿತಿ ಬಳಕೆ ಜಾಗೃತಿ ಕಾರ್ಯಕ್ರಮವನ್ನು ಚಾಮುಂಡಿಪುರಂ ಅಪೂರ್ವ ಹೋಟೆಲ್ ಸಭಾಂಗಣ ಮುಂಭಾಗ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನೀರನ್ನು ಮಿತವಾಗಿ ಬಳಸದಿದ್ದರೆ ಮುಂದಿನ ದಿನಗಳಲ್ಲಿ ನೀರಿಗಾಗಿಯೇ ಯುದ್ಧ ಮಾಡುವಂಥ ಪರಿಸ್ಥಿತಿ ಎದುರಾಗಲಿದೆ. ನೀರಿನ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಅವಶ್ಯ ಎಂದರು.

ನೀರು ವಿಶಿಷ್ಟವಾದ ವಸ್ತು, ಜೀವಜಲ ಎನ್ನುತ್ತೇವೆ. ಮನುಷ್ಯ ಕೇವಲ ನೀರನ್ನು ಮಾತ್ರ ಸೇವಿಸಿ 21 ದಿನಗಳ ವರೆಗೂ ಬದುಕಬಲ್ಲ. ಹೀಗಿರುವಾಗ ನೀರಿನ ಸಂರಕ್ಷಣೆ ಎಷ್ಟು ಮುಖ್ಯ ಎಂಬುದು ತಿಳಿಯುತ್ತದೆ. ಅರಬ್ ದೇಶಗಳಲ್ಲಿ ಏನೆಲ್ಲಾ ಐಷಾರಾಮಿ ವಸ್ತುಗಳು ಸಿಗುತ್ತವೆ. ಆದರೆ, ನೀರನ್ನು ಹಣ ಕೊಟ್ಟು ಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ನೀರು ಧಾರಾಳವಾಗಿ ದೊರೆಯುತ್ತದೆ ಆದರೆ ಅದನ್ನ ತುಂಬಾ ಪೋಲು ಮಾಡುತ್ತೇವೆ. ಇದು ಹೀಗೇ ಮುಂದುವರೆದಲ್ಲಿ ಮುಂದಿನ ಪೀಳಿಗೆಗೆ ನೀರನ್ನು ಹೆಚ್ಚು ಹಣ ಕೊಟ್ಟು ಕೊಳ್ಳುವ ಸ್ಥಿತಿ ಬಂದರೂ ಬರಬಹುದಾಗಿದೆ. ಆದ್ದರಿಂದ ನೀರನ್ನು ಮಿತವಾಗಿ ಬಳಸುವುದು ಇಂದಿನ ಅಗತ್ಯಗಳಲ್ಲೊಂದಾಗಿದೆ ಎಂದರು.

ಇದೇ ವೇಳೆ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮಾಜಿ ನಗರಪಾಲಿಕೆ ಸದಸ್ಯರಾದ ಜಗದೀಶ್, ದೂರ ರಾಜಣ್ಣ, ಆನಂದ್ ಜಟ್ಟಿ ಪ್ರಸಾದ್, ನಿವೃತ್ತ ಶಿಕ್ಷಕರಾದ ಮಹಾದೇವಸ್ವಾಮಿ, ಶಿವಲಿಂಗಸ್ವಾಮಿ, ಗೌರಿಶಂಕರನಗರ ಶಿವು ಸೇರಿದಂತೆ ಇನ್ನಿತರರು ಹಾಜರಿದ್ದರು.

# ಉದ್ಯಾನವನದಲ್ಲಿ ಮಲಗಿದ್ದಲ್ಲೇ ವ್ಯಕ್ತಿ ಸಾವು

ಮೈಸೂರು, ಮಾ.24(ಜಿಎ)–ವ್ಯಕ್ತಿಯೋರ್ವ ಮಲಗಿರುವಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರು ಬನ್ನಿಮಂಟಪದ ಹೈವೇ ವೃತ್ತದಲ್ಲಿರುವ ಪುತಲಿ ಉದ್ಯಾನವನದಲ್ಲಿ ಮಂಗಳವಾರ ನಡೆದಿದೆ.

ಶಾಂತಿನಗರದ ಖಲೀಮ್(37) ಮೃತಪಟ್ಟಿರುವ ವ್ಯಕ್ತಿ. ಮಂಗಳವಾರ ಸಂಜೆ 5 ಗಂಟೆ ಸಂದರ್ಭದಲ್ಲಿ ಪುತಲಿ ಉದ್ಯಾನವನದಲ್ಲಿ ವಾಕಿಂಗ್ ಮಾಡುತ್ತಿದ್ದ ವಾಯುವಿಹಾರಿಗಳು ವ್ಯಕ್ತಿಯೋರ್ವ ಹುಲ್ಲು ಹಾಸಿನ ಮೇಲೆ ಅಸಹಜವಾಗಿ ಮಲಗಿರುವುದನ್ನು ಗಮನಿಸಿ, ತಕ್ಷಣವೇ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ಸ್ಥಳಕ್ಕೆ ಆಗಮಿಸಿದ ಮಂಡಿ ಠಾಣೆಯ ಪೊಲೀಸರು ಸದರಿ ವ್ಯಕ್ತಿ ಮೃತಪಟ್ಟಿರುವುದನ್ನು ಧೃಡಪಡಿಸಿಕೊಂಡರು. ನಂತರ ಆತನ ಜೇಬು ಪರಿಶೀಲಿಸಿದಾಗ ಮೊಬೈಲ್ ದೊರಕಿದ್ದು, ಡೈಯಲ್‌ನಲ್ಲಿದ್ದ ನಂಬರ್‌ಗೆ ಕರೆ ಮಾಡಿ ವ್ಯಕ್ತಿಯ ಬಗ್ಗೆ ಪೂರ್ವಪರ ವಿಚಾರಿಸಿ ಮೃತಪಟ್ಟಿರುವುದು ಖಲೀಮ್ ಎಂದು ಧೃಡಪಡಿಸಿಕೊಂಡು ನಂತರ ಸ್ಥಳಕ್ಕೆ ಬರುವಂತೆ ಸೂಚಿಸಿದರು. ಪೊಲೀಸರಿಂದ ಕರೆ ಸ್ವೀಕರಿಸಿದ ಖಲೀಮ್ ಅಕ್ಕನ ಮಗ ತಮ್ಮ ದೊಡ್ಡ ಮಾವ ರಹೀಮ್ ಅವರನ್ನು ಕರೆದುಕೊಂಡು ಸ್ಥಳಕ್ಕೆ ಆಗಮಿಸಿದ ನಂತರ ಮೃತದೇಹವನ್ನು ನೋಡಿ ಮೃತ ವ್ಯಕ್ತಿ ತನ್ನ ತಮ್ಮ ಖಲೀಮ್ ಎಂಬುದನ್ನು ಖಚಿತಪಡಿಸಿದರು. ನಂತರ ಪೊಲೀಸರು ಮರಣೋತ್ತರ ಪರೀಕ್ಷೆಗೆ ಮೈಸೂರು ವೈದ್ಯಕೀಯ ಮತ್ತು ಸಂಶೋಧನ ಸಂಸ್ಥೆಯ ಶವಾಗಾರಕ್ಕೆ ದೇಹವನ್ನು ಆಂಬುಲೆನ್ಸ್ ಮೂಲಕ ರವಾನಿಸಿದರು.

# ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ನಿರ್ಮಾಣದ ಬೇಸಿಗೆ ಶಿಬಿರ

ಮೈಸೂರು, ಮಾ. 24– ಪರಮಹಂಸ ಶಾರ್ಪ್ ಮೈಂಡ್ ಅಕಾಡೆಮಿಯಿಂದ 6ರಿಂದ 15 ವರ್ಷದ ವಿದ್ಯಾರ್ಥಿಗಳಿಗಾಗಿ ಸರ್ವಾಂಗೀಣ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಬೇಸಿಗೆ ಶಿಬಿರವನ್ನು ಏ.5ರಿಂದ ಮೇ 6 ರವರೆಗೆ ರಾಮಕೃಷ್ಣನಗರ ಯೋಗ ಪಾರ್ಕ್ ಪಕ್ಕದಲ್ಲಿರುವ ಪರಮಹಂಸ ಶಾರ್ಪ್ ಮೈಂಡ್ ಅಕಾಡೆಮಿಯಲ್ಲಿ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ನಾಟಕ, ಗಂಧರ್ವ ವಿದ್ಯೆ, ಬ್ರೈನ್ ಜಿಮ್, ಸಂಗೀತ, ಭಾವಗೀತೆ, ಶ್ಲೋಕ, ಭಗವದ್ಗೀತೆ, ಭಾವಗೀತೆ, ಭಾಷಾ ಕಲೆ, ನೃತ್ಯ, ದೇಸಿ ಆಟಗಳು, ವಾಟರ್ ಗೇಮ್ಸ್, ನೀತಿ ಕಥೆಗಳು, ಯೋಗ, ಇನ್ ಯೋಗ, ಪ್ರಾಣಾಯಾಮ, ಧ್ಯಾನ, ಪ್ರಕೃತಿ ನಡಿಗೆ, ಪ್ರವಾಸ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಏರ್ಪಡಿಸಲಾಗಿದೆ. ಆಸಕ್ತರು ತಮ್ಮ ಹೆಸರನ್ನು ಮೇ 2ರೊಳಗೆ ಮೊ. 70901 57993, 953820 52222ರಲ್ಲಿ ನೊಂದಾಯಿಸಿಕೊಳ್ಳಲು ಕೋರಲಾಗಿದೆ.

## ನಾಳೆ ಜನ ಸಂಪರ್ಕ ಸಭೆ

**ಮೈಸೂರು:** ವಿವಿ ಮೊಹಲ್ಲಾ ವಿಭಾಗದಲ್ಲಿ ಮಾ.26ರಂದು ಗ್ರಾಹಕರ ಕುಂದುಕೊರತೆಗಳ ಬಗ್ಗೆ ಬೆಳಿಗ್ಗೆ 11 ಗಂಟೆಗೆ ಕುವೆಂಪು ನಗರ ಉಪವಿಭಾಗ ಕಚೇರಿ, ಮಧ್ಯಾಹ್ನ 4 ಗಂಟೆಗೆ ಆರ್.ಕೆ.ನಗರ ಉಪ ವಿಭಾಗ ಕಚೇರಿಯಲ್ಲಿ ಸಭೆ ಏರ್ಪಡಿಸಲಾಗಿದೆ.

# ಮೈಸೂರಿನಲ್ಲಿ ಬ್ಲಾಕ್ ಸ್ಪಾಟ್ ಗುರುತಿಸಿ ಅಪಘಾತ ತಡೆಯಲು ವೈಜ್ಞಾನಿಕ ಕ್ರಮ

## ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ತಾಕೀತು

● 15 ದಿನದೊಳಗೆ ಅಂದಾಜು ತಯಾರಿಸಿ ● ಅನುಮೋದನೆ ಆಗಿರುವ ಕಾಮಗಾರಿ 30 ದಿನದೊಳಗೆ ಮುಗಿಸಿ ● ತಿರುವುಗಳಲ್ಲಿ ಎಚ್ಚರಿಕೆ ಫಲಕ ಹಾಕಿ, ಸ್ಪೀಡ್ ಬ್ರೇಕರ್ ಅಳವಡಿಸಿ ● ಕಡ್ಡಾಯವಾಗಿ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಬೇಕು



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಅವರು ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿದರು.

ಮೈಸೂರು, ಮಾ.24(ಬಿಎಲ್‌ಯು)– ಮೈಸೂರಿನಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಅಪಘಾತ ಸಂಭವಿಸದಂತೆ ವೈಜ್ಞಾನಿಕ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೆಚ್ಚು ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ, ಅದನ್ನು ದುರಸ್ತಿ ಮಾಡಲು ಇನ್ನು 15 ದಿನದೊಳಗೆ ಎಸ್ಟಿಮೇಟ್ ತಯಾರಿಸಿ ಎಂದು ಸೂಚಿಸಿದರು.

ಅವೈಜ್ಞಾನಿಕ ಹಂಪ್‌ಗಳಿದ್ದರೆ ಕೂಡಲೇ ಅದನ್ನು ತೆರವುಗೊಳಿಸಿ. ಈಗಾಗಲೇ ಅನುಮೋದನೆ ಆಗಿರುವ ಸ್ಥಳಗಳಲ್ಲಿ 30 ದಿನದೊಳಗೆ ಕಾಮಗಾರಿ ಮುಗಿಸಬೇಕು ಎಂದು ಲಕ್ಷ್ಮಿ ಕಾಂತರೆಡ್ಡಿ ಕಟ್ಟಾಜ್ಞೆ ಮಾಡಿದರು.

ತೀವ್ರ ತಿರುವುಗಳಿರುವ ರಸ್ತೆಗಳಲ್ಲಿ ತಿರುವುಗಳನ್ನು ಸ್ವಲ್ಪ ಕಡಿಮೆ ಮಾಡಿ. ತಿರುವುಗಳ ಬಗ್ಗೆ ವಾಹನ ಸವಾರರಿಗೆ ಮಾಹಿತಿ ನೀಡುವ ಎಚ್ಚರಿಕೆ ಫಲಕಗಳನ್ನು ಅಳವಡಿಸಿ. ಅಗತ್ಯವಿರುವ ಸ್ಥಳಗಳಲ್ಲಿ ಸ್ಪೀಡ್ ಬ್ರೇಕರ್‌ಗಳನ್ನು ಅಳವಡಿಸಿ ಎಂದು ಸಲಹೆ ನೀಡಿದರು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಂಪ್‌ಗಳನ್ನು ಅಳವಡಿಸಬಾರದು. ಹೆಚ್ಚು ಅಪಘಾತ ಆಗುವ ಸ್ಥಳಗಳನ್ನು ಗುರುತಿಸಿ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಿ ಎಂದರು.

ರಸ್ತೆ ಅಪಘಾತದಿಂದ ಹಲವರು ಪ್ರಾಣ ಕಳೆದುಕೊಳ್ಳುತ್ತಿದ್ದು, ಕೆಲವರು ಅಂಗವಿಕಲರಾಗುತ್ತಿದ್ದಾರೆ. ಪ್ರತಿಯೊಂದು ಜೀವ ಅಮೂಲ್ಯ ಎಂಬುದನ್ನು ಮರೆಯಬೇಡಿ ಎಂದು ಅಧಿಕಾರಿಗಳಿಗೆ ತಿಳಿ ಹೇಳಿದರು. ವಾಹನ ಸವಾರರು ಕೂಡ ಸಂಚಾರ ನಿಯಮಗಳನ್ನು ಪರಿಪಾಲಿಸಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು, 4 ಚಕ್ರದ ವಾಹನ ಚಾಲಕರು ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಬೇಕು ಎಂದು ಲಕ್ಷ್ಮಿ ಕಾಂತರೆಡ್ಡಿ ಸೂಚಿಸಿದರು.

ಡಿಸಿಪಿ ಸುಂದರ್‌ರಾಜ್, ಎಎಸ್ಪಿ ನಾಗೇಶ್, ರಸ್ತೆ ಸುರಕ್ಷತಾ ಸಮಿತಿ ಸದಸ್ಯರು ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಮೈಸೂರಲ್ಲಿ ಕ್ಷಯ ರೋಗ ನಿರ್ಮೂಲನೆ ಬಗ್ಗೆ ಜಾಗೃತಿ ಜಾಥ




ವಿಶ್ವ ಕ್ಷಯ ರೋಗ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಕ್ಷಯ ರೋಗ ನಿರ್ಮೂಲನೆ ಬಗ್ಗೆ ಅರಿವು ಮೂಡಿಸುವ ಜಾಥಾ ನಡೆಸಲಾಯಿತು.

ಮೈಸೂರು, ಮಾ.24(ಬಿಎಲ್‌ಯು)– ವಿಶ್ವ ಕ್ಷಯ ರೋಗ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಮಂಗಳವಾರ ಕ್ಷಯ ರೋಗ ನಿರ್ಮೂಲನೆಯ ಬಗ್ಗೆ ಅರಿವು ಮೂಡಿಸುವ ಜಾಥ ನಡೆಯಿತು.

ನಗರದ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲಿ ಆರಂಭವಾದ ಜಾಥಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಭಾಗೀಯ ಸಹ ನಿರ್ದೇಶಕ ಡಾ.ಪ್ರಕಾಶ್ ಪುರಾಣಿಕ್ ಚಾಲನೆ ನೀಡಿದರು.

ಡಿಹೆಚ್‌ಒ ಕಚೇರಿಯಿಂದ ಹೊರಟ ಜಾಥವು ಎಸ್‌ಪಿ ಆಫೀಸ್ ವೃತ್ತವನ್ನು ಬಳಸಿ ಮತ್ತೆ ಡಿಹೆಚ್ ಒ ಕಚೇರಿಯನ್ನು ತಲುಪಿತು. ಆರಂಭಿಕ ಪತ್ತೆ, ಆರಂಭಿಕ ಚಿಕಿತ್ಸೆಯಿಂದ ಟಿಬಿ ಅಂತ್ಯ, ಟಿಬಿ ಬಗ್ಗೆ ಎಚ್ಚರವಿರಲಿ, ಒಬ್ಬ ಕ್ಷಯ ರೋಗಿ ವರ್ಷದಲ್ಲಿ 10–15 ಜನರಿಗೆ ರೋಗ ಹರಡುತ್ತಾನೆ ಎಂಬಿವೆ ಎಚ್ಚರಿಕೆ ಫಲಕಗಳನ್ನು ವಿದ್ಯಾರ್ಥಿಗಳು ಹಿಡಿದು ಜನರಲ್ಲಿ ಜಾಗೃತಿ ಮೂಡಿಸಿದರು. ತರುವಾಯ ಆರೋಗ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಷಯ ಸೋಂಕಿತ ಮಕ್ಕಳಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು. ಅಲ್ಲದೆ ಕ್ಷಯ ಮುಕ್ತ ಗ್ರಾಮ ಪಂಚಾಯತ್‌ಗಳಿಗೆ ಪ್ರಮಾಣ ಪತ್ರವನ್ನು ಕೂಡ ಈ ವೇಳೆ ವಿತರಿಸಲಾಯಿತು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮ್ಮದ್, ಜೆಎಸ್‌ಎಸ್ ಕಾಲೇಜಿನ ಡಾ.ನಯನ ಇತರರು ಹಾಜರಿದ್ದರು.

# ಏ.5ರಿಂದ 'ಹಾಡು ಆಟ ಆಡು' ಬೇಸಿಗೆ ಶಿಬಿರ

ಮೈಸೂರು,ಮಾ.24(ಜಿಎ)–ನೇಪಥ್ಯ ರಂಗತಂಡದಿಂದ 'ಹಾಡು ಆಟ ಆಡು' ಸೀಸನ್–4 ಬೇಸಿಗೆ ಶಿಬಿರವನ್ನು ಏ.5 ರಿಂದ ಮೇ 2ರವರೆಗೆ ಎರಡು ಶಾಖೆಗಳಲ್ಲಿ ಏರ್ಪಡಿಸಲಾಗಿದೆ ಎಂದು ತಂಡದ ಮುಖ್ಯಸ್ಥ ಗೌತಮ್ ವಿರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಬೇಸಿಗೆ ಶಿಬಿರದಲ್ಲಿ ರಂಗಭೂಮಿ ಮುಖ್ಯ ವಿಷಯವಾಗಿದೆ. ಇದರೊಟ್ಟಿಗೆ ಮಕ್ಕಳಿಗೆ ಕರಗ, ಕೋಲಾಟ, ನವಿಲು ಕುಣಿತ, ಹಬ್ಬಗಳ ಮಹತ್ವ, ನಾಗರಿಕ ಜವಾಬ್ದಾರಿ, ಕೃಷಿ ಮೌಲ್ಯಗಳ ಬಗ್ಗೆ ಚಟುವಟಿಕೆ ನಡೆಸಲಾಗುತ್ತದೆ. ಸರಸ್ವತಿಪುರಂನಲ್ಲಿರುವ ಕುವೆಂಪು ಹೈಸ್ಕೂಲ್, ಶ್ರೀರಾಂಪುರದ ಶ್ರೀಬ್ರಹ್ಮಸ್ವತ್ಯಾಚಾರ್ಯ ವಿದ್ಯಾ ಸಂಸ್ಥೆ ಆವರಣದಲ್ಲಿ ಶಿಬಿರ ನಡೆಯಲಿದೆ. ಮಾಹಿತಿಗಾಗಿ 9341669293, 9880817153 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಭರತ್, ಭಾರ್ಗವಿ, ಸಾಗರ್, ವಿಜಯ್ ಮತ್ತಿತರರು ಉಪಸ್ಥಿತರಿದ್ದರು.

# ಮಾ.27ರಂದು ಮಾಂಸ ಮಾರಾಟ ನಿಷೇಧ

ಮೈಸೂರು, ಮಾ.24– ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮಾ.27ರಂದು ಶ್ರೀರಾಮ ನವಮಿ ಆಚರಣೆ ಪ್ರಯುಕ್ತ ಮುಚ್ಚಲಾಗುತ್ತದೆ.

ಈ ದಿನ (ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ. ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ ಎಂದು ಮೈಸೂರು ಮಹಾ ನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೀವನವಿರುವುದು ಸಾಧನೆ ಮಾಡಲಿಕ್ಕೆ ಎಂಬುದನ್ನು ಯುವ ಸಮೂಹಕ್ಕೆ ಅರ್ಥ ಮಾಡಿಸುವ ಅನಿವಾರ್ಯತೆ

## ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ ಅಭಿಮತ

ಮೈಸೂರು,ಮಾ.24(ಎಂಕೆ)– ಯೂಸ್‌ಲೆಸ್ ಮತ್ತು ಹೋಪ್‌ಲೆಸ್ ಆಗುತ್ತಿರುವ ಯುವ ಸಮೂಹವನ್ನು ಎಚ್ಚರಿಸಿ, ಪ್ರೇರಣೆ ನೀಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ಭವನದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ 'ರಾಷ್ಟ್ರೀಯ ಭಾವೈಕ್ಯತಾ ಶಿಬಿರ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯುವ ಸಮೂಹಕ್ಕೆ ತಮ್ಮ ಅಸ್ತಿತ್ವದ ಕುರಿತು ಅರ್ಥಮಾಡಿಸಬೇಕಿದೆ. ಜೀವನ ಬರೀ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಮಾತ್ರ ಇರುವುದಲ್ಲ. ಸಾಧನೆ ಮಾಡುವುದಕ್ಕಾಗಿ ಎಂಬುದನ್ನು ಮನದಟ್ಟು ಮಾಡಿಕೊಡಬೇಕಿದೆ ಎಂದರು.

ಸಾಮಾನ್ಯವಾಗಿ ಯುವಕರು–ಯುವತಿಯರು ತಮ್ಮ ತಂದೆ–ತಾಯಿ ಬೈಯ್ಯುತ್ತಾ ಹೇಳುವ ಮಾತುಗಳನ್ನು ಕೇಳುವುದಿಲ್ಲ. ಆದರೆ, ಆ ಯುವಕ–ಯುವತಿಯರಿಗೆ ವಯಸ್ಸಾದಂತೆ ಅವರ ತಂದೆ–ತಾಯಿ ಹೇಳುತ್ತಿದ್ದ ಮಾತುಗಳು ಸರಿ ಎನಿಸ ತೊಡಗುತ್ತದೆ. ಎಚ್ಚೆತ್ತುಕೊಳ್ಳುವಷ್ಟರಲ್ಲಿ ಅಮೂಲ್ಯ ಸಮಯ ವ್ಯರ್ಥವಾಗಿರಲಿದ್ದು, ಮತ್ತೆ ಹಳೆಯ ದಿನಗಳು ವಾಪಸ್ ಬರದಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಆದ್ದರಿಂದ ಎಚ್ಚೆತ್ತುಕೊಳ್ಳುವ ವಯಸ್ಸಿನಲ್ಲೇ ಎಚ್ಚೆತ್ತು ಸಾಧನೆ ಮಾಡಬೇಕು ಎಂದರು.




ಮೈಸೂರು ವಿವಿ ಎನ್‌ಎಸ್‌ಎಸ್ ಭವನದಲ್ಲಿ ಹಮ್ಮಿಕೊಂಡಿರುವ 'ರಾಷ್ಟ್ರೀಯ ಭಾವೈಕ್ಯತಾ ಶಿಬಿರ'ವನ್ನು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜ್ ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತಿತರರಿದ್ದರು.

ದೈಹಿಕ ಮತ್ತು ಮಾನಸಿಕವಾಗಿ ಶಕ್ತಿಶಾಲಿಗಳಾದ ಯುವಕ–ಯುವತಿಯರು ಉತ್ಸಾಹದಿಂದ ಉತ್ತಮ ಜೀವನ ಕಟ್ಟಿಕೊಳ್ಳಬೇಕು. ಅದಕ್ಕೆ ಮುಖ್ಯವಾಗಿ ಶಿಸ್ತು, ಸಮಯಪ್ರಜ್ಞೆ ಮೈಗೂಡಿಸಿಕೊಳ್ಳಬೇಕು. ತಾಯಿ ಮತ್ತು ತಾಯಿ ನಾಡಿಗೆ ನಂಬಿಕೆಗೆ ಅರ್ಹರಾಗಿ ಬದುಕಬೇಕು. ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.


ಸಮಾರಂಭ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಎಲ್ಲರ ಸೇವೆ ಮಾಡುವುದು ಎನ್‌ಎಸ್‌ಎಸ್‌ನ ಉದ್ದೇಶವಾಗಿದೆ. ಎನ್‌ಎಸ್‌ಎಸ್ ಮಹಾತ್ಮ ಗಾಂಧಿಯವರ ಕನಸಾಗಿದ್ದು, ಅವರ ಕನಸನ್ನು ನನಸು ಮಾಡುವ ಮೂಲಕ ದೇಶಕ್ಕಾಗಿ ಬದುಕಬೇಕಿದೆ ಎಂದರು.

ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ದೇಶಕ್ಕಾಗಿ ದುಡಿಯಬೇಕು. ಶಿಕ್ಷಣದ ಜೊತೆಗೆ ಸೇವೆಯಲ್ಲಿ ತೊಡಗಿದರೆ ಸಮಾಜದಲ್ಲಿ ಪರಿಣಾಮಕಾರಿ ಬದಲಾವಣೆ ಸಾಧ್ಯವಾಗಲಿದೆ. ಉತ್ತಮ ಕಲಿಕೆ, ಉತ್ತಮ ಆಲೋಚನೆಗಳೊಂದಿಗೆ ದೇಶದ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಬಳಿಕ ವಿವಿಧ ರಾಜ್ಯಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ಪ್ರತಿಮಾ, ಮೈಸೂರು ವಿವಿ ಎನ್‌ಎಸ್‌ಎಸ್ ಅಧಿಕಾರಿ ಪ್ರೊ.ಸುರೇಶ್ ಮತ್ತಿತರರಿದ್ದರು.

# ಏ.10ರಿಂದ ಕಲರವ ಮಕ್ಕಳ ಬೇಸಿಗೆ ಶಿಬಿರ

ಮೈಸೂರು, ಮಾ.24(ಜಿಎ)–ರಂಗಾಂತರಂಗ ಮೈಸೂರು ಸಂಸ್ಥೆ ವತಿಯಿಂದ 'ಕಲರವ' ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಸ್ಥಾಪಕ ಕೆ.ಎಂ.ಕೀರ್ತಿರಾಜ್ ಈ ವಿಷಯ ತಿಳಿಸಿ, ಶಿಬಿರದಲ್ಲಿ ನಾಟಕ, ಅಭಿನಯ ಪೂರ್ವ ಸಿದ್ಧತೆ, ರಂಗಗೀತೆ, ಜನಪದ ಹಾಡು, ಭಾಷಾ ಕೌಶಲ್ಯ, ನೃತ್ಯ, ನವರಸ, ವಚನ, ಒಗಟು, ವಿಕಸನ ಕೌಶಲ್ಯ ಕಲಿಸಲಾಗುವುದು. ಶಿಬಿರ ಏ.10ರಿಂದ ಮೇ10ರವರೆಗೆ ಕುವೆಂಪುನಗರ ಕೆ ಬ್ಲಾಕ್ ಆದಿಚುಂಚನಗಿರಿ ರಸ್ತೆಯ ಕಾವೇರಿ ವಿದ್ಯಾ ಸಂಸ್ಥೆಯಲ್ಲಿ ನಡೆಯಲಿದೆ. ಮಾಹಿತಿಗೆ ದೂ. 9739 919004 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ ನಾ.ದಿವಾಕರ್, ಗೌರಿ ಶಂಕರ್, ನಟರಾಜ್ ಉಪಸ್ಥಿತರಿದ್ದರು.

## ನೇಮಕ



**ಮೈಸೂರು:** ಕರ್ನಾಟಕ ಪ್ರದೇಶ ಯೂತ್ ಕಾಂಗ್ರೆಸ್ ಸಮಿತಿಯ ಮೈಸೂರು ಗ್ರಾಮಾಂತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಜಿಲ್ಲಾ ಉಪಾಧ್ಯಕ್ಷರನ್ನಾಗಿ ಎಂ.ಎಸ್.ಶಶಾಂಕ್ ಗೌಡ ಅವರನ್ನು ನೇಮಕ ಮಾಡಲಾಗಿದೆ.

# ದೇಶ – ವಿದೇಶ


## ರೈಲ್ವೆ ಟಿಕೆಟ್ ವಿತರಣೆ, ಮರುಪಾವತಿ ನೀತಿಯಲ್ಲಿ ಬದಲಾವಣೆ!




**ನವದೆಹಲಿ:** ಭಾರತೀಯ ರೈಲ್ವೆಯು ಪ್ರಯಾಣಿಕರಿಗೆ ಸೀಟು ಲಭ್ಯತೆ ಹೆಚ್ಚಿಸುವ ಉದ್ದೇಶದಿಂದ ಟಿಕೆಟ್ ವಿತರಣೆ ಮತ್ತು ಮರುಪಾವತಿ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಮುಂದಾಗಿದೆ. ಹೊಸ ನಿಯಮದನ್ವಯ, ರೈಲು ಹೊರಡುವ ನಿಗದಿತ ಸಮಯಕ್ಕೆ 8 ಗಂಟೆಗಳಿಗಿಂತ ಕಡಿಮೆ ಅವಧಿ ಇರುವಾಗ ಕಾಯ್ದಿರಿಸಿದ ಟಿಕೆಟ್‌ಗಳನ್ನು ರದ್ದುಗೊಳಿಸಿದರೆ ಯಾವುದೇ ಹಣ ಮರುಪಾವತಿ ದೊರೆಯುವುದಿಲ್ಲ. 72 ಗಂಟೆಗಳಿಗಿಂತ ಹೆಚ್ಚಿನ ಸಮಯವಿರುವಾಗ ಟಿಕೆಟ್ ರದ್ದುಗೊಳಿಸಿದರೆ, ಫ್ಲಾಟ್ ರದ್ದತಿ ಶುಲ್ಕವನ್ನು ಮಾತ್ರ ಕಡಿತಗೊಳಿಸಿ ಉಳಿದ ಹಣವನ್ನು ಹಿಂದಿರುಗಿಸಲಾಗುತ್ತದೆ. 72 ಗಂಟೆಗಳಿಂದ 24 ಗಂಟೆಗಳ ಮೊದಲು ಟಿಕೆಟ್ ರದ್ದು ಮಾಡಿದರೆ ಶೇ.75ರಷ್ಟು ಮೊತ್ತ ಮರುಪಾವತಿಯಾಗುತ್ತದೆ. ರೈಲು ಹೊರಡುವ 24 ಗಂಟೆಗಳಿಂದ 8 ಗಂಟೆಗಳಿಗೂ ಮೊದಲು ಟಿಕೆಟ್ ರದ್ದು ಮಾಡಿದರೆ, ಪ್ರಯಾಣಿಕರಿಗೆ ಶೇ.50ರಷ್ಟು ಮಾತ್ರ ಮರುಪಾವತಿಯಾಗಲಿದೆ. ಆಫ್‌ಲೈನ್ ಟಿಕೆಟ್ ಹೊಂದಿರುವ ಪ್ರಯಾಣಿಕರು ಯಾವುದೇ ರೈಲ್ವೆ ನಿಲ್ದಾಣದಿಂದ ಟಿಕೆಟ್‌ಗಳನ್ನು ರದ್ದುಗೊಳಿಸಬಹುದು. ಇದರೊಂದಿಗೆ ಪ್ರಯಾಣಿಕರು ತಮ್ಮ ಬೋರ್ಡಿಂಗ್ ಪಾಯಿಂಟ್ ಬದಲಾಯಿಸುವ ಪ್ರಕ್ರಿಯೆಯನ್ನೂ ಸರಳಗೊಳಿಸುವುದರೊಂದಿಗೆ ಮೊಬೈಲ್ ಅಪ್ಲಿಕೇಶನ್ ಮೂಲಕ ಸುಲಭವಾಗಿ ನವೀಕರಿಸಲು ಅವಕಾಶ ನೀಡಲಾಗುತ್ತದೆ.


## ದುರಂಧರ್ ಬಿಡುಗಡೆ; ಪಾಕಿಸ್ತಾನದಲ್ಲಿ ಸಂಚಲನ

**ಇಸ್ಲಾಮಾಬಾದ್:** ಬಾಲಿವುಡ್ ನಟ ರಣವೀರ್ ಸಿಂಗ್ ಅಭಿನಯದ 'ದುರಂಧರ್ 2' ಹಿಂದಿ ಸಿನಿಮಾ ಪಾಕಿಸ್ತಾನದಲ್ಲೂ ಸಂಚಲನ ಮೂಡಿಸಿದೆ. ಸಿನಿಮಾದಲ್ಲಿ ಭಾರತೀಯ ಗೂಢಾಚರರು ಪಾಕಿಸ್ತಾನದಲ್ಲಿ ಮಾರುವೇಷದಲ್ಲಿದ್ದು, ಅಲ್ಲಿನ ಮಾಹಿತಿ ಸಂಗ್ರಹಿಸುವ ಬಗ್ಗೆ ವಿವರಿಸಲಾಗಿದೆ. ಇದರಿಂದ ಪಾಕಿಸ್ತಾನದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ ಎನ್ನಲಾಗಿದ್ದು, ಇದಕ್ಕೆ ಸಂಬಂಧಿಸಿದ ಕೆಲವೊಂದು ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡಿವೆ. ರಸ್ತೆಬದಿ ಮಲಗಿರುವವರು, ಗುರುತು ಪರಿಚಯ ಇಲ್ಲದವರನ್ನೆಲ್ಲ ಹುಡುಕಿ ಅವರ ರಾಷ್ಟ್ರೀಯತೆಯನ್ನು ಕೇಳಲಾಗುತ್ತಿದೆ.




ಆದರೆ ವೈರಲ್ ಆಗಿರುವ ವೀಡಿಯೊ ಹೊಸದಲ್ಲ, ಇದು ಕರಾಚಿಯಲ್ಲಿ ನಡೆದ ಹಳೆಯ ಪೊಲೀಸ್ ಕಾರ್ಯಾಚರಣೆ ಎನ್ನಲಾಗಿದೆ. ಇದು ನಿಯಮಿತ ತಪಾಸಣೆಯ ಭಾಗವೇ ಹೊರತು ಸಿನಿಮಾದಿಂದ ಪ್ರೇರಿತವಾದುದಲ್ಲ ಎಂದು ಮೂಲಗಳು ತಿಳಿಸಿವೆ. ಆದಾಗ್ಯೂ ಭಾರತೀಯ ಸಿನಿಮಾವೊಂದು ಪಾಕಿಸ್ತಾನದ ನಿದ್ದೆ ಕೆಡಿಸಿರುವುದು ಮಾತ್ರ ಸತ್ಯ ಎಂದು ನೆಟ್ಟಿಗರು ಅಭಿಪ್ರಾಯಿಸಿದ್ದಾರೆ.

## ಉಳಿದ ದಿನವಹಿ ಮೊಬೈಲ್ ಡೇಟಾವನ್ನು ಮರುದಿನ ಬಳಸಲು ಅವಕಾಶ ನೀಡಿ



**ನವದೆಹಲಿ:** ಬಳಕೆಯಾಗದೆ ಉಳಿಯುವ ದಿನವಹಿ ಇಂಟರ್ನೆಟ್ ಡೇಟಾವನ್ನು ಮರುದಿನ ಬಳಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಸಂಸತ್ ಭವನದಲ್ಲಿ ಆಮ್ ಆದ್ಮಿ ಪಕ್ಷದ ಸಂಸದ ರಾಘವ್ ಚಡ್ಡಾ ಆಗ್ರಹಿಸಿದ್ದಾರೆ. ಸಾಮಾನ್ಯವಾಗಿ ದಿನವಹಿ 1.5 ಜಿಬಿ, 2 ಜಿಬಿ, 3 ಜಿಬಿ ಡೇಟಾ ಒಳಗೊಂಡಂತೆ ರೀಚಾರ್ಜ್ ಮಾಡಿಕೊಳ್ಳುತ್ತೇವೆ. ಆದರೆ ಬಹುತೇಕರು ಡೇಟಾವನ್ನು ಪೂರ್ಣ ಬಳಕೆ ಮಾಡುವುದಿಲ್ಲ. ಎಷ್ಟೇ ಡೇಟಾ ಉಳಿದಿದ್ದರೂ ಮಧ್ಯರಾತ್ರಿ 12 ಗಂಟೆಯಾಗುತ್ತಿದ್ದಂತೆ ಹೊಸ ಇಂಟರ್ನೆಟ್ ಡೇಟಾ ಆರಂಭವಾಗುತ್ತದೆ. ಬಳಸದೆ ಉಳಿಯುವ ಇಂಟರ್ನೆಟ್ ಡೇಟಾವನ್ನು ಕಂಪನಿಗಳು ಹಿಂಪಡೆಯುತ್ತವೆ. ನಾವು ಅದಕ್ಕೆ ಸಂಪೂರ್ಣವಾಗಿ ಹಣ ಪಾವತಿಸಿರುವುದರಿಂದ ಬಳಸದೆ ಉಳಿದ ಇಂಟರ್ನೆಟ್ ಡೇಟಾವನ್ನು ಮರುದಿನ ಬಳಸಲು ಟೆಲಿಕಾಂ ಕಂಪನಿಗಳು ಅನುಮತಿ ನೀಡಬೇಕು ಎಂದರು.

ಬಳಕೆದಾರರ ಬಳಕೆಯಾಗದ ಮೊಬೈಲ್ ಡೇಟಾವನ್ನು ಟೆಲಿಕಾಂ ಕಂಪನಿಗಳು ಮಧ್ಯರಾತ್ರಿ ಮುಟ್ಟುಗೋಲು ಹಾಕಿಕೊಳ್ಳುತ್ತವೆ. ಇದನ್ನು ಮರುದಿನಕ್ಕೆ ಮುಂದುವರಿಸಲಾಗುವುದಿಲ್ಲ. ಡೇಟಾವನ್ನು ರೋಲ್‌ಓವರ್ ಮಾಡಲು ಅಥವಾ ಮಾರನೇ ದಿನಕ್ಕೆ ಸಾಗಿಸಲು ಯಾವುದೇ ಸೌಲಭ್ಯವಿಲ್ಲ. ನಾವು ಪಾವತಿಸಿದ ಡೇಟಾವನ್ನು ಟೆಲಿಕಾಂ ಕಂಪನಿಗಳು ಯಾಕೆ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಮನವಿ ಮಾಡಿದರು.

## ಯುದ್ಧದ ನಡುವೆ ಅತ್ಯಧಿಕ ಮುಖಬೆಲೆ ನೋಟು ಬಿಡುಗಡೆ ಮಾಡಿದ ಇರಾನ್




**ಟೆಹರಾನ್:** ಯುದ್ಧದ ನಡುವೆಯೂ ಇರಾನ್ ಹೊಸ 10 ಮಿಲಿಯನ್ ಮೌಲ್ಯದ ರಿಯಲ್ ನೋಟನ್ನು ಬಿಡುಗಡೆ ಮಾಡಿದ್ದು, ಇದು ಈವರೆಗೆ ಬಿಡುಗಡೆಯಾದ ಅತ್ಯಧಿಕ ಮುಖಬೆಲೆಯ ನೋಟು ಎನ್ನಲಾಗಿದೆ. ಭಾರತೀಯ ರೂಪಾಯಿ ಲೆಕ್ಕದಲ್ಲಿ ಇದರ ಮೌಲ್ಯ 650 ರೂ. ಆಗಿದೆ. ಇಸ್ರೇಲ್ ಹಾಗೂ ಇರಾನ್ ನಡುವೆ ಭೀಕರ ಯುದ್ಧ ಮುಂದುವರೆದಿದ್ದು, ಇರಾನ್ ಹಾರ್ಮುಜ್ ಜಲಸಂಧಿಯನ್ನೇ ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ಈ ಮಾರ್ಗದಲ್ಲಿ ಸಾಗುವ ಹಡಗುಗಳಿಗೆ ಟೋಲ್ ವಿಧಿಸಲು ಮುಂದಾಗಿದೆ. ಜಲಸಂಧಿ ತೆರೆಯದಿದ್ದರೆ ಭೀಕರ ದಾಳಿ ಎಚ್ಚರಿಕೆ ನೀಡಿದ್ದ ಅಮೆರಿಕ, ಸದ್ಯ ಯುದ್ಧಕ್ಕೆ ಅಲ್ಪ ವಿರಾಮ ನೀಡಿದೆ. ಯುದ್ಧ ಪರಿಣಾಮದಿಂದ ಉಂಟಾಗಿರುವ ಹಣದುಬ್ಬರವನ್ನು ತಡೆಯಲು ಇರಾನ್ ತನ್ನ ಹೊಸ ಮುಖಬೆಲೆ ನೋಟನ್ನು ಪರಿಚಯಿಸಿದೆ. ಯುದ್ಧದಿಂದಾಗಿ ದಿನನಿತ್ಯ ಬಳಕೆ ವಸ್ತುಗಳ ಬೆಲೆ ದುಪ್ಪಟ್ಟಾಗಿರುವುದರಿಂದ ವಹಿವಾಟುಗಳನ್ನು ಇನ್ನಷ್ಟು ಸುಲಭಗೊಳಿಸಲು ಈ ನೋಟನ್ನು ಪರಿಚಯಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯುದ್ಧದ ಬಿಕ್ಕಟ್ಟಿನಿಂದಾಗಿ ಡಿಜಿಟಲ್ ಪಾವತಿ ಸೇವೆಗಳು ರದ್ದಾಗಬಹುದೆಂಬ ನಿರೀಕ್ಷೆಯಿಂದ ಜನರು ನಗದು ಹಣವನ್ನು ಪಡೆಯಲು ಬ್ಯಾಂಕ್‌ಗಳಿಗೆ ಧಾವಿಸುತ್ತಿದ್ದಾರೆ. ಇದರಿಂದಾಗಿ ಇರಾನ್‌ನ ಬ್ಯಾಂಕ್‌ಗಳು ಮತ್ತು ಎಟಿಎಂಗಳಲ್ಲಿ ದೀರ್ಘ ಸರತಿ ಸಾಲುಗಳಲ್ಲಿ ಜನರು ನಿಲ್ಲುತ್ತಿದ್ದಾರೆ.

## ಭಯದಿಂದ ರೇಬಿಸ್ ಲಸಿಕೆ ಪಡೆಯದ ಬಾಲಕಿ; ನಾಯಿ ಕಚ್ಚಿ ಆರು ತಿಂಗಳ ಬಳಿಕ ಮೃತ್ಯು



**ಮುಂಬೈ:** ನಾಯಿ ಕಡಿತಕ್ಕೆ ಒಳಗಾಗಿದ್ದ ಬಾಲಕಿ, ಭಯದಿಂದ ರೇಬಿಸ್ ಲಸಿಕೆ ಹಾಕಿಸಿಕೊಳ್ಳದೆ ಸಾವನ್ನಪ್ಪಿರುವ ಘಟನೆ ಮುಂಬೈನಲ್ಲಿ ನಡೆದಿದೆ.

9 ವರ್ಷದ ಬಾಲಕಿ ಕೌಶಿಶ್ ಸಹಾನಿ ಮೃತಪಟ್ಟ ಬಾಲಕಿ. ಈಕೆ ಆರು ತಿಂಗಳ ಹಿಂದೆ ಅಜ್ಜಿಯೊಂದಿಗೆ ಪ್ರಯಾಣಿಸುತ್ತಿದ್ದಾಗ ನಾಯಿ ಕಚ್ಚಿತ್ತು. ಜೊತೆಯಲ್ಲಿದ್ದ ಅಜ್ಜಿ ತಡ ಮಾಡದೆ ರೇಬಿಸ್ ಲಸಿಕೆ ಹಾಕಿಸಲೆಂದು ಅಂದೇ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೆ, ಬಾಲಕಿ ಎಷ್ಟೇ ಒತ್ತಾಯಿಸಿದರೂ ಭಯದಿಂದ ಲಸಿಕೆ ಹಾಕಿಸಿಕೊಳ್ಳಲು ಒಪ್ಪಲಿಲ್ಲ. ಕೈಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡು ಲಸಿಕೆ ನೀಡಲು ಪ್ರಯತ್ನಿಸಿದರೂ ಆಕೆ ಒದ್ದಾಡಿ ಬಿಡಿಸಿಕೊಂಡಿದ್ದಳು. ಆದ್ದರಿಂದ ಪೋಷಕರು ಅನಿವಾರ್ಯವಾಗಿ ಸುಮ್ಮನಾದರು. ಕೆಲವು ದಿನಗಳ ನಂತರ ಕೌಶಿಶ್ ಸಹಾನಿ ಮೊದಲಿನಂತಾಗಿ, ಸಹಪಾಠಿಗಳೊಂದಿಗೆ ಚಟುವಟಿಕೆಯಿಂದ ಇದ್ದಳು. ಇದರಿಂದ ಪೋಷಕರು ಮಗಳಿಗೆ ಲಸಿಕೆಯ ಅಗತ್ಯವಿಲ್ಲ ಎಂದು ಭಾವಿಸಿ, ಇನ್ನೆಂದು ಚುಚ್ಚುಮದ್ದು ಹಾಕಿಸಿಕೊಳ್ಳಲು ಒತ್ತಡ ಹೇರಲೇ ಇಲ್ಲ. ಆದರೆ ಇತ್ತೀಚೆಗೆ ಆಕೆಯ ಆರೋಗ್ಯ ಹದಗೆಟ್ಟಿತ್ತು. ಚಿಕಿತ್ಸೆ ಕೊಡಿಸಿದರೂ ಹುಷಾರಾಗದ ಕಾರಣ ಸೋಮವಾರ ಮುಂಬೈನ ಕಸ್ತೂರ್ ಬಾ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಆಕೆ ಮೃತಪಟ್ಟಳು ಎಂದು ಖಾಸಗಿ ಮಾಧ್ಯಮಗಳು ವರದಿ ಮಾಡಿವೆ.

# ಕಾಳು ಮೆಣಸು ಕಳವು ಮಾಡಿದ್ದ ಆರೋಪಿಗಳ ಬಂಧನ

## 2 ಕಾರು, 2 ಬೈಕು ಮತ್ತು 375 ಕೆ.ಜಿ ಮೆಣಸು ವಶ


ಬಂಧಿತ ಶಾಕೀರ್, ಶಫೀಕ್, ದರ್ಶನ್ ವಶಕ್ಕೆ ಪಡೆದ ಕಳವು ಮಾಲಿನೊಂದಿಗೆ ಪೊಲೀಸ್ ಸಿಬ್ಬಂದಿ

ವಿರಾಜಪೇಟೆ, ಮಾ.24-ಎರಡು ಪ್ರತ್ಯೇಕ ಪ್ರಕರಣದಲ್ಲಿ ಕಾಫಿ ಕಣದಲ್ಲಿ ಒಣಗಿಸಲು ಇಟ್ಟಿದ್ದ ಕಾಳು ಮೆಣಸು ಕಳ್ಳತನವೆಸಗಿ ಜಿಲ್ಲೆಯಲ್ಲಿ ಮಾರಾಟ ಮಾಡದೆ ಕೇರಳದಲ್ಲಿ ಮಾರಾಟ ಮಾಡಿದ್ದ ಮೂವರು ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ.

ಪೆರುಂಬಾಡಿ ಆರ್ಜಿ ಗ್ರಾಮ ನಿವಾಸಿ ಶಫೀಕ್ ಕೆ.ಬಿ. ಅಲಿಯಾಸ್ ಏಮು (28), ಪೆರುಂಬಾಡಿ ಆರ್ಜಿ ಗ್ರಾಮದ ನಿವಾಸಿ ದರ್ಶನ್ ನಾಯಕ್(25), ಕೇರಳ ರಾಜ್ಯದ ಮಾನಂದ ವಾಡಿ, ಎಡಪ್ಪಾಡಿ ಹೌಸ್ ಮೊಹಮ್ಮದ್ ಶಾಕಿರ್ (31 ವರ್ಷ) ಬಂಧಿತ ಆರೋಪಿಗಳು.

**ಘಟನೆಯ ವಿವರ:** ತಾಲೂಕು ಅಮ್ಮತ್ತಿ ಕಣ್ಣಂಗಾಲ ಗ್ರಾಮದ ಲೆಹರ್ ಗಣಪತಿ ಎಂಬುವರು ಕಾಫಿ ಕಣದಲ್ಲಿ ದಾಸ್ತಾನು ಇರಿಸಿದ್ದ 300 ಕೆ.ಜಿ. ಕಾಳು ಮೆಣಸು ಚೀಲ ಮಾ.9 ರಂದು ಕಣ್ಮರೆಯಾಗಿದ್ದರ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿ ತನಿಖೆಗಾಗಿ ವಿಶೇಷ ತಂಡ ರಚನೆ ಮಾಡಿದ್ದರು.

ಹುಣಸೂರು ತಾಲೂಕು ಪಂಚವಳ್ಳಿಯಲ್ಲಿ ಕಾರಿನಲ್ಲಿ ಕುಳಿತಿದ್ದ ಶಂಕಿತ ಮೂವರು ಆರೋಪಿಗಳನ್ನು ಬಂಧಿಸಿ ತನಿಖೆಗೆ ಒಳಪಡಿಸಿದಾಗ ಆರೋಪಿಗಳು ಕಳವು ಮಾಡಿದ್ದ ಕಾಳು ಮೆಣಸನ್ನು ಕೇರಳದಲ್ಲಿ ಮಾರಾಟ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ. ಪೊಲೀಸರು 1,47,275 ರೂ, ಮೌಲ್ಯದ 215 ಕೆ.ಜಿ ಕರಿಮೆಣಸು, ಕೃತ್ಯಕ್ಕೆ ಬಳಸಿದ್ದ ಅಲ್ಟೋ ಕಾರು (ಕೆ.ಎಲ್. 59ಎ-7374), ಹೋಂಡಾ ಯುನಿಕಾರ್ನ್ ಬೈಕ್ (ಕೆಎ-01 ಇಯು-9916)ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ತನಿಖೆ ವೇಳೆ ಆರೋಪಿಗಳು ಪಲ್ಸರ್ 200 ಎನ್.ಎಸ್ ಬೈಕ್ (ಕೆಎ-41ಇಎನ್-2916) ಹುಣಸೂರಿನಲ್ಲಿ ಕಳವು ಮಾಡಿದ್ದಾಗಿ ಹೇಳಿದ್ದಾರೆ. ಸುಂಠಿಕೊಪ್ಪದಲ್ಲಿ 51,375 ರೂ. ಮೌಲ್ಯದ 75 ಕೆ.ಜಿ ಕಾಳು ಮೆಣಸು ಕಳ್ಳತನಮಾಡಿದ್ದು, ಇದರೊಂದಿಗೆ ಸ್ವಿಫ್ಟ್ ಡಿಸೈರ್ ಕಾರು (ಕೆಎ-53ಎಂ.ಬಿ-9710) ಕಳ್ಳತನ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಬಂಧಿತರಿಂದ ಕಳ್ಳತನದ ಸ್ವತ್ತುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಎಸ್ಪಿ ಬಿಂದು ಮಣಿ ಆದೇಶದ ಮೇರೆಗೆ ಡಿವೈಎಸ್ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಪಿ.ಅನೂಪ್ ಮಾದಪ್ಪ ಮಾರ್ಗದರ್ಶನದಲ್ಲಿ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಎನ್.ಜೆ, ಲತಾ ಅಪರಾಧ ವಿಭಾಗ ಪಿಎಸ್ಐ ವಾಣಿಶ್ರೀ ಮತ್ತು ಸಿಬ್ಬಂದಿಗಳಾದ ನವೀನ್, ಮಜೀದ್, ಅನೀಫ, ಬಸವರಾಜು, ಶಿವರಾಜು, ಮಹೇಶ್ ಎಸ್, ರಾಜೇಶ್, ರಾಘವೇಂದ್ರ, ಶ್ರೀಪ್ರಸಾದ್ ಶಶಿಧರ, ಮಹೇಶ್ ಸಾರವಾಡ ಮತ್ತು ಗಿರೀಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಗಲ್ಲುಶಿಕ್ಷೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ


ಬೆಂಗಳೂರಿನಲ್ಲಿ ಹತ್ಯೆಗೈದ ಆರೋಪಿ ಅಯ್ಯಪ್ಪನಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಆಗ್ರಹಿಸಿ ದಸಂಸ ಬೃಹತ್ ಪ್ರತಿಭಟನೆ ನಡೆಸಿತು.

ಪೊನ್ನಂಪೇಟೆ, ಮಾ.24- ಅಮಾಯಕ ವಿದ್ಯಾರ್ಥಿನಿಯೋರ್ವಳನ್ನು ವಿವಾಹವಾಗುವುದಾಗಿ ನಂಬಿಸಿ ಬೆಂಗಳೂರಿನಲ್ಲಿ ಹತ್ಯೆಗೈದ ಆರೋಪಿ ಅಯ್ಯಪ್ಪನಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯಿಂದ ಪೊನ್ನಂಪೇಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ದಲಿತ ಸಂಘರ್ಷ ಸಮಿತಿಯ ಕೊಡಗು ಹಾಗೂ ಮೈಸೂರು ಜಿಲ್ಲಾ ಸಂಚಾಲಕ ಹೆಚ್.ಎನ್ ಕೃಷ್ಣಪ್ಪ ನೇತೃತ್ವದಲ್ಲಿ ಪೊನ್ನಂಪೇಟೆ ಬಸ್ ನಿಲ್ದಾಣದಿಂದ ತಹಸೀಲ್ದಾರ್ ಕಚೇರಿವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ವಿದ್ಯಾರ್ಥಿನಿ ರಂಜಿತಾ ಕೊಲೆ ಪ್ರಕರಣವನ್ನು ತೀವ್ರವಾಗಿ ಖಂಡಿಸಿ, ಕೊಲೆ ಆರೋಪಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಆಗ್ರಹಿಸಿದರು.

ದಸಂಸ ಮಹಿಳಾ ಒಕ್ಕೂಟದ ರಾಜ್ಯ ಸಂಯೋಜಕಿ ಗಿರಿಜಾ ಮಾತನಾಡಿ, ವಿದ್ಯಾರ್ಥಿನಿ ರಂಜಿತಾಳನ್ನು ಕಪಟ ಪ್ರೀತಿಯಲ್ಲಿ ಸಿಲುಕಿಸಿ ಕಗ್ಗೊಲೆ ಮಾಡಿರುವ ಅನುಮಾನವಿದೆ. ಇತ್ತೀಚಿನ ದಿನಗಳಲ್ಲಿ ಮುಗ್ಧ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳು ಹೆಚ್ಚುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ವಿದ್ಯಾರ್ಥಿನಿ ರಂಜಿತಾಳ ಹತ್ಯೆಯಾಗಿ ದಿನಗಳು ಕಳೆದರೂ ಸಹ ಆರೋಪಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳದಿರುವುದು ಹಾಗೂ ಸ್ಥಳೀಯ ಅಧಿಕಾರಿಗಳು ಭೇಟಿ ನೀಡಿ, ಕೊಲೆಯಾದ ವಿದ್ಯಾರ್ಥಿನಿ ಕುಟುಂಬಕ್ಕೆ ಸಾಂತ್ವನ ಹೇಳದಿರುವುದು ವಿಪರ್ಯಾಸ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ಜಿಲ್ಲಾ ಸಂಯೋಜಕ ಹೆಚ್.ಎನ್. ಕೃಷ್ಣಪ್ಪ ಮಾತನಾಡಿ, ರಂಜಿತಾಳನ್ನು ಮೋಸದ ಪ್ರೀತಿಯಲ್ಲಿ ಬೀಳಿಸಿ ಕೊಲೆ ಮಾಡಿರುವ ಅಯ್ಯಪ್ಪನಿಗೆ ಗಲ್ಲು ಶಿಕ್ಷೆಯಾಗಬೇಕು. ಆಕೆಯ ಕುಟುಂಬಕ್ಕೆ 25ಲಕ್ಷ ರೂ. ಪರಿಹಾರ ನೀಡಬೇಕು. ಸರಕಾರಿ ಉದ್ಯೋಗ ಹಾಗೂ 5 ಎಕರೆ ಜಮೀನು ನೀಡಬೇಕು ಎಂದು ಒತ್ತಾಯಿಸಿದರಲ್ಲದೇ, ತಪ್ಪಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಯೋಜಕ ಅಣ್ಣಯ್ಯ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಕಾರ್ಯದರ್ಶಿ ರಮೇಶ್, ದಸಂಸ ರಾಜ್ಯ ಸಹ ಸಂಚಾಲಕ ಶಿವಣ್ಣ ಕಂದೇಗಾಲ, ಕಾರ್ಮಿಕ ಸಂಘಟನೆ ಮುಖಂಡ ರಮೇಶ್ ಮಾಯಾಮುಡಿ ಮೊದಲಾದವರು ಮಾತನಾಡಿದರು. ರಂಜಿತಾಳ ತಾಯಿ ರಾಣಿ ಮಾತನಾಡಿ, ರಂಜಿತಾಳನ್ನು ಅಯ್ಯಪ್ಪ ಎಂಬಾತ ತಮಗೆ ಗೊತ್ತಿಲ್ಲದೇ ಕರೆದುಕೊಂಡು ಹೋಗಿ ಅನ್ನ ಆಹಾರ ನೀಡದೆ ಹಿಂಸೆ ನೀಡಿದನ್ನು ಕರೆ ಮಾಡಿ ಹೇಳಿದ್ದಾಳೆ. ಈ ರೀತಿ ಹಿಂಸೆ ನೀಡಿ ಕೊಲೆ ಮಾಡಿರುವ ಅಯ್ಯಪ್ಪನಿಗೆ ಸೂಕ್ತ ಶಿಕ್ಷೆ ನೀಡಿ ತಮ್ಮ ಮಗಳ ಸಾವಿಗೆ ನ್ಯಾಯ ದೊರಕಿಸಿಕೊಡಿ ಎಂದು ಕಣ್ಣೀರು ಮಿಡಿದರು.

ಪ್ರತಿಭಟನಾ ಸಭೆಯ ನಂತರ ಉಪತಹಶೀಲ್ದಾರ್ ಮೂಲಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಯೋಜಕ ವಿ.ಆರ್. ರಜನಿಕಾಂತ್ ವಿರಾಜಪೇಟೆ, ಜಿಲ್ಲಾ ಸಂಘಟನಾ ಸಂಯೋಜಕ ಹೆಚ್.ಎನ್.ಯೋಗೇಶ್, ಕಾರ್ಮಿಕ ಒಕ್ಕೂಟದ ಜಿಲ್ಲಾ ಸಂಯೋಜಕ ಹೆಚ್.ಜಿ ನಾಗೇಶ್, ಕಲಾ ಮಂಡಳಿ ಜಿಲ್ಲಾ ಸಂಯೋಜಕ ಕೆ.ಪೂವಣ್ಣಿ ಪಾಲೇಮಾಡು, ಹೆಚ್.ಸಿ. ರಾಜು ರಾಜಾಪುರ, ವಿಜಯ್ ಕುಟ್ಟ ಮತ್ತು ಖಜಾಂಚಿ ಹೆಚ್.ಜಿ.ನಿತೀಶ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಆಕಸ್ಮಿಕ ಬೆಂಕಿ ಸ್ಕೂಟಿ ಭಸ್ಮ; ಸವಾರರು ಪಾರು



ನಾಪೋಕ್ಲು, ಮಾ.24-ದ್ವಿಚಕ್ರ ವಾಹನಕ್ಕೆ ಆಕಸ್ಮಿಕ ಬೆಂಕಿ ತಗಲಿ ಹೊತ್ತಿ ಉರಿದ ಘಟನೆ ಸಮೀಪದ ಚೈಯಂಡಾಣೆಯ ನರಿಯಂದಡ ಗ್ರಾಮದಲ್ಲಿ ಜರುಗಿದೆ.

ಸ್ಥಳೀಯ ಆಶಾ ಕಾರ್ಯಕರ್ತೆ ಗೀತಾ ತಮ್ಮ ಸ್ಕೂಟಿಯಲ್ಲಿ ಸಹಪಾಠಿ ಆಶಾ ಕಾರ್ಯಕರ್ತೆ ರಮ್ಯ ಜೊತೆ ಚೈಯಂಡಾಣೆಯಲ್ಲಿ ಸಂಘಕ್ಕೆ ಸಂಬಂಧಿಸಿದ ಸಭೆ ಮುಗಿಸಿ ನಾಪೋಕ್ಲುವಿಗೆ ಹಿಂತಿರುಗುವ ಸಂದರ್ಭ ಈ ದುರ್ಘಟನೆ ಸಂಭವಿಸಿದೆ.

ಗೀತಾ ಚಲಾಯಿಸುತ್ತಿದ್ದ ಸ್ಕೂಟಿ ಚೈಯಂಡಾಣೆಯ ನರಿಯಂದಡ ಗ್ರಾಮದ ಇಳಿಜಾರು ರಸ್ತೆಯಲ್ಲಿ ಸಂಚರಿಸುತ್ತಿದ್ದಾಗ ಆಕಸ್ಮಿಕವಾಗಿ ಸ್ಕೂಟಿಯಲ್ಲಿ ಹೊಗೆ ಕಾಣಿಸಿಕೊಂಡಿದೆ. ಕೂಡಲೇ ಸ್ಕೂಟಿಯನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿದ ಕಾರಣ ಯಾವುದೇ ಜೀವ ಅಪಾಯ ಸಂಭವಿಸಿಲ್ಲ. ಬೆಂಕಿ ನಂದಿಸಲು ಪ್ರಯತ್ನ ಪಟ್ಟರು ಯಾವುದೇ ಪ್ರಯೋಜನವಾಗದೆ ನೋಡು ನೋಡುತ್ತಿದ್ದಂತೆ ಕ್ಷಣಾರ್ಧದಲ್ಲಿ ಸ್ಕೂಟಿ ಸಂಪೂರ್ಣ ಸುಟ್ಟು ಕರಕಲಾಗಿ ಭಾರಿ ನಷ್ಟ ಸಂಭವಿಸಿದೆ.

ಗೀತಾ ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದು ಘಟನಾ ಸ್ಥಳಕ್ಕೆ ಪೊಲೀಸರು ತೆರಳಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ.

# ನಾಳೆಯಿಂದ ಕೋದಂಡರಾಮ ದೇವಾಲಯದಲ್ಲಿ ಶ್ರೀರಾಮೋತ್ಸವ



ಮಡಿಕೇರಿ, ಮಾ.24-ನಗರದ ಕೋದಂಡ ರಾಮ ದೇವಾಲಯದಲ್ಲಿ 37ನೇ ವರ್ಷದ ಶ್ರೀ ರಾಮೋತ್ಸವ ಹಾಗೂ ದ್ವಿತೀಯ ವರ್ಷದ ಪುನರ್ ಪ್ರತಿಷ್ಠಾಪನಾ ಮಹೋತ್ಸವವು ಮಾ.26, 27ರಂದು ನಡೆಯಲಿದೆ.

ಎರಡು ದಿನಗಳ ಕಾಲ ನಡೆಯುವ ಧಾರ್ಮಿಕ ವಿಧಿ ವಿಧಾನಗಳ ಕುರಿತು ಮಾಹಿತಿ ನೀಡಿದರು. ಮಾ.26 ರಂದು ಸಂಜೆ 5 ಗಂಟೆಗೆ ಶ್ರೀ ರಾಮೋತ್ಸವದ ಅಂಗವಾಗಿ ನಗರದ ಗಾಂಧಿ ಮೈದಾನದಿಂದ ಭವ್ಯ ಮೆರವಣಿಗೆ ಸಾಗಲಿದೆ. ಮೆರವಣಿಗೆಯಲ್ಲಿ ವಿಶೇಷ ಪಲ್ಲಕ್ಕಿಯಲ್ಲಿ ಆಸೀನಗೊಂಡ ಶ್ರೀ ಕೋದಂಡ ರಾಮ ಪರಿವಾರ ಉತ್ಸವಮೂರ್ತಿಯನ್ನು ಹೊತ್ತು ನಗರದ ಪ್ರಮುಖ ರಸ್ತೆಗಳಲ್ಲಿ ತೆರಳಲಾಗುತ್ತದೆ ಎಂದು ಶ್ರೀಕೋದಂಡ ರಾಮೋತ್ಸವ ಸಮಿತಿಯ ಅಧ್ಯಕ್ಷ ಕೆ.ಎಂ.ಗಣೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತಕ್ಕೆ ಸಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ವಿವಿಧ ಆಕರ್ಷಕ ನೃತ್ಯ, ಚಂಡೆವಾದ್ಯ ಸಹಿತ ಸಾಂಸ್ಕೃತಿಕ ಕಲಾತಂಡಗಳು, ಕಲಶ ಹೊತ್ತ ಮಹಿಳೆಯರು, ವಿವಿಧ ತಂಡಗಳು ಭಜನೆಯೊಂದಿಗೆ ಮೆರವಣಿಗೆ ಸಾಗಲಿದೆ. ಮಹದೇವಪೇಟೆಯ ಬನ್ನಿಮಂಟಪದವರೆಗೆ ತೆರಳಿ ಅಲ್ಲಿಂದ ಶ್ರೀ ಕೋದಂಡ ರಾಮ ದೇವಾಲಯವನ್ನು ಸೇರಲಿದೆ. ಅಂದು ರಾತ್ರಿ ದೇವಾಲಯದ ಆವರಣದಲ್ಲಿ ಭಕ್ತರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ 10ನೇ ತರಗತಿ ಪರೀಕ್ಷೆ ನಡೆಯುತ್ತಿರುವ ಕಾರಣ ಮಾ.28ರಂದು ಸಂಜೆ ಗಾಂಧಿ ಮೈದಾನದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ. ಮಾ.25ರಂದು ಕ್ರೀಡಾ ಸಮಿತಿಯ ವತಿಯಿಂದ ಶ್ರೀ ಕೋದಂಡ ರಾಮ ದೇವಾಲಯದ ಆವರಣದಲ್ಲಿ ರಂಗೋಲಿ ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಪ್ರಧಾನ ಸಲಹೆಗಾರ ಜಿ.ರಾಜೇಂದ್ರ, ಅಧ್ಯಕ್ಷ ಹೆಚ್.ಎನ್.ನಂಜುಂಡ, ಮಾಜಿ ಅಧ್ಯಕ್ಷ ಹೆಚ್.ಮಂಜುನಾಥ್, ಸ್ವಾಗತ ಸಮಿತಿಯ ಅಧ್ಯಕ್ಷ ವಿ.ಎಸ್.ವಿನೋದ್ ಕುಮಾರ್, ಹಾಗೂ ಶ್ರೀಕೋದಂಡ ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ ಉಪಸ್ಥಿತರಿದ್ದರು.

## ನಾಳೆಯಿಂದ ತೆರೆ ಮಹೋತ್ಸವ

ವಿರಾಜಪೇಟೆ, ಮಾ.24-ವಿರಾಜಪೇಟೆಯ ಅರಸುನಗರದ ಶ್ರೀ ಮತ್ತಪ್ಪ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಹಾಗೂ [ಕೋಲ] ತೆರೆ ಮಹೋತ್ಸವವು ಮಾ.26 ರಿಂದ 29 ರವರೆಗೆ 4 ದಿನಗಳ ಕಾಲ ನಡೆಯಲಿವೆ.

ತಾ,26 ರಂದು ಬೆಳಿಗ್ಗೆ ದೇವಸ್ಥಾನದ ಕಳಸ ಪ್ರತಿಷ್ಠೆ, ಕೇರಳದ ಪ್ರಸಿದ್ದ ತಂತ್ರಿ ಬ್ರಹ್ಮಶ್ರೀ ಶ್ರೀಕುಮಾರ್ ಅವರಿಂದ ಪುನರ್ ಪ್ರತಿಷ್ಠಾಪನಾ ಪೂಜಾ ಕಾರ್ಯಗಳು ನಡೆಯಲಿದೆ, ತಾ,27 ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಗಣಪತಿ ಹೋಮ, ಕಳಸ ಪೂಜೆ, ನಂತರ ಶ್ರೀ ಮುತ್ತಪ್ಪ ಹಾಗೂ ತಿರುವಪ್ಪನ್ ಮತ್ತು ಗುಳಿಗನ್ ದೇವರ ಪ್ರತಿಷ್ಠಾಪನೆ ಬಳಿಕ, ಕಳಶಾಭಿಷೇಕ, ಮಹಾಪೂಜೆ ನಂತರ ಮಧ್ಯಾಹ್ನ ಮತ್ತು ರಾತ್ರಿ ಅನ್ನ ಸಂತರ್ಪಣೆ ನಡೆಯಲಿದೆ.

ಮಾ.28 ರಂದು ಧ್ವಜಾರೋಹಣ ಕಾರ್ಯಕ್ರಮ, ನಂತರ ಶ್ರೀ ಮುತ್ತಪ್ಪನ ಮಲೆ ಇಳಿಸುವುದು ಮತ್ತು ವೆಳ್ಳಾಟಂ, ಸಂಜೆ 6 ಗಂಟೆಗೆ ಕಳಸದೊಂದಿಗೆ ತಾಲಪ್ಪೊಲಿ ಮೆರವಣಿಗೆಯು ತೆಲುಗರ ಬೀದಿಯ ಶ್ರೀ ಮಾರಿಯಮ್ಮ ದೇವಸ್ಥಾನದಿಂದ ಮೆರವಣಿಗೆ ಹೊರಟು ಜೈನರ ಬೀದಿ, ದೊಡ್ಡಟ್ಟಿ ಚೌಕಿ, ಚರ್ಚ್ ರಸ್ತೆ ಮಾರ್ಗವಾಗಿ ಅರಸು ನಗರ ಮುತ್ತಪ್ಪ ದೇವಸ್ಥಾನ ತಲುಪಲಿದೆ.

# ಮೂರನೇ ಬಾರಿಗೆ 'ಗಾಂಧಿ ಗ್ರಾಮ ಪುರಸ್ಕಾರ' ಮುಡಿಗೇರಿಸಿಕೊಂಡ ಗುಡ್ಡೆಹೊಸೂರು ಗ್ರಾಪಂ




ಕುಶಾಲನಗರ, ಮಾ.24-ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ನೀಡಲಾಗುವ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ತಾಲೂಕಿನ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ಭಾಜನವಾಗಿದೆ. ಪಂಚಾಯಿತಿಯು ಸತತ ಮೂರನೇ ಬಾರಿಗೆ ಈ ಗೌರವವನ್ನು ಪಡೆದು 'ಹ್ಯಾಟ್ರಿಕ್' ಸಾಧನೆ ಮಾಡಿದೆ.

ಗ್ರಾಪಂ ವ್ಯಾಪ್ತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸಿರುವುದನ್ನು ಪರಿಗಣಿಸಿ ಈ ಆಯ್ಕೆ ಮಾಡಲಾಗಿದೆ. ವಿಶೇಷವಾಗಿ ಸ್ವಚ್ಛತೆ, ಕುಡಿಯುವ ನೀರು ಪೂರೈಕೆ, ತೆರಿಗೆ ಸಂಗ್ರಹಣೆ, ಪಂಚಾಯತ್ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಡಿಜಿಟಲೀಕರಣದಂತಹ ಮಾನದಂಡಗಳಲ್ಲಿ ಗುಡ್ಡೆ ಹೊಸೂರು ಪಂಚಾಯಿತಿ ಮುಂಚೂಣಿಯಲ್ಲಿದೆ.

ಈ ಪುರಸ್ಕಾರವು 4 ಲಕ್ಷ ರೂ ನಗದು ಬಹುಮಾನ ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಬೆಂಗಳೂರಿನಲ್ಲಿ ನಡೆಯಲಿರುವ ವಿಶೇಷ ಸಮಾರಂಭದಲ್ಲಿ ಸರ್ಕಾರದ ವತಿಯಿಂದ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಪ್ರಶಸ್ತಿಯ ಮೊತ್ತವನ್ನು ಗ್ರಾಮದ ಮೂಲಭೂತ ಸೌಕರ್ಯಗಳ ಮತ್ತಷ್ಟು ಅಭಿವೃದ್ಧಿಗಾಗಿ ಬಳಸಲಾಗುವುದು ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸುಮೇಶ್ ಅವರು ತಿಳಿಸಿದ್ದಾರೆ.

ಇದು ಪಂಚಾಯಿತಿ ಆಡಳಿತ ಮಂಡಳಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಿಬ್ಬಂದಿ ವರ್ಗ ಮತ್ತು ಗ್ರಾಮಸ್ಥರ ಸಾಂಘಿಕ ಶ್ರಮಕ್ಕೆ ಸಂದ ಜಯವಾಗಿದೆ.

# ಒಳಮೀಸಲಾತಿಗೆ ಒತ್ತಾಯಿಸಿ ನಾಳೆ ಬೃಹತ್ ಪ್ರತಿಭಟನೆ


ಒಕ್ಕೂಟದ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ಮಾ.24-ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟ ಹಾಗೂ ಮಾದಿಗ ಸಂಘಟನೆಗಳ ಒಕ್ಕೂಟದಿಂದ ಮಾ.26ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಹೇಳಿದರು.

ಸಂಪೂರ್ಣ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಈಗಾಗಲೇ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮುದಾಯದ ವತಿಯಿಂದ ಹೋರಾಟ ಮಾಡಲಾಗಿದ್ದು, ಮಾ.27ರ ವಿಶೇಷ ಸಚಿವ ಸಂಪುಟದಲ್ಲಿ ಸಂಪೂರ್ಣ ಒಳಮೀಸಲಾತಿ ಜಾರಿ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಒತ್ತಾಯ ಮಾಡಲಾಗಿದೆ. ಇದು ನಮ್ಮ ಅಳಿವು-ಉಳಿವಿನ ಹೋರಾಟವಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ಶ್ರೀಮಹಾಶಿವ ಶರಣ ಹರಳಯ್ಯ ಮಠದ ಶ್ರೀಬಸವ ಹರಳಯ್ಯ ಸ್ವಾಮೀಜಿ ನೇತೃತ್ವದಲ್ಲಿ ಬೆಳಗ್ಗೆ 10.30ಕ್ಕೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಿಂದ ಪ್ರತಿಭಟನಾ ಮೆರವಣಿಗೆ ಹೊರಟು ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಪಚ್ಚಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ನಂತರ ಮೆರವಣಿಗೆಯು, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಲಾಗುವುದು ಎಂದರು.

ರಾಜ್ಯದ ಮೀಸಲಾತಿ ವ್ಯವಸ್ಥೆಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕು. ರಾಜಕೀಯ ಚುನಾವಣೆಗಳಲ್ಲಿ ಸಂಪೂರ್ಣ ಒಳಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಅಂದು ನಡೆಯುವ ಬೃಹತ್ ಪ್ರತಿಭಟನೆಗೆ ಸಮುದಾಯದವರು ಸ್ವಯಂಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಹೆಚ್. ನಾಗರಾಜು, ಬ್ಯಾಂಕ್ ಬಸವರಾಜು ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಹಸಗೂಲಿ ಸಿದ್ದಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಮುಖಂಡರಾದ ಎಲ್ಐಸಿ ರಾಜಣ್ಣ, ಕೆಸ್ತೂರುಮರಪ್ಪ ಹಾಜರಿದ್ದರು.

## ತೋಟದ ಮನೆಗೆ ಚಿರತೆ: ಆತಂಕದಲ್ಲಿ ರೈತರು



ಗುಂಡ್ಲುಪೇಟೆ ಮಾ.24-ತಾಲೂಕಿನ ಶಿವಪುರ ಗ್ರಾಮದ ತೋಟದಲ್ಲಿರುವ ಮನೆಗೆ ರಾತ್ರಿ ವೇಳೆ ಚಿರತೆ ಬಂದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಕಲ್ಲುಕಟ್ಟೆ ಜಲಾಶಯದ ಸಮೀಪದ ಜಮೀನುಗಳಲ್ಲಿ ಹಲವಾರು ರೈತರು ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಜತೆಗೆ ಹಸುಕರುಗಳನ್ನು ಸಾಕುತ್ತಿದ್ದಾರೆ. ಸೋಮವಾರ ಮಧ್ಯರಾತ್ರಿ ಗ್ರಾಮದ ಸಿದ್ದಮಲ್ಲಪ್ಪ ಎಂಬುವರ ತೋಟದ ಮನೆಗೆ ಚಿರತೆ ಆಗಮಿಸಿದ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮನೆಯಲ್ಲಿ ವಯಸ್ಸಾದ ತಾಯಿ ತಂದೆ ಹಾಗೂ ಇಬ್ಬರು ಚಿಕ್ಕಮಕ್ಕಳಿದ್ದು ಚಿರತೆ ಆಗಮಿಸಿರುವುದು ಕುಟುಂಬದವರನ್ನು ಹಾಗೂ ಗ್ರಾಮಸ್ಥರನ್ನು ಆತಂಕಕ್ಕೆ ಈಡು ಮಾಡಿದೆ.

# ಅತ್ಯಾಚಾರ ಆರೋಪಿಗೆ 20ವರ್ಷ ಕಠಿಣ ಶಿಕ್ಷೆ


ಮಹೇಶ

ಚಾಮರಾಜನಗರ, ಮಾ.24-ಮದುವೆಯಾಗುವುದಾಗಿ ನಂಬಿಸಿ ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ್ದ ತಮಿಳುನಾಡು ಮೂಲದ ಯುವಕನಿಗೆ ಇಲ್ಲಿನ ವಿಶೇಷ ಪೋಕ್ಸೊ ನ್ಯಾಯಾಲಯವು 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ದಂಡ ವಿಧಿಸಿದೆ.

ರಾಜ್ಯದ ಗಡಿಯಲ್ಲಿರುವ ತಮಿಳುನಾಡಿನ ತಾಳವಾಡಿ ತಾಲೂಕಿನ ದೊಡ್ಡಗಾಜನೂರು ಗ್ರಾಮದ ಜಿ. ಮಹೇಶ (28) ಶಿಕ್ಷೆಗೊಳಗಾದ ಅಪರಾಧಿಯಾಗಿದ್ದಾನೆ.

**ಪ್ರಕರಣದ ಹಿನ್ನೆಲೆ:** ಆರೋಪಿ ಮಹೇಶ ಮತ್ತು ಚಾಮರಾಜನಗರ ತಾಲೂಕಿನ ಗ್ರಾಮವೊಂದರ ಸಂತ್ರಸ್ತ ಬಾಲಕಿಯ ನಡುವೆ 2021ರ ಜುಲೈನಲ್ಲಿ ಮದುವೆ ಒಪ್ಪಂದವಾಗಿತ್ತು. ಮದುವೆ ನಿಶ್ಚಯವಾದ ಕಾರಣ ಬಾಲಕಿಯ ಮನೆಗೆ ಹೋಗಿ ಬರುತ್ತಿದ್ದ. ಆರೋಪಿಯು ಆಕೆಯನ್ನು ಪ್ರೇಕ್ಷಣೀಯ ಸ್ಥಳಗಳಿಗೆ ಹಾಗೂ ನೆಂಟರ ಮನೆಗೆ ಕರೆದೊಯ್ದು ಸುತ್ತಾಡಿಸಿದ್ದ. ಬಾಲಕಿಯ ಮನೆಯಲ್ಲಿ ಯಾರೂ ಇಲ್ಲದ ಸಮಯ ಸಾಧಿಸಿ ಹಲವು ಬಾರಿ ಅತ್ಯಾಚಾರ ಎಸಗಿದ್ದ. ಅನಂತರ ಮದುವೆ ಮುರಿದುಬಿತ್ತು. ಅತ್ಯಾಚಾರ ಸಂಬಂಧ ಚಾಮರಾಜನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ 2021ರ ಅ. 25ರಂದು ಪ್ರಕರಣ ದಾಖಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ ಎಫ್‌ಟಿಎಸ್‌ಸಿ-1 ವಿಶೇಷ ಪೋಕ್ಸೋ ನ್ಯಾಯಾಧೀಶ ಎಸ್. ಜೆ. ಕೃಷ್ಣ ಆರೋಪಿ ವಿರುದ್ಧದ ಅಪರಾಧ ಸಾಬೀತಾಗಿದ್ದು, ಅತ್ಯಾಚಾರ ಎಸಗಿದ್ದಕ್ಕಾಗಿ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು 25,000 ರೂ. ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ತಪ್ಪಿದರೆ ಹೆಚ್ಚುವರಿಯಾಗಿ 1 ವರ್ಷ ಸಾದಾ ಶಿಕ್ಷೆಯನ್ನು ವಿಧಿಸಲಾಗಿದೆ.

IPC ಕಲಂ 363ರ ಅಡಿ, ಬಾಲಕಿಯನ್ನು ಅಪಹರಿಸಿದ ಅಪರಾಧಕ್ಕಾಗಿ 3 ವರ್ಷ ಸಾದಾ ಶಿಕ್ಷೆ ಮತ್ತು 5,000 ರೂ. ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ತಪ್ಪಿದರೆ 6 ತಿಂಗಳು ಹೆಚ್ಚುವರಿ ಶಿಕ್ಷೆ ವಿಧಿಸಲಾಗಿದೆ.

**ಸಂತ್ರಸ್ತೆಗೆ ಪರಿಹಾರ:** ಆರೋಪಿ ಪಾವತಿಸುವ 25ಸಾವಿರ ರೂ. ದಂಡದ ಮೊತ್ತವನ್ನು ಸಂತ್ರಸ್ತ ಬಾಲಕಿಗೆ ಪರಿಹಾರವಾಗಿ ನೀಡಲು ನ್ಯಾಯಾಲಯ ಆದೇಶಿಸಿದೆ. ಇದರ ಜೊತೆಗೆ, ಕಾನೂನು ಸೇವಾ ಪ್ರಾಧಿಕಾರದಿಂದ ಸಂತ್ರಸ್ತೆಗೆ 4 ಲಕ್ಷ ರೂ. ಪರಿಹಾರ ನೀಡುವಂತೆ ನ್ಯಾಯಾಧೀಶರು ತೀರ್ಪಿನಲ್ಲಿ ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಎಂ.ಎಲ್. ಶೇಖರ್ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರ ವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದರು.

# ದೊಡ್ಡರಸಿನ ಕೊಳಕ್ಕೆ ಶಾಶ್ವತವಾಗಿ ನೀರು ತುಂಬಿಸಲು ಆಗ್ರಹ


ನೀರು ತುಂಬಿಸಲು ಆಗ್ರಹಿಸಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿತು.

ಚಾಮರಾಜನಗರ, ಮಾ.24-ನಗರದ ಅತ್ಯಂತ ಪ್ರಮುಖ ಕೊಳವಾದ ದೊಡ್ಡರಸಿನ ಕೊಳಕ್ಕೆ ನದಿಯಿಂದ ಶಾಶ್ವತವಾಗಿ ನೀರು ತುಂಬಿಸುವಂತೆ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಒತ್ತಾಯಿಸಿದೆ

ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತಾಪದಿಂದ ಹಾಗೂ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದೆ ಅಂತರ್ಜಲ ತೀವ್ರ ಕುಸಿತಕ್ಕೆ ಕಾರಣವಾಗಿದೆ. ನಗರ ದಲ್ಲಿನ ಅನೇಕ ಕೊಳಗಳನ್ನು ಮುಚ್ಚಿಸಿದ ಪರಿಣಾಮ ಪಟ್ಟಣದಲ್ಲಿ ನೀರು ಸರಿಯಾಗಿ ಶೇಖರಣೆಯಾಗದೆ ತೀವ್ರ ನೀರಿನ ಸಮಸ್ಯೆ ಆಗಿದೆ. ಈ ಹಿಂದೆ ಸುಮಾರು ಏಳೆಂಟು ಕೊಳಗಳಿದ್ದು, ನೀರು ಸಂಪೂರ್ಣ ಶೇಖರಣೆಯಾಗಿ ಬಾವಿಗಳು ಮತ್ತು ಬೋರ್‌ವೆಲ್‌ಗಳಲ್ಲಿ ನೀರು ಸದಾ ಇರುತ್ತಿತ್ತು. ಇದು ಇತ್ತೀಚೆಗೆ ನೀರು ಇಲ್ಲದಂತಾಗಿದೆ. ಆದ್ದರಿಂದ ತಾವು ದೊಡ್ಡ ಅರಸಿನ ಕೊಳಕ್ಕೆ ಶಾಶ್ವತವಾಗಿ ನೀರನ್ನು ತುಂಬಿಸುವ ವ್ಯವಸ್ಥೆಯನ್ನು ಮಾಡಿದರೆ ಪಟ್ಟಣ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ ಎಂದು ಮಹಾಸಭಾದ ಕಾರ್ಯಕರ್ತರು ಜಿಲ್ಲಾಧಿಕಾರಿ ಶ್ರೀರೂಪರವರಿಗೆ ನೀಡಿರುವ ಮನವಿಯಲ್ಲಿ ಆಗ್ರಹಿಸಿದ್ದಾರೆ.

# ವೃತ್ತಿ ಜೀವನ, ಶಿಕ್ಷಣಕ್ಕೆ ಕೆರಿಯರ್ ಮೇಳ ಸಹಕಾರಿ


ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವನ್ನು ಜಿ.ಪಂ. ಸಿಇಒ ಮೋನಾ ರೋತ್ ಉದ್ಘಾಟಿಸಿದರು.

ಚಾಮರಾಜನಗರ, ಮಾ.24-ವೃತ್ತಿ ಜೀವನಕ್ಕೆ ಅಗತ್ಯವಿರುವ ಶಿಕ್ಷಣ, ಕೋರ್ಸ್ ಹಾಗೂ ಪರೀಕ್ಷಾ ಸಿದ್ದತೆ ಬಗ್ಗೆ ಮಾರ್ಗದರ್ಶನ ಮಾಡುವ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳದಂತಹ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್ ಸಲಹೆ ನೀಡಿದ್ದಾರೆ.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮಗೆ ಇಷ್ಟವಾದ ವೃತ್ತಿ, ಉದ್ಯೋಗ ಪಡೆಯಲು ಅಗತ್ಯವಾದ ಶಿಕ್ಷಣವನ್ನು ಪಡೆಯಬೇಕು, ಯಾವ ಬಗೆಯ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು, ಪರೀಕ್ಷೆಗೆ ಹೇಗೆ ಸಿದ್ದರಾಗಬೇಕೆಂದು ತಿಳಿದುಕೊಳ್ಳಬೇಕು. ನಿಮ್ಮ ಭವಿಷ್ಯ ಹಾಗೂ ಕನಸುಗಳನ್ನು ನನಸಾಗಿಸಿಕೊಳ್ಳಲು ಕೆರಿಯರ್ ಮೇಳಗಳು ಸಹಕಾರಿಯಾಗಲಿವೆ ಎಂದು ಜಿ.ಪಂ. ಸಿಇಒ ಮೋನಾ ರೋತ್ ಅವರು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಂದ್ರ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ಸಣ್ಣ ಸಣ್ಣ ಕನಸುಗಳನ್ನು ಕಾಣಬೇಡಿ, ದೊಡ್ಡ ಕನಸುಗಳನ್ನು ಕಂಡು ಆ ಕನಸುಗಳನ್ನು ಈಡೇರಿಸಿಕೊಳ್ಳಲು ಇರುವ ಅವಕಾಶ ಮತ್ತು ಮಾರ್ಗಗಳನ್ನು ಹುಡುಕಿಕೊಳ್ಳಬೇಕು. ಉನ್ನತ ಹಾಗೂ ಕೌಶಲ್ಯ ಶಿಕ್ಷಣ ಪಡೆಯುವ ಮೂಲಕ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ವೃತ್ತಿ ಮಾರ್ಗದರ್ಶನ ಮೇಳಗಳು ಮಾಹಿತಿ ನೀಡಲಿವೆ. ವಿವಿಧ ಇಲಾಖೆಗಳಲ್ಲಿ ದೊರೆಯುವ ವೃತ್ತಿ ಅವಕಾಶಗಳ ಬಗ್ಗೆ ತಿಳಿದುಕೊಂಡು ಅದಕ್ಕೆ ಅಗತ್ಯವಾದ ಶಿಕ್ಷಣ ಮತ್ತು ಮಾರ್ಗದರ್ಶನ ಪಡೆಯಲು ಇಂತಹ ಕೆರಿಯರ್ ಮೇಳಗಳು ತುಂಬಾ ಸಹಕಾರಿಯಾಗಿವೆ ಎಂದು ತಿಳಿಸಿದರು.

ಕೆರಿಯರ್ ಮೇಳದ ಉಪನ್ಯಾಸಕ ಪೃಥ್ವಿ ರಾಜ್ ಹಾಲಹಳ್ಳಿ ವಿವಿಧ ಕೋರ್ಸ್‌ಗಳು, ನೌಕರಿ ಪಡೆಯಲು ಬೇಕಾಗಿರುವ ಶಿಕ್ಷಣ, ಬದ್ಧತೆ ಮತ್ತು ಶಿಸ್ತು, ಜ್ಞಾನ, ಪರೀಕ್ಷೆ ತಯಾರಿ ಬಗ್ಗೆ ವಿಸ್ತೃತವಾಗಿ ತಿಳಿಸಿದರು. ಅಧ್ಯಕ್ಷತೆಯನ್ನು ಡಯಟ್ ಪ್ರಾಂಶುಪಾಲ ಕಾಶೀನಾಥ್ ವಹಿಸಿದ್ದರು. ಮೇಳದಲ್ಲಿ ಜಿಲ್ಲೆಯ ವಿವಿಧ ಇಲಾಖೆಯ 20 ಮಳಿಗೆಗಳಲ್ಲಿ ವೃತ್ತಿ ಮಾರ್ಗದರ್ಶನ ಹಾಗೂ ಇಲಾಖೆಯಲ್ಲಿ ವೃತ್ತಿ ಮತ್ತು ಅವಕಾಶಗಳ ಬಗ್ಗೆ ಹಾಗೂ ವಿವಿಧ ಶಿಕ್ಷಣ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಲಾಯಿತು.

ವಯಸ್ಕರ ಶಿಕ್ಷಣದ ಶಿಕ್ಷಣಾಧಿಕಾರಿ ಕಾಂತರಾಜ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೇಶವಾನಂದನ್, ಪ್ರೌಢಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಕಿರಣ್ ರಾಜ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜೀವ ಜಲ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ


ಮಧುವನಹಳ್ಳಿ ಅಂಗನವಾಡಿ ಆವರಣದಲ್ಲಿ ನೀರಿನ ಮಹತ್ವ ಕುರಿತಂತೆ ಡಿ.ವೆಂಕಟಾಚಲ ಮಾತನಾಡಿದರು.

ಕೊಳ್ಳೇಗಾಲ, ಮಾ.24-ಪ್ರತಿಯೊಬ್ಬರ ಜೀವದ ಮೂಲವಾಗಿರುವ ಜೀವಜಲ ಸಂರಕ್ಷಣೆ ಮಾಡದಿದ್ದಲ್ಲಿ ಭವಿಷ್ಯದಲ್ಲಿ ಮುಂದಿನ ಪೀಳಿಗೆ ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಹಿರಿಯ ವಕೀಲ ಡಿ.ವೆಂಕಟಾಚಲ ಆತಂಕ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ಮಧುವನಹಳ್ಳಿ ಮದ್ಯದ ಬೀದಿ ಅಂಗನವಾಡಿ ಆವರಣದಲ್ಲಿ ಮಂಗಳವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಡನೆ ವಿಶ್ವ ಜಲದಿನ ಆಚರಣೆ ಅಂಗವಾಗಿ ಆಯೋಜಿಸಿದ್ದ ನೀರಿನ ಮಹತ್ವ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಜಲ ಮೂಲಗಳನ್ನು ಕಾಪಾಡು ವುದು ನೀರಿನ ಮಿತ ಬಳಕೆ ನಮ್ಮೆಲ್ಲರ ಜಬಾಬ್ದಾರಿ, ಈನಿಟ್ಟಿನಲ್ಲಿ ಎಲ್ಲರೂ ಜಲ ಸಂರಕ್ಷಣೆಗೆ ಮುಂದಾಗಬೇಕು ಎಂದರು

ನೀರಿಲ್ಲದೆ ಜೀವನ ಅಸಾಧ್ಯ ಎಂಬ ಅರಿವು ಜನರಲ್ಲಿ ಇದ್ದರೂ ಸಹ ಮಾನವನ ಅತಿಯಾದ ಸ್ವಾರ್ಥದಿಂದಾಗಿ ಅನೇಕ ಜಲಮೂಲಗಳು ಕಣ್ಮರೆಯಾಗುತ್ತಿದ್ದು, ಅಪಾಯದ ಅಂಚಿನಲ್ಲಿವೆ. ಅರಣ್ಯ ನಾಶ, ಹವಾಮಾನ ಬದಲಾವಣೆ, ಅಸಮರ್ಪಕ ನೀರಿನ ಬಳಕೆಯಿಂದ ನೀರಿನ ಮೂಲಗಳು ಕ್ಷೀಣಿಸುತ್ತಿವೆ ಎಂದು ವಿಷಾದಿಸಿದರು. ತಾಲೂಕಿನ ಮಧುವನಹಳ್ಳಿಯಲ್ಲಿ ಆಯೋಜಿಸಲಾಗಿದ್ದ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದಲ್ಲಿ ಡಿ. ವೆಂಕಟಾಚಲ ಮಾತನಾಡಿದರು.

# ಜಿಲ್ಲಾ ಕ್ರೀಡಾ ಕೂಟ: ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾಧನೆ

ಚಾಮರಾಜನಗರ, ಮಾ.24-ಇತ್ತೀಚೆಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆವರಣದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ತಾಲೂಕಿನ ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿಗಳು ಗೆಲುವು ಸಾಧಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಶಾಟ್‌ಪುಟ್ ಸ್ಪರ್ಧೆಯಲ್ಲಿ ಸಿಂಧೂ, ಪ್ರಥಮ ಸ್ಥಾನ ಹಾಗೂ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಪಾರಿತೋಷಕ ಮತ್ತು ಬಹುಮಾನವನ್ನು ಪಡೆದುಕೊಂಡಿರುತ್ತಾರೆ. ವಿಜೇತ ವಿದ್ಯಾರ್ಥಿಗಳನ್ನು ಪ್ರಾಂಶುಪಾಲ ಡಾ.ಪಿ. ದೇವರಾಜುರವರು ಅಭಿನಂದಿಸಿದರು.

ನೆನ್ನೆ ನಡೆದ ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಪ್ರೋತ್ಸಾಹಿಸಲು ಪಟ್ಟಣದ ಗಾಳಿಪುರ ನಗರಸಭಾ ಮಾಜಿ ಸದಸ್ಯ ಮಹೇಶ್ ಬಾಲು, ಮೂರ್ತಿ, ಮಹೇಶ್ ನವೀನ್, ಶಿವು ಮತ್ತು ಮಹೇಶ್ ಮತ್ತಿತರರು ವಿದ್ಯಾರ್ಥಿಗಳಿಗೆ ಕ್ರೀಡೋಪಕರಣಗಳನ್ನು ಉಚಿತವಾಗಿ ನೀಡಿರುತ್ತಾರೆ. ಇವರಿಗೆ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪರವಾಗಿ ಅಭಿನಂದನೆ ಸಲ್ಲಿಸಲಾಯಿತು.

ದೈಹಿಕ ಶಿಕ್ಷಣ ನಿರ್ದೇಶಕ ಮನೋಜ್ ಕುಮಾರ್.ಎಂ, ಅಧ್ಯಾಪಕರಾದ ನಂಜುಂಡಯ್ಯ, ಡಾ.ರಮೇಶಬಾಬು, ಗಿರೀಶ್, ರಂಗಸ್ವಾಮಿ ಧರ್ಮೇಂದ್ರ, ಡಾ.ವಿಶ್ವನಾಥ, ಯಶೋಧದೇವಿ ಇದ್ದರು.

# ನವೋದಯ ವಸತಿ ಶಾಲೆಗೆ ಇಬ್ಬರ ಆಯ್ಕೆ


ಯೋಜಿತ್


ಸುಜನ್

**ಬೇಗೂರು:** ಗ್ರಾಮದ ಆಕ್ಸ್‌ಫರ್ಡ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ನವೋದಯ ವಸತಿ ಶಾಲೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾಗಿದ್ದಾರೆ. ಶಾಲೆಯ 6ನೇ ತರಗತಿಯ ವಿದ್ಯಾರ್ಥಿಗಳಾದ ಯೋಜಿತ್ ಮತ್ತು ಸುಜನ್ ಇಬ್ಬರು ವಿದ್ಯಾರ್ಥಿಗಳು.

ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ದುರಂತ ಸಾವಿಗೀಡಾದ 11 ಅಭಿಮಾನಿಗಳಿಗೆ ಸ್ಥಾನ ಮೀಸಲು

**● ಆರ್‌ಸಿಬಿ ಉಪಾಧ್ಯಕ್ಷ ರಾಜೇಶ್ ಮೆನನ್ ಮಾಹಿತಿ ● ಪಂದ್ಯಾವಳಿ ವೇಳೆ ಭದ್ರತೆಗೆ ವಿಶೇಷ ವ್ಯವಸ್ಥೆ**

ಮೈಸೂರು, ಮಾ.24(ವಿವಿಹೆಚ್)– 19ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)–2026, ಇದೇ ಮಾ.28ರ ಶನಿವಾರದಂದು ಆರಂಭವಾಗುವ ಹಿನ್ನಲೆಯಲ್ಲಿ ಆರ್‌ಸಿಬಿ (ರಾಯಲ್ ಚಾಲೆಂಜರ್ಸ್ ಬೆಂಗಳೂರು) ಆಡಳಿತ ಮಂಡಳಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಹತ್ವದ ಮಾಹಿತಿ ನೀಡಿದೆ.



ರಾಜೇಶ್ ಮೆನನ್

ಆರ್‌ಸಿಬಿ ಉಪಾಧ್ಯಕ್ಷ ರಾಜೇಶ್ ಮೆನನ್ ಮಾತನಾಡಿ, ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತ ದುರಂತದ ಬಳಿಕ ಈ ಬಾರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೆಚ್ಚಿನ ಭದ್ರತೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಗ್ರೌಂಡ್ ಒಳಗೆ ಮತ್ತು ಹೊರಗೆ ಸಿಸಿಟಿವಿ ಕ್ಯಾಮರಾಗಳ ಜೊತೆಗೆ ಎಐ ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಜನಸಂದಣಿ ಹೆಚ್ಚಾದ ಸ್ಥಳಗಳನ್ನು ಗುರುತಿಸಿ ತಕ್ಷಣ ಎಚ್ಚರಿಕೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಮೂರು ಕಮಾಂಡ್ ಸೆಂಟರ್‌ಗಳನ್ನು ಸ್ಥಾಪಿಸಲಾಗಿದ್ದು, ಎರಡು ಕ್ರೀಡಾಂಗಣದಲ್ಲಿ ಮತ್ತು ಒಂದು ಕಮಿಷನರ್ ಕಚೇರಿಯಲ್ಲಿ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಸೇರಿದಂತೆ ಎಲ್ಲಾ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಿದರು. ಸರ್ಕಾರ ನೀಡಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಾಗಿ ತಿಳಿಸಿದರು.

**ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಗೌರವ:** ಕಳೆದ ವರ್ಷದ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ಪ್ರಕರಣದಲ್ಲಿ ಮೃತಪಟ್ಟ 11 ಅಭಿಮಾನಿಗಳ ಸ್ಮರಣಾರ್ಥ, ಆಟಗಾರರು 11 ನಂಬರ್ ಜರ್ಸಿಯಲ್ಲಿ ಅಭ್ಯಾಸ ನಡೆಸಲಿದ್ದಾರೆ. ಜೊತೆಗೆ ಕ್ರೀಡಾಂಗಣದಲ್ಲಿ 11 ಸೀಟ್‌ಗಳನ್ನು ಖಾಲಿ ಬಿಡುವ ಮೂಲಕ ಗೌರವ ಸಲ್ಲಿಸಲಾಗುತ್ತದೆ ಎಂದು ತಂಡದ ಮ್ಯಾನೇಜ್‌ಮೆಂಟ್ ತಿಳಿಸಿದೆ.

**ಯಶ್ ದಯಾಳ್‌ಗಿಲ್ಲ ಸ್ಥಾನ:** ಈ ಬಾರಿ ಯಶ್ ದಯಾಳ್ ಪ್ಲೇಯಿಂಗ್ ಸ್ಕ್ವಾಡ್‌ನಲ್ಲಿ ಇರುವುದಿಲ್ಲ ಎಂದು ಮೋಬೋಬಾಟ್ ಸ್ಪಷ್ಟಪಡಿಸಿದರು. ಆದರೆ, ದಯಾಳ್ ತಂಡದ ಜೊತೆ ಮುಂದುವರೆಯಲಿದ್ದಾರೆ. ಜೋಶ್ ಹೇಜಲ್‌ವುಡ್ ಶೀಘ್ರದಲ್ಲೇ ತಂಡ ಸೇರಿಕೊಳ್ಳಲಿದ್ದಾರೆ ಎಂದೂ ಮಾಹಿತಿ ನೀಡಿದರು.

**ಇಂದು ಸಂಜೆಯಿಂದ ಟಿಕೆಟ್ ಬುಕ್ಕಿಂಗ್ ಆರಂಭ:** ಮಂಗಳವಾರ ಸಂಜೆ 4 ಗಂಟೆಯಿಂದ ಟಿಕೆಟ್ ಮಾರಾಟ ಆರಂಭವಾಗಲಿದೆ. ಮೆಟ್ರೋ ಟಿಕೆಟ್ ಲಿಂಕ್ ಮಾಡುವ ವ್ಯವಸ್ಥೆ ಜಾರಿಗೆ ತರುವ ಹಿನ್ನೆಲೆಯಲ್ಲಿ ಟಿಕೆಟ್ ಮಾರಾಟ ಸ್ವಲ್ಪ ತಡವಾಗಿದೆ. ಟಿಕೆಟ್ ಜೊತೆ ಪಾರ್ಕಿಂಗ್ ಬುಕ್ಕಿಂಗ್ ಮಾಡುವ ವ್ಯವಸ್ಥೆಯೂ ಇದೆ. ಪಂದ್ಯ ಆರಂಭಕ್ಕೆ ನಾಲ್ಕು ಗಂಟೆಗಳ ಮುಂಚೆಯೇ ಪ್ರೇಕ್ಷಕರಿಗೆ ಪ್ರವೇಶ ನೀಡಲಾಗುತ್ತದೆ. ಕ್ರೀಡಾಂಗಣದ ಸುತ್ತಮುತ್ತ ಕಾರುಗಳಿಗೆ ಎಂಟ್ರಿ ಇರುವುದಿಲ್ಲ. ಮೋಸದ ವೆಬ್‌ಸೈಟ್‌ಗಳ ಮೂಲಕ ಟಿಕೆಟ್ ಖರೀದಿಸಬಾರದು ಎಂದು ಆರ್‌ಸಿಬಿ ಮನವಿ ಮಾಡಿದೆ. ಆರ್ ಸಿಬಿ ಅಧಿಕೃತ ವೆಬ್ ಸೈಟ್ ಮೂಲಕವೇ ಟಿಕೆಟ್ ಖರೀದಿಸಲು ಸೂಚಿಸಿದೆ.


ಇನ್ನೂ ಈ ಸೀಸನ್‌ನಲ್ಲಿ ರಾಯಪುರದಲ್ಲೂ ಆರ್‌ಸಿಬಿ ಪಂದ್ಯಗಳು ನಡೆಯಲಿವೆ. ಅಲ್ಲಿನ ರಾಜ್ಯ ಸರ್ಕಾರ ಜಿಎಸ್‌ಟಿ ಸಡಿಲಿಕೆ ನೀಡಿರುವುದಾಗಿ ಮಾಹಿತಿ ನೀಡಿದೆ ಎಂದು ಆರ್ ಸಿಬಿ ತಿಳಿಸಿದೆ.

# ನಮ್ಮ ಸಂಸ್ಕೃತಿ, ಕಲೆ, ಸಾಹಿತ್ಯ ಜಾತಿ ಧರ್ಮದ ಹೆಸರಲ್ಲಿ ಹಾಳಾಗಬಾರದು

**ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಅಭಿಮತ**



ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು.



ಮಹಾ ಶರಣ ಮಾದಪ್ಪ ನಾಟಕದ ದೃಶ್ಯ

ಮೈಸೂರು, ಮಾ.24(ವಿವಿಹೆಚ್)– ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ದೇಶದ ಅತಿದೊಡ್ಡ ಸಂಪತ್ತು. ಅದನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಎರಕ ಹೊಯ್ಯುವ ಕೆಲಸ ಇಂದಿನ ದಿನಗಳಲ್ಲಿ ಹೆಚ್ಚಾಗಿ ನಡೆಯಬೇಕಿದೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಅಭಿಪ್ರಾಯಿಸಿದರು.

ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಶನಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮೈಸೂರಿನ ರಂಗಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಡೆದ ಜನಪದ ಮತ್ತು ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಹಾಗೂ ಮಲೆ ಮಹದೇಶ್ವರನ ಕಥೆಗಳ ಆಧಾರಿತ 'ಮಹಾ ಶರಣ ಮಾದಪ್ಪ' ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

> ಮಹಾ ಶರಣ ಮಾದಪ್ಪ ನಾಟಕ ಪ್ರದರ್ಶನಕ್ಕೆ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು. ಕಿರು ರಂಗಮಂದಿರದಲ್ಲಿ ಹೌಸ್‌ಫುಲ್ ಪ್ರದರ್ಶನ ಕಂಡುಬಂದಿತು. ಡಾ.ಮೈಸೂರು ಗುರುರಾಜ್ ಕಥೆಗಳ ಮೂಲ ಸಂಗ್ರಹ ಮಾಡಿದ್ದರೆ, ಬಿ.ಎನ್.ಸಿದ್ದು ಪ್ರಸನ್ನ ರಚನೆ ಮಾಡಿದ್ದಾರೆ. ವಿಶ್ವನಾಥ್ ಚಂಗಚ್ಚಳ್ಳಿ ಸಂಗೀತ ನೀಡಿದ್ದರೆ, ವಸ್ತ್ರ ವಿನ್ಯಾಸ, ನಿರ್ದೇಶನದ ಜವಾಬ್ದಾರಿಯನ್ನು ದಿನೇಶ್ ಚಮ್ಮಾಳಿಗೆ ಹೊತ್ತಿದ್ದರು. ಇದರೊಂದಿಗೆ ಬೆಳಕು ಕೃಷ್ಣಕುಮಾರ್ ನಾರ್ಣಕಜೆ, ವಸ್ತ್ರ ವಿನ್ಯಾಸ ಸಹಾಯಕ ಕವಿತಾ ಮೋಹನ್, ಪ್ರಸಾದನ ಅಶ್ವಥ್ ಕದಂಬ ಅಚ್ಚುಕಟ್ಟಾಗಿ ನಿಭಾಯಿಸಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದರು.

ಇತ್ತೀಚೆಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಾಮರಸ್ಯ, ಸಮಾನತೆ, ಕಲೆ ಮತ್ತು ಸಂಸ್ಕೃತಿಯ ಚಲನೆ ಹೆಚ್ಚಾಗಿದೆ. ಮೂರು ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ಕಲೆ ಮತ್ತು ಸಾಮರಸ್ಯವು ಜಾತಿ, ಮತ, ಪಂಥದ ಹೆಸರಲ್ಲಿ ಧಕ್ಕೆಯಾಗಿತ್ತು. ಇತ್ತೀಚಿಗಿನ ದಿನಗಳಲ್ಲಿ ಅದು ಕಡಿಮೆಯಾಗುತ್ತಿದೆ. ನಮ್ಮ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಜಾತಿ, ಧರ್ಮದ ಹೆಸರಲ್ಲಿ ಹಾಳಾಗಬಾರದು ಎಂದರು.

ಮೈಸೂರು ಭಾಗದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ವಿಶೇಷ ಸ್ಥಾನಮಾನವಿದೆ. ಮೈಸೂರು ಭಾಗದಲ್ಲಿನ ಕಲಾವಿದರು, ಚಳವಳಿಗಾರರು, ಬೇರ್‍ಯಾವ ಜಿಲ್ಲೆಯಲ್ಲಿಯೂ ಕಾಣಲು ಸಾಧ್ಯವಿಲ್ಲ ಎಂದರು.

ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದಕ್ಕೆ ವಿಶೇಷ ಒತ್ತು ನೀಡುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಸಾಹಿತ್ಯಿಕ ಮತ್ತು ಸಂಸ್ಕೃತಿ ವಿಭಾಗ ತೆರೆದಿದ್ದೇವೆ. ಆ ಕ್ಷೇತ್ರಕ್ಕೂ ಹೆಚ್ಚಿನ ಮನ್ನಣೆ ನೀಡುವ ಉದ್ದೇಶ ಅದರದ್ದಾಗಿದೆ ಎಂದು ತಿಳಿಸಿದರು.

ಜನಪದ ಗಾಯಕ ಡಾ.ಮೈಸೂರು ಗುರುರಾಜ್ ಮಾತನಾಡಿ, ಮಂಟೇಸ್ವಾಮಿ ಮತ್ತು ಮಾದಪ್ಪ ಸಮಾನತೆ ಸರದಾರರು. ಮಾದಪ್ಪ, ಮಂಟೇಸ್ವಾಮಿ ಉತ್ತರದಿಂದ ಬಂದು ದಕ್ಷಿಣದಲ್ಲಿ ನೆಲೆಸಿ ಸಮಾನತೆ ಸಾರಿದರು ಎಂದರು.

ಮಹಾ ಶರಣ ಮಾದಪ್ಪ ನಾಟಕದ ಕಥೆ ನಾನು ಬರೆದಿದ್ದಲ್ಲ. ನನ್ನ ಹಿರಿಯರು ಊರೂರು ಸುತ್ತಿ ಹಾಡಿದ ಜಾನಪದವನ್ನು ನನಗೆ ಧಾರೆ ಎರೆದರು. ಅದನ್ನು ಹಾಡುವುದರ ಜತೆಗೆ ಅಕ್ಷರಕ್ಕಿಳಿಸಿದೆ. ಅದರಲ್ಲಿ ಪ್ರೀತಿ, ವಿಶ್ವಾಸ, ಹೊಂದಾಣಿಕೆಯ ಆಶಯವನ್ನು ಹೇಳಲು ಪ್ರಯತ್ನಿಸಿದ್ದೇನೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, ಸಮಾಜ ಸೇವಕ ಅಹಿಂದ ಜವರಪ್ಪ, ದೇವರತ್ನ ಫೌಂಡೇಷನ್ ಅಧ್ಯಕ್ಷ ಶಿವಪ್ರಸಾದ್, ರಾಮಣ್ಣ, ಟ್ರಸ್ಟ್ ಸಂಸ್ಥಾಪಕ ದಿನೇಶ್ ಚಮ್ಮಾಳಿಗೆ ಉಪಸ್ಥಿತರಿದ್ದರು.

## ಯದುವೀರ್ ಹುಟ್ಟುಹಬ್ಬ ಆಚರಣೆ



ಮೈಸೂರು–ಕೊಡಗು ಸಂಸದರು ಹಾಗೂ ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಹುಟ್ಟುಹಬ್ಬದ ಅಂಗವಾಗಿ ಹಿನಕಲ್‌ನ ವಾತ್ಸಲ್ಯ ಸೇವಾಶ್ರಮದಲ್ಲಿ ಭೋಜನ ಕೂಟ ಏರ್ಪಡಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀನಿವಾಸ್ ಅಂಕಲ್, ಚಾಮುಂಡೇಶ್ವರಿ ಕ್ಷೇತ್ರದ ಉಪಾಧ್ಯಕ್ಷ ಹಿನಕಲ್ ಗಣೇಶ್, ಹಿನಕಲ್ ಮಹಾಶಕ್ತಿ ಕೇಂದ್ರ ಅಧ್ಯಕ್ಷೆ ಶಾಲಿನಿಕುಮಾರ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಗೌಡ, ಹೂಟಗಳ್ಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕುಮಾರ್, ಪ್ರಧಾನ ಕಾರ್ಯದರ್ಶಿ ಶರತ್, ಶಾಲಿನಿ, ರಾಧಾ ಪಾಲಂದಿರಾ, ರೂಸ್ಟ್ ರಾಜು, ಶಿವಣ್ಣಚಾರಿ, ಇಂದಿರಾ, ವಾಸಂತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ದೇವರ ದಾಸಿಮಯ್ಯ ಮೆರವಣಿಗೆ



ದೇವರ ದಾಸಿಮಯ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ನಡೆದ ಮೆರವಣಿಗೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಚಾಮರಾಜ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್‌ನ ಕೆ.ಟಿ.ಮಂಜು, ಮುಖಂಡರಾದ ಭಾರತಿ ದಿವಾಕರ್ ಮುಂತಾದವರು ಪಾಲ್ಗೊಂಡಿದ್ದರು.

# ಇಂದು ಸೇವ್ ಹಿಂದೂ ಟೆಂಪಲ್ ಸಂಘಟನೆಯಿಂದ ಬೃಹತ್ ಮೌನ ಪ್ರತಿಭಟನೆ

ಮೈಸೂರು, ಮಾ.24– 'ಸೇವ್ ಹಿಂದೂ ಟೆಂಪಲ್ಸ್' ಸಂಘಟನೆ ವತಿಯಿಂದ ಬುಧವಾರ(ಮಾ.25) ಬೆಳಗ್ಗೆ 10ಕ್ಕೆ ಮೈಸೂರಿನ ಹಳೇ ಡಿಸಿ ಕಚೇರಿ ಬಳಿ ಬೃಹತ್ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಸಂಸ್ಥಾಪಕ ಎಂ.ಎಂ.ನಿಖಿಲೇಶ್ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಠ–ಮಂದಿರಗಳು ಮಾತ್ರವಲ್ಲದೆ ಹಿಂದೂ ಧರ್ಮಗುರುಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಚಾಳಿ ವ್ಯಾಪಕವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹಿಂದೂ ದೇವಾಲಯಗಳು ಹಾಗೂ ಧರ್ಮಗುರುಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಈ ನಿಟ್ಟಿನಲ್ಲಿ ಬೃಹತ್ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಯು ಯಾವುದೇ ವ್ಯಕ್ತಿ, ಪಕ್ಷದ ವಿರುದ್ಧವಲ್ಲ. ಸಾಮಾನ್ಯರಂತೆ ಹಿಂದೂ ಧರ್ಮಗುರುಗಳನ್ನು ವಾಚಾಮಗೋಚರವಾಗಿ ನಿಂದಿಸುವ ಚಾಳಿಯನ್ನು ಖಂಡಿಸುವುದರ ಜೊತೆಗೆ ನಮ್ಮ ಗುರುಗಳು ನಮ್ಮ ಹೆಮ್ಮೆ ಎಂಬ ಸಂದೇಶ ಸಾರಲು ಕೈಜೋಡಿಸುವಂತೆ ಮನವಿ ಮಾಡಿದ್ದಾರೆ.

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ




ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಹಾಗೂ ವರುಣ ಗ್ರಾಪಂ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರು, ಮಾ.24(ಎಸ್‌ಪಿಎನ್)– ಮೈಸೂರು ತಾಲೂಕಿನ ವರುಣ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಹಾಗೂ ವರುಣ ಗ್ರಾಪಂ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು.

ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ನಿರ್ದೇಶಕಿ ಸರಸ್ವತಿ ಮಾತನಾಡಿ, ಮಹಿಳೆಯರು, ಮಕ್ಕಳು ಹಾಗೂ ಸಮುದಾಯದ ಅಭಿವೃದ್ಧಿಗಾಗಿ ಕಳೆದ 40 ವರ್ಷಗಳಿಂದ ನಮ್ಮ ಸಂಸ್ಥೆ ಕೆಲಸ ಮಾಡುತ್ತಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಮಮತಾ ಮಾತನಾಡಿ, ಈ ಹಿಂದೆ ಮಹಿಳೆಯರು ಕೇವಲ ಅಡುಗೆ ಮನೆಗಳಿಗೆ ಮಾತ್ರ ಸೀಮಿತವಾಗಿದ್ದರು. ಸ್ವಾತಂತ್ರ್ಯ ನಂತರ ನಮ್ಮ ಸಂವಿಧಾನ ಎಲ್ಲಾ ಮಹಿಳೆಯರಿಗೂ ಸಮಾನವಾಗಿ ಬದುಕು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಗುಂಪುಗಳ ರಚನೆ, ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ರಾಜ್ಯ ಮತ್ತು ಕೇಂದ್ರಗಳು ರೂಪಿಸಿವೆ. ಅಲ್ಲದೆ, ಮಹಿಳೆ ಇಂದು ಎಲ್ಲಾ ರಂಗದಲೂ ಅಧಿಪತ್ಯ ಸ್ಥಾಪಿಸಿರುವುದು ಸಂತೋಷದ ಸಂಗತಿ ಎಂದರು.

ಈ ವೇಳೆ ಬೆಳಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ಚಿನ್ನಮ್ಮ, ಚೋರನಹಳ್ಳಿ ಗ್ರಾಪಂ ಮಾಜಿ ಸದಸ್ಯ ಗುರುಮೂರ್ತಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಮೇಲ್ವಿಚಾರಕಿ ನಾಗರತ್ನ, ಗ್ರಾಮ ಆಡಳಿತಾಧಿಕಾರಿ ಅರ್ಷದ್ ಪಾಷ, ವೈದ್ಯ ಡಾ.ಪ್ರಸಾದ್ ಸೇರಿದಂತೆ 200 ಕ್ಕೂ ಹೆಚ್ಚು ಮಹಿಳೆಯರು ಉಪಸ್ಥಿತರಿದ್ದರು.

# ಉಪ ಚುನಾವಣೆ ಹಿನ್ನೆಲೆ: ನಾಳೆ ರಾಜ್ಯ ಬಜೆಟ್ ಅಧಿವೇಶನ ಮುಕ್ತಾಯ!

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಉಪಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆಯ ಬಜೆಟ್ ಅಧಿವೇಶನವನ್ನು ಒಂದು ದಿನ ಮುಂಚಿತವಾಗಿ ಮಾರ್ಚ್ 26 ರಂದು ಮುಕ್ತಾಯಗೊಳಿಸಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026–27ನೇ ಸಾಲಿನ ಬಜೆಟ್ ಮಂಡಿಸುವುದರೊಂದಿಗೆ ಮಾರ್ಚ್ 6 ರಂದು ಆರಂಭವಾದ ರಾಜ್ಯ ವಿಧಾನಮಂಡಲದ ಬಜೆಟ್ ಅಧಿವೇಶನವು ಮಾರ್ಚ್ 27 ರಂದು ಮುಕ್ತಾಯಗೊಳ್ಳಬೇಕಿತ್ತು.

ವಿಧಾನಸಭೆಯ ಕಲಾಪ ಸಲಹಾ ಸಮಿತಿ ಸಭೆಯ ನಂತರ ಸ್ಪೀಕರ್ ಯು ಟಿ ಖಾದರ್ ಅವರು ಮಂಗಳವಾರ ಸದನದಲ್ಲಿ ಈ ವಿಷಯ ಪ್ರಕಟಿಸಿದರು.

ಕಲಾಪ ಸಮಿತಿ ಸಭೆ ನಿರ್ಧಾರದಂತೆ ಇಂದು (ಮಾರ್ಚ್ 24) ಬಜೆಟ್ ಮತ್ತು ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಗಲಿದೆ. ಈ ಚರ್ಚೆಗಳಿಗೆ ಮಾರ್ಚ್ 26 ರಂದು ಸಿಎಂ ಉತ್ತರ ನೀಡಲಿದ್ದು, ನಂತರ ಧನವಿನಿಯೋಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡು ಅಂಗೀಕರಿಸಲಾಗುವುದು. ಮಾರ್ಚ್ 26 ರಂದು ಕಲಾಪದ ನಂತರ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುವುದು ಎಂದು ಸ್ಪೀಕರ್ ತಿಳಿಸಿದರು.

ಅಧಿವೇಶನವನ್ನು ಒಂದು ದಿನ ಮುಂಚಿತವಾಗಿ ಯಾಕೆ ಮುಕ್ತಾಯಗೊಳಿಸಲಾಗುತ್ತಿದೆ ಎಂದು ಸ್ಪೀಕರ್ ಹೇಳದಿದ್ದರೂ ನಾಯಕರು, ಸಚಿವರು ಮತ್ತು ಶಾಸಕರು ಪ್ರಚಾರದಲ್ಲಿ ಪಾಲ್ಗೊಳ್ಳುವುದರಿಂದ ಮುಂಬರುವ ಉಪಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಉಪ ಚುನಾವಣೆಯಿಂದಾಗಿ ಅಧಿವೇಶನದ ಅವಧಿ ಮೊಟಕುಗೊಳ್ಳಬಹುದು ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸೋಮವಾರ ಹೇಳಿದ್ದರು. ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಾದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣಕ್ಕೆ ಏಪ್ರಿಲ್ 9 ರಂದು ಉಪಚುನಾವಣೆ ನಡೆಯಲಿದೆ.

ಹಿರಿಯ ಕಾಂಗ್ರೆಸ್ ಶಾಸಕರಾದ ಎಚ್ ವೈ ಮೇಟಿ ಮತ್ತು ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ಅನಿವಾರ್ಯವಾಗಿದೆ.

## ಗೌರವ ಸಮರ್ಪಣೆ





ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತದಲ್ಲಿ ಟೀಂ ಮೈಸೂರು ವತಿಯಿಂದ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ ಬಲಿದಾನ ದಿನದ ಹಿನ್ನೆಲೆಯಲ್ಲಿ ಸೋಮವಾರ ಮುಂಬತ್ತಿ ಬೆಳಗಿ, ನಿಮಿಷ ಕಾಲ ಮೌನಾಚರಣೆ ಸಲ್ಲಿಸುವ ಮುಖಾಂತರ ಶ್ರದ್ಧಾಂಜಲಿ ಹಾಗೂ ಗೌರವ ಸಲ್ಲಿಸಲಾಯಿತು. ಗೋಕುಲ್ ಗೋವರ್ಧನ್, ಕಿರಣ್, ಜೈರಾವಜ್‌ಗೌಡ, ರಾವಜ್, ಪ್ರಸಾದ್ ಯತೀಶ್, ಮನೋಹರ್, ಶಿವಪ್ರಸಾದ್, ಸಂತೋಷ್, ರಾಘವೇಂದ್ರ, ಹರೀಶ್ ಗೋಕುಲಂ, ಕೃಷ್ಣ, ರವಿ, ದಾಮೋದರ್, ಸವಿತಾ, ಕುಮಾರಿ, ವೇದಿಕಾ ಭಾಗವಹಿಸಿದ್ದರು.



# ಸ್ವಾಮಿ ವಿವೇಕಾನಂದರ ಚಿಂತನೆ ಯುವಜನರ ಜೀವನಕ್ಕೆ ಪ್ರೇರಣೆ

**ಮುಕ್ತ ವಿವಿ ಸ್ವಾಮಿ ವಿವೇಕಾನಂದ ಪೀಠದ ನಿರ್ದೇಶಕಿ ಡಾ.ಜ್ಯೋತಿಶಂಕರ್ ಅಭಿಮತ**

ಮೈಸೂರು, ಮಾ.24(ಎಸ್‌ಪಿಎನ್)– ಆನಂದ ಎಂದರೆ ಬರೀ ಸಂತೋಷವಲ್ಲ. ಅದು ಹೃದಯದ ಅಂತರಾಳದಿಂದ ಬರುವ ಶಾಂತಿ ಮತ್ತು ತೃಪ್ತಿ. ಹಾಗಾಗಿ ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಇಂದಿನ ಯುವಜನತೆ ಮೈಗೂಡಿಸಿಕೊಂಡರೆ ಜೀವನಕ್ಕೆ ಪ್ರೇರಣೆಯಾಗುತ್ತದೆ ಎಂದು ಮುಕ್ತ ವಿವಿ ಸ್ವಾಮಿ ವಿವೇಕಾನಂದ ಪೀಠದ ನಿರ್ದೇಶಕಿ ಡಾ.ಜ್ಯೋತಿಶಂಕರ್ ಅಭಿಪ್ರಾಯಪಟ್ಟರು.




'ಸ್ವಾಮಿ ವಿವೇಕಾನಂದರ ಪತ್ರಗಳಲ್ಲಿ ಧರ್ಮ, ದರ್ಶನ, ಯುವಜನತೆ ಮತ್ತು ರಾಷ್ಟ್ರೀಯ ಏಕತೆ ಕುರಿತು ಏರ್ಪಡಿಸಿದ್ದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪದಲ್ಲಿ ಮುಕ್ತ ವಿವಿ ಸ್ವಾಮಿ ವಿವೇಕಾನಂದ ಪೀಠದ ನಿರ್ದೇಶಕಿ ಡಾ.ಜ್ಯೋತಿಶಂಕರ್ ಮಾತನಾಡುತ್ತಿರುವುದು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ(ಇಎಂಆರ್‌ಸಿ) ಸಭಾಂಗಣದಲ್ಲಿ ತತ್ವಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಸ್ವಾಮಿ ವಿವೇಕಾನಂದ ಪೀಠದ ಸಹಯೋಗದೊಂದಿಗೆ 'ಸ್ವಾಮಿ ವಿವೇಕಾನಂದರ ಪತ್ರಗಳಲ್ಲಿ ಧರ್ಮ, ದರ್ಶನ, ಯುವಜನತೆ ಮತ್ತು ರಾಷ್ಟ್ರೀಯ ಏಕತೆ' ಕುರಿತು ಏರ್ಪಡಿಸಿದ್ದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪದಲ್ಲಿ ಅವರು ಮಾತನಾಡಿದರು.

ಯುವಜನತೆಗೆ ಸ್ವಾಮಿ ವಿವೇಕಾನಂದರ ಚಿಂತನೆಗಳು ಮತ್ತು ಅವರಿಗೆ ಬರೆದಿರುವ ಪತ್ರಗಳಲ್ಲಿನ ಸಂದೇಶಗಳು ಯುವಜನರಿಗೆ ಸರಿದಾರಿಯನ್ನು ತೋರಿಸುತ್ತವೆ. ಅಲ್ಲದೆ, ನಮ್ಮಲ್ಲಿರುವ ಅಹಂಕಾರವನ್ನು ಬಿಟ್ಟು ಸಮಾಜದ ಹಿತಕ್ಕಾಗಿ ಕೆಲಸ ಮಾಡಬೇಕು. ಯುವಕರು ಸಮಯವನ್ನು ವ್ಯರ್ಥ ಮಾಡದೇ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದ ಅವರು, ಜನರು ಸಂತೋಷವಾಗಿದ್ದರೆ, ದೇಶದ ಅಭಿವೃದ್ಧಿಯತ್ತ ಸಾಗುತ್ತದೆ ಎಂದು ಕೆಲ ಘಟನಾವಳಿಗಳನ್ನು ಉಲ್ಲೇಖಿಸಿದರು.

ವಿವೇಕಾನಂದರ ವಾಣಿಗಳಲ್ಲಿ ಯುವಜನರಲ್ಲಿ ಸೇವಾ ಮನೋಭಾವ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರಪ್ರೇಮವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವರ ಪತ್ರಗಳು ಮತ್ತು ಚಿಂತನೆಗಳನ್ನು ಮನೆಮನೆಗೂ ತಲುಪಿಸುವ ಮೂಲಕ ಹೊಸ ತಲೆಮಾರಿನಲ್ಲಿ ಸಕಾರಾತ್ಮಕ ಮನೋಭಾವ ಬೆಳೆಸಲು ಪ್ರಯತ್ನಿಸಬೇಕು ಎಂದರು.

ಸ್ವಾಮಿ ವಿವೇಕಾನಂದರ ಕರೆಗಳು ಕೇವಲ ಘೋಷಣೆಯಲ್ಲ. ಅದು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡ ಕಾರ್ಯತಂತ್ರದ ಭಾಗವಾಗಿದೆ. ಹಾಗಾಗಿ ಜನ ಸಾಮಾನ್ಯರು ಮತ್ತು ಬಡವರು ಸಂತೋಷದ ಬದುಕು ರೂಪಿಸಿಕೊಂಡರೆ ಅದು ದೇಶದ ಅಭಿವೃದ್ಧಿಗೆ ಪೂರಕವಾಗಿರುತ್ತದೆ ಎಂದರು.

ಈ ವೇಳೆ ಸ್ವಾಮಿ ವಿವೇಕಾನಂದ ಪೀಠದ ವಿಶ್ರಾಂತ ಸಂದರ್ಶಕ ಪ್ರಾಧ್ಯಾಪಕ ಪ್ರೊ.ವಿ.ಎನ್. ಶೇಷಗಿರಿ ರಾವ್, ತತ್ವಶಾಸ್ತ್ರ ಅಧ್ಯಯನ ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಡಾ.ಎಸ್. ವೆಂಕಟೇಶ್, ಪ್ರಾಧ್ಯಾಪಕ ಡಾ.ಎಂ.ಡೇನಿಯಲ್ ಮತ್ತಿತರರು ಉಪಸ್ಥಿತರಿದ್ದರು.

# ಕೆ.ಆರ್.ನಗರ ಪುರಸಭೆಗೆ 3.97 ಲಕ್ಷ ಉಳಿತಾಯ ಬಜೆಟ್

ಕೆ.ಆರ್.ನಗರ, ಮಾ.24– ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮಂಗಳವಾರ ಪುರಸಭಾ ಆಡಳಿತಾಧಿಕಾರಿ ಹಾಗೂ ಹುಣಸೂರು ಉಪವಿಭಾಗಾಧಿಕಾರಿ ಕೆ.ವಿ.ಕಾವ್ಯರಾಣಿ ಅವರು 2026–27ನೇ ಸಾಲಿಗೆ 3.97 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.



ಕೆ.ಆರ್.ನಗರ ಪುರಸಭೆ ಸಭಾಂಗಣದಲ್ಲಿ ಆಡಳಿತಾಧಿಕಾರಿ, ಹುಣಸೂರು ಉಪವಿಭಾಗಾಧಿಕಾರಿ ಕೆ.ವಿ.ಕಾವ್ಯರಾಣಿ ಬಜೆಟ್ ಮಂಡಿಸಿದರು.

**ಆದಾಯ ನಿರೀಕ್ಷೆ:** ಪುರಸಭೆ ಸ್ವಂತ ಆಸ್ತಿ ತೆರಿಗೆಯಿಂದ 4.20 ಕೋಟಿ, ನೀರಿನ ತೆರಿಗೆ 90 ಲಕ್ಷ ರೂ., ಪುರಸಭೆ ಮಳಿಗೆ ಮತ್ತು ಐಡಿಎಸ್‌ಎಂಟಿ ಮಳಿಗೆ 18.75 ಲಕ್ಷ ರೂ, ಉದ್ದಿಮೆ ಪರವಾನಗಿ 22 ಲಕ್ಷ ರೂ., ಇತರೆ ಮೂಲಗಳಿಂದ 1.10 ಕೋಟಿ ರೂ., ಸರ್ಕಾರದಿಂದ ಬರಬಹುದಾದ 15ನೇ ಹಣಕಾಸು ಅನುದಾನ 2 ಕೋಟಿ, ಎಸ್‌ಎಫ್‌ಸಿ ಅನುದಾನ 28 ಲಕ್ಷ ರೂ., ಎಸ್‌ಎಫ್‌ಸಿ ವಿದ್ಯುತ್ ಶಕ್ತಿ ಅನುದಾನ 2.55 ಕೋಟಿ ರೂ., ಎಸ್‌ಎಫ್‌ಸಿ ವೇತನ ಅನುದಾನ 2.92 ಕೋಟಿ ರೂ., ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 7 ಲಕ್ಷ ರೂ.ಗಳ ಆದಾಯ ನಿರೀಕ್ಷೆ ಮಾಡಲಾಗಿದೆ ಎಂದರು.

**ಖರ್ಚುಗಳು:** ಪುರಸಭೆ ಕಚೇರಿ ನಿರ್ವಹಣೆ ವೆಚ್ಚ 30 ಲಕ್ಷ ರೂ., ಕಟ್ಟಡಗಳು, ರಸ್ತೆಗಳು, ಚರಂಡಿಗಳು, ಕಲ್ವರ್ಟ್‌ಗಳು, ಮ್ಯಾನ್ ಹೋಲ್‌ಗಳ ದುರಸ್ಥಿ ಹಾಗೂ ನಿರ್ವಹಣೆಗೆ 35 ಲಕ್ಷ ರೂ., ಬೀದಿದೀಪ ನಿರ್ವಹಣೆಗೆ 30 ಲಕ್ಷ ರೂ., ವಾಹನಗಳ ಇಂಧನ ಹಾಗೂ ದುರಸ್ಥಿ ಮತ್ತು ನಿರ್ವಹಣೆ 28 ಲಕ್ಷ ರೂ., ಹೊರ ಗುತ್ತಿಗೆ ನೌಕರರ ವೇತನ 1 ಕೋಟಿ ರೂ., ಪತ್ರಕರ್ತರ ಆರೋಗ್ಯ ನಿಧಿಗೆ 2 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ ಎಂದರು.

ಕಚೇರಿ ಯಂತ್ರೋಪಕರಣ ಹಾಗೂ ಕಂಪ್ಯೂಟರ್‌ಗಳಿಗೆ 5 ಲಕ್ಷ ರೂ., ರಸ್ತೆಗಳ ನಿರ್ಮಾಣಕ್ಕೆ 50 ಲಕ್ಷ ರೂ., ಚರಂಡಿಗಳ, ಮಳೆ ನೀರು ಚರಂಡಿ ನಿರ್ಮಾಣಕ್ಕೆ 40ಲಕ್ಷ ರೂ., ಸ್ಮಶಾನ ಅಭಿವೃದ್ಧಿಗೆ 25 ಲಕ್ಷ ರೂ., ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ಅಭಿವೃದ್ಧಿಗೆ 60 ಲಕ್ಷ ರೂ., ನೀರು ಸರಬರಾಜು ವಿಭಾಗಕ್ಕೆ 40 ಲಕ್ಷ ರೂ., ಯುಜಿಡಿ ಸಂಪರ್ಕ ಕಲ್ಪಿಸಲು 30 ಲಕ್ಷ ರೂ., ಕಟ್ಟಡ ನಿರ್ಮಾಣಕ್ಕೆ 40 ಲಕ್ಷ ರೂ., ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ನಿರ್ವಹಣೆಗೆ 18 ಲಕ್ಷ ರೂ., ನೀರು ಸರಬರಾಜು ವಿಭಾಗದ ದುರಸ್ಥಿ ಹಾಗೂ ನಿರ್ವಹಣೆಗೆ 30 ಲಕ್ಷ ರೂ., ನೀರು ಸರಬರಾಜು ವಿಭಾಗಕ್ಕೆ ಬ್ಲೀಚಿಂಗ್ ಪೌಡರ್ ಹಾಗೂ ಅಲಮ್ ಸರಬರಾಜು ಮಾಡಲು 5 ಲಕ್ಷ ರೂ., ಪೈಪ್‌ಗಳ ಸರಬರಾಜು 10 ಲಕ್ಷ ರೂ., ಹೊರಗುತ್ತಿಗೆ ನೌಕರರ ವೇತನ ಪಾವತಿಗೆ 40 ಲಕ್ಷ ರೂ., ಯುಜಿಡಿ ನಿರ್ವಹಣೆಗೆ 10 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಜೆಟ್ ಸಭೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ಜಿ.ಎಸ್. ರಮೇಶ್, ಆರೋಗ್ಯ ನಿರೀಕ್ಷಕರಾದ ಎಸ್.ಪಿ.ರಾಜೇಂದ್ರ ಲೋಕೇಶ್, ಪರಿಸರ ಅಭಿಯಂತರ ಮಧುಸೂದನ್, ಲೆಕ್ಕಾಧಿಕಾರಿ ಸ್ವಪ್ನ, ಸಿಬ್ಬಂದಿ ಗಣೇಶ್, ಮಹದೇವನಾಯಕ, ಕೆ.ಮಹದೇವ ಸೇರಿದಂತೆ ಇನ್ನಿತರರಿದ್ದರು.

### ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

# ಹೆಚ್.ಸಿ.ರಾಜೇಶ್ ಅಧ್ಯಕ್ಷ, ಮಾದೇಗೌಡ ಉಪಾಧ್ಯಕ್ಷ

ತಿ.ನರಸೀಪುರ, ಮಾ.24– ತಾಲೂಕಿನ ಮಾದೇಗೌಡನ ಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಪಿಎಂಸಿ ಮಾಜಿ ಅಧ್ಯಕ್ಷ ಎನ್. ಅನಿಲ್ ಕುಮಾರ್ ಬಣದ ಹುನುಗನಹಳ್ಳಿ ವಕೀಲ ಹೆಚ್.ಸಿ.ರಾಜೇಶ್, ಉಪಾಧ್ಯಕ್ಷರಾಗಿ ಪಟ್ಟೇಹುಂಡಿ ಮಾದೇಗೌಡ ಅವಿರೋಧವಾಗಿ ಆಯ್ಕೆಯಾದರು.



ಅಧ್ಯಕ್ಷರಾಗಿ ಹೆಚ್.ಸಿ.ರಾಜೇಶ್, ಉಪಾಧ್ಯಕ್ಷರಾಗಿ ಮಾದೇಗೌಡ ಆಯ್ಕೆಯಾದರು.

ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಹೆಚ್.ಸಿ.ರಾಜೇಶ್ ಹಾಗೂ ಹಿಂದುಳಿದ 'ಎ' ವರ್ಗಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಮಾದೇಗೌಡರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬಿ.ರಾಜು ಪ್ರಕಟಿಸಿದರು.

ನಿರ್ದೇಶಕರಾದ ಎನ್.ಅನಿಲ್ ಕುಮಾರ್, ಡಿ.ನಾಗರಾಜು, ಮಹದೇವಸ್ವಾಮಿ, ರಾಮೇಗೌಡ, ತಾಯಮ್ಮ, ಸುಶೀಲ, ನೀಲಿ ಸಿದ್ದಯ್ಯ, ಬಿ.ಪುಟ್ಟಸ್ವಾಮಿ, ಸಿ.ಶಿವಣ್ಣ ಚುನಾವಣಾ ಸಭೆಯಲ್ಲಿ ಹಾಜರಿದ್ದು, ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ನೂತನ ವರಿಷ್ಠರ ಅವಿರೋಧ ಆಯ್ಕೆಯಾಗುತ್ತಿದ್ದಂತೆ ಸಂಘದ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಮಾ.9ರಂದು ಆಡಳಿತ ಮಂಡಳಿಯ ಒಂದು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್ ಬಣದಿಂದ ಸ್ಪರ್ಧಿಸಿದ್ದ ಸಿ.ಎನ್. ಶಿವಣ್ಣ ಗೆಲುವು ಸಾಧಿಸಿದ್ದರು. ಪ್ರತಿಸ್ಪರ್ಧಿ ಮಾಜಿ ಅಧ್ಯಕ್ಷ ಅಂಬರೀಶ ಅವರಿಗೆ ಸೋಲಾಗಿತ್ತು. ಉಳಿದ 10 ಮಂದಿ ಸದಸ್ಯರು ಮಾ.15 ರಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದರು.

> ನೂತನ ಅಧ್ಯಕ್ಷರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಜೊತೆಗೆ ಈ ಭಾಗದ ರೈತರಿಗೆ ಹೆಚ್ಚಿನ ಸಾಲ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ತಾಲೂಕಿನಲ್ಲಿಯೇ ಸಂಘವನ್ನು ಮಾದರಿ ಮಾಡಲು ಶ್ರಮಿಸಬೇಕು. ಸಿಎಂ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ ಅವರು ನಮ್ಮ ಕ್ಷೇತ್ರದವರಾಗಿರುವುದರಿಂದ ಹೆಚ್ಚಿನ ಅನುದಾನ ತರಲು ಪ್ರಯತ್ನಿಸುವ ಜೊತೆಗೆ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು. ನೂತನ ನಿರ್ದೇಶಕರು ಸಹ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸಹಕಾರ ನೀಡುವ ಮೂಲಕ ಸಂಘದ ಏಳಿಗೆಗೆ ಶ್ರಮಿಸಬೇಕು.
> – ಎನ್.ಅನಿಲ್ ಕುಮಾರ್, ಪಿಎಸಿಎಸ್ ನಿರ್ದೇಶಕ.

ನೂತನ ಅಧ್ಯಕ್ಷ ಹೆಚ್.ಸಿ.ರಾಜೇಶ್ ಮಾತನಾಡಿ, ಸಹಕಾರ ಸಂಘದ ಹಿರಿಯರು ಹಾಗೂ ನಿರ್ದೇಶಕರ ಸಹಕಾರದೊಂದಿಗೆ ಸಹಕಾರ ಸಂಘವನ್ನು ಉತ್ತಮ ರೀತಿ ನಿರ್ವಹಣೆ ಮಾಡಲು ಶ್ರಮಿಸುತ್ತೇನೆ. ಅಲ್ಲದೇ ಸಂಘದಿಂದ ದೊರೆಯಬಹುದಾದ ಸವಲತ್ತುಗಳನ್ನು ರೈತರಿಗೆ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಸಹಕಾರ ಸಂಘದ ಕಾರ್ಯದರ್ಶಿ ರಾಜೇಶ್, ಮಾದೇಗೌಡನಹುಂಡಿ ಕಿರಣ್, ಮಲ್ಲೇಗೌಡ, ಚುಂಚೇಗೌಡ, ಹೊಂಬೇಗೌಡ, ಪ್ರೇಮ್ ಕುಮಾರ್, ಮೋಹನ್, ಹೊನ್ನೇಗೌಡ, ಹುನಗನಹಳ್ಳಿ ನಾರಾಯಣ, ಎಚ್.ಎಸ್. ರಾಜೇಶ್, ಕುಮಾರ, ಶಿವಣ್ಣ, ನಾಗರಾಜ್, ಎಂ.ನಾಗೇಂದ್ರ, ರಾಮಕೃಷ್ಣ, ಹೆಚ್.ಸಿ.ಚಂದ್ರ, ನಾಗೇಂದ್ರ, ರಾಮಕೃಷ್ಣ, ರಂಗಸಮುದ್ರ ಮಂಜು, ಪಟ್ಟೇಹುಂಡಿ ಗೋಪಾಲ್ ಸೇರಿದಂತೆ ಮತ್ತಿತರರಿದ್ದರು.

# ಪಾಳುಬಿದ್ದ ದೇವಸ್ಥಾನಗಳ ಜೀರ್ಣೋದ್ಧಾರ ಉತ್ತಮ ಬೆಳವಣಿಗೆ

### ವಾಟಾಳು ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಶ್ಲಾಘನೆ

ತಿ.ನರಸೀಪುರ, ಮಾ.24– ತಾಲೂಕಿನಲ್ಲಿ ಪಾಳುಬಿದ್ದ ದೇವಸ್ಥಾನಗಳನ್ನು ಗ್ರಾಮಸ್ಥರು ಜೀರ್ಣೋದ್ಧಾರ ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ಅನ್ನಸಂತರ್ಪಣೆಗೆ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು.

ತಾಲೂಕಿನ ಯರಗನಹಳ್ಳಿಯಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಮೊದಲ ವಾರ್ಷಿಕೋತ್ಸವದಲ್ಲಿ ಭಕ್ತರ ಅನ್ನಸಂತರ್ಪಣೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯರಗನಹಳ್ಳಿ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಪ್ರಾಚೀನ ದೇವಸ್ಥಾನವಾಗಿದೆ. ಕಪ್ಪಡಿ ಕ್ಷೇತ್ರಕ್ಕೆ ಹೋಗಿ ಬಂದವರು ಹಾಗೂ ಕಾಲ್ನಡಿಗೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಹೋಗುವವರು ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಈ ದೇವಸ್ಥಾನವನ್ನು ವರ್ಷದ ಹಿಂದೆ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿದ್ದಾರೆ ಎಂದರು.

ದೇವಸ್ಥಾನಕ್ಕೆ ಸೇರಿದ 4 ಎಕರೆ ಜಮೀನಿದ್ದು, ಅದನ್ನು ಅರಣ್ಯ ಇಲಾಖೆ ಸುಪರ್ದಿಗೆ ವಹಿಸಿ ಗಿಡ ಬೆಳೆಸಿ ಅದರಿಂದ ಬರುವ ಆದಾಯವನ್ನು ದೇವಸ್ಥಾನಕ್ಕೆ ಬಳಸಿಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ ಆ ಕಾರ್ಯ ಇನ್ನೂ ಕಾರ್ಯ ರೂಪಕ್ಕೆ ಬಂದಿಲ್ಲ. ಆದಾಗ್ಯೂ ಗ್ರಾಮಸ್ಥರು ಬಂಡೆಕಲ್ಲಿನಂತಿದ್ದ ಜಾಗಕ್ಕೆ ಉತ್ತಮ ರೂಪ ನೀಡಿ ದೇವಸ್ಥಾನ ನಿರ್ಮಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ತಾಲೂಕಿನ ಸುತ್ತಮುತ್ತ ಹಾಳು ಬಿದ್ದ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯ ಮಾಡುತ್ತಿರುವುದು ಸಂತಸ ತಂದಿದೆ ಎಂದರು.

ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಭಾನುವಾರದಿಂದಲೇ ವಿಶೇಷ ಪೂಜಾ ಕೈಂಕರ್ಯ ನಡೆಸಲಾಯಿತು. ಮಲೆ ಮಹದೇಶ್ವರ ಸ್ವಾಮಿಗೆ ಮಾಡಿದ್ದ ಹೂವಿನ ಅಲಂಕಾರ ಆಕರ್ಷಣೀಯವಾಗಿತ್ತು. ಭಜನೆ, ಊಟದ ವ್ಯವಸ್ಥೆ ಮಾಡಲಾಗಿತ್ತು.

ಹೊಸೂರುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ಅಧ್ಯಕ್ಷ ರಾಜಶೇಖರ ಸ್ವಾಮೀಜಿ, ವಾಟಾಳು ಕಿರಿಯ ಶ್ರೀಗಳಾದ ಶಿವಕುಮಾರಸ್ವಾಮಿ ಸೇರಿದಂತೆ ಯರಗನಹಳ್ಳಿ ಗೌಡರು, ಮುಖಂಡರು ಮತ್ತು ಅಕ್ಕಪಕ್ಕದ ಗ್ರಾಮಸ್ಥರು ಹಾಜರಿದ್ದರು.

# ಶ್ರೀ ಮಂತ್ರಾಲಯ ಪರಿಮಳ ಪ್ರಶಸ್ತಿ ಪುರಸ್ಕೃತ ರೈತ ರವಿಗೆ ಸನ್ಮಾನ

ಕೆ.ಆರ್.ನಗರ, ಮಾ.24– ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಮಠವು ನೀಡುವ ಪ್ರತಿಷ್ಠಿತ ಶ್ರೀಮಂತ್ರಾಲಯ ಪರಿಮಳ ಪ್ರಶಸ್ತಿಗೆ ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದ ಪ್ರಗತಿಪರ ರೈತ, ಉದ್ಯಮಿ ಹೆಚ್.ಎನ್.ರವಿ ಭಾಜನರಾಗಿರುವುದು ಸಂತಸ ತಂದಿದೆ ಎಂದು ಜಿಪಂ ಮಾಜಿ ಸದಸ್ಯ ಹಾಗೂ ಉದ್ಯಮಿ ಸಾ.ರಾ.ನಂದೀಶ್ ತಿಳಿಸಿದರು.



ಹೆಚ್.ಎನ್.ರವಿ ಅವರನ್ನು ಉದ್ಯಮಿ ಸಾ.ರಾ.ನಂದೀಶ್ ಸನ್ಮಾನಿಸಿದರು.

ಹರದನಹಳ್ಳಿ ಹೆಚ್.ಎನ್.ರವಿ ಅವರ ಮೈಸೂರಿನ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿ ಮಾತನಾಡಿದ ಉದ್ಯಮಿ ಸಾ.ರಾ. ನಂದೀಶ್, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಹೆಚ್.ಎನ್.ರವಿ ಅವರ ಸೇವೆಯನ್ನು ಮಂತ್ರಾಲಯ ಮಠ ಗುರುತಿಸಿರುವುದು ಶ್ಲಾಘನೀಯ ಎಂದರು.

ನಾವು ಮಾಡುವ ಸಂಪಾದನೆಯಲ್ಲಿ ಒಂದಿಷ್ಟು ಹಣವನ್ನು ಸಮಾಜ ಸೇವೆಗೆ ಬಳಸಿದಾಗ ಸಿಗುವ ಸಂತೋಷ ಬೇರೆಲ್ಲೂ ಸಿಗುವುದಿಲ್ಲ. ಹಾಗಾಗಿ ಹರದನಹಳ್ಳಿ ರವಿ ಅವರು ಪ್ರಗತಿಪರ ರೈತರಾಗಿ, ಅಡಿಕೆ ಉದ್ಯಮಿಯಾಗಿ ಸಾಕಷ್ಟು ಶ್ರಮಿಸಿದ್ದಾರೆ ಇಂತಹವರ ಸೇವೆ ಸಮಾಜಕ್ಕೆ ಬೇಕಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾ.11 ರಂದು ಮಂತ್ರಾಲಯ ಮಠದ ಪೀಠಾಧ್ಯಕ್ಷ ಶ್ರೀಸುಬುದೇಂದ್ರ ತೀರ್ಥರ ಸಾನಿಧ್ಯದಲ್ಲಿ ಈ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿರುವುದು ಸಂತೋಷದ ವಿಷಯ ಎಂದು ನುಡಿದರು. ಈ ವೇಳೆ ರವಿ ಅವರ ತಾಯಿ ಭಾಗ್ಯಮ್ಮ, ನಿತ್ಯಾನಂದ ಚಂದ್ರು, ಸುರೇಶ್ ನಾಯ್ಡು, ಪ್ರಭಾಕರ್, ಮೂ.ರಾ. ಹರ್ಷಕುಮಾರ್‌ಗೌಡ, ರಾಜೇಂದ್ರ, ಕಿರಣ್, ಗುರುಪ್ರಸಾದ್, ಬಾಂದವ್ ಪಟೇಲ್, ಮಂಜುನಾಥ್, ಉದಯ್ ಕುಮಾರ್ ಸೇರಿದಂತೆ ಇತರರಿದ್ದರು.

# ಬೆಟ್ಟದಪುರ ಕಾಲೇಜಿನಲ್ಲಿ ರಕ್ತದಾನ ಶಿಬಿರ



ಬೆಟ್ಟದಪುರ, ಮಾ.24– ಗ್ರಾಮದ ಪ್ರಥಮ ದರ್ಜೆ ಕಾಲೇಜಿನಲ್ಲಿ ರೆಡ್‌ಕ್ರಾಸ್ ಘಟಕದಿಂದ ಮಂಗಳವಾರ ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು.

'ರಕ್ತದಾನ ಬರಿ ದಾನವಲ್ಲ ಅದು ಜೀವ ಉಳಿಸುವ ಮಹತ್ತರ ಜವಾಬ್ದಾರಿ' ಎಂಬ ಸಂದೇಶದೊಂದಿಗೆ ನಡೆದ ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯಿಂದ ಉತ್ಸಾಹಭರಿತ ಸ್ಪಂದನೆ ವ್ಯಕ್ತವಾಯಿತು.

ಕಾಲೇಜಿನ ಪ್ರಾಂಶುಪಾಲ ಭರತ್ ರಾಜ್ ಅರಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಮುಖ್ಯ ಅತಿಥಿ ಲಯನ್ ಬೋರ್ಡ್ ಸಂಸ್ಥೆ ಸಾರ್ವಜನಿಕ ಸಂಪರ್ಕಾಧಿಕಾರಿ ಸುರೇಶ್ ರಕ್ತದಾನದ ಮಹತ್ವ ವಿವರಿಸಿದರು. ಈ ಸಂದರ್ಭ IQAC ಸಂಯೋಜಕ ಶ್ಕೀರ್, NSS ಸಂಯೋಜಕ ರಘುವೀರ್ ಹಾಗೂ ರೆಡ್‌ಕ್ರಾಸ್ ಸಮಿತಿ ಸಂಯೋಜಕಿ ಕಾವ್ಯ ಕಾರ್ಯಕ್ರಮದ ಯಶಸ್ಸಿಗೆ ಮಾರ್ಗದರ್ಶನ ನೀಡಿದರು.

ಶಿಬಿರದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಿದ್ದರು. 37 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ರಕ್ತದಾನ ಮಾಡಿ ಮಾನವೀಯತೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಪ್ರದರ್ಶಿಸಿದರು.

# ಇಂದು ಉಚಿತ ನೇತ್ರ ತಪಾಸಣಾ ಶಿಬಿರ

ಚುಂಚನಕಟ್ಟೆ, ಮಾ.24– ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾ.25ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಉಚಿತ ನೇತ್ರ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಕರುನಾಡ ದೀಪ ಸೇವಾ ಟ್ರಸ್ಟ್, ಗ್ರಾಮೀಣ ನಿಧಿ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ತಾಲೂಕು ಆರೋಗ್ಯಾಧಿಕಾರಿಗಳು, ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಶಿಬಿರದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

# ಕನಕ ಸಾಂಸ್ಕೃತಿಕ ಸಮುದಾಯ ಭವನ ಉದ್ಘಾಟನೆ

ಹುಣಸೂರು, ಮಾ.24– ತಾಲೂಕಿನ ಸಿಬಿಟಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಕನಕ ಸಾಂಸ್ಕೃತಿಕ ಸಮುದಾಯ ಭವನವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

ನಂತರ ಮಾತನಾಡಿದ ಅವರು, ಗ್ರಾಮಕ್ಕೆ ಸಮುದಾಯ ಭವನದ ಅವಶ್ಯಕತೆ ಇರುವುದನ್ನು ಅರಿತು ಅರ್ಧಕ್ಕೆ ನಿಂತಿದ್ದ ಸಮುದಾಯ ಭವನಕ್ಕೆ ನಾನು 2013ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರಿಗೆ ಮನವಿ ಮಾಡಿ, ಹೆಚ್ಚಿನ ಅನುದಾನ ಕೊಡಿಸಿ ಕಾಮಗಾರಿ ಪ್ರಾರಂಭಿಸಿದ್ದೆ. ಆದರೆ ಇದುವರೆಗೂ ಕಾಮಗಾರಿ ಸಂಪೂರ್ಣಗೊಳ್ಳದೆ ಸ್ಥಗಿತವಾಗಿತ್ತು. ಇದೀಗ ಮತ್ತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಹಿಂದುಳಿದ ವರ್ಗಗಳ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಮನವಿ ಮಾಡಿ ಹೆಚ್ಚುವರಿಯಾಗಿ 25 ಲಕ್ಷ ರೂ. ಅನುದಾನ ಮಂಜೂರು ಮಾಡಿಸಿ ಸಮುದಾಯ ಭವನ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಲೋಕಾರ್ಪಣೆಗೊಳಿಸಿರುವುದು ಸಮಾಧಾನ ತಂದಿದೆ. ಈ ಭವನವನ್ನು ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸದ್ಬಳಕೆ ಮಾಡಿಕೊಳ್ಳಬೇಕು. ಮುಂದಿನ ತಿಂಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರನ್ನು ಗ್ರಾಮಕ್ಕೆ ಕರೆತಂದು ಸಮುದಾಯ ಭವನವನ್ನು ಅಧಿಕೃತವಾಗಿ ಉದ್ಘಾಟಿಸಿ ಲೋಕಾರ್ಪಣೆ ಮಾಡಲು ಎಲ್ಲಾ ರೀತಿಯಲ್ಲೂ ಸಹಕರಿಸುವುದಾಗಿ ತಿಳಿಸಿದರು.

ಸಿಬಿಟಿ ಕಾಲೋನಿ ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಕುಪ್ಪುಸ್ವಾಮಿ ಮಾತನಾಡಿ, ಕಳೆದ 24 ವರ್ಷದ ಹಿಂದೆ ಸಣ್ಣ ಪ್ರಮಾಣ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ ಕಾಮಗಾರಿ ಪೂರ್ಣಗೊಳ್ಳಲು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಪರಿಶ್ರಮ ಅಪಾರವಾಗಿದೆ. ಮಾಜಿ ಶಾಸಕರು ಸರ್ಕಾರದಿಂದ ಹೆಚ್ಚಿನ ಅನುದಾನ ಹಾಗೂ ವೈಯಕ್ತಿಕವಾಗಿ ಅನುದಾನ ನೀಡಿದ್ದರಿಂದ ಇಂದು ಕನಕ ಭವನ ಕಟ್ಟಡ ನಿರ್ಮಾಣವಾಗಿದೆ ಎಂದರು. ಇದೇ ವೇಳೆ ಗ್ರಾಮಸ್ಥರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಿದರು.

ಇದಕ್ಕೂ ಮುನ್ನಾ ಶ್ರೀಕನಕ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಗ್ರಾಮಸ್ಥರು ಶ್ರೀಗಣಪತಿ ಹೋಮ ಸೇರಿದಂತೆ ವಿಶೇಷ ಪೂಜೆ ಹೋಮ ಹವನ ನಡೆಸಿದರು. ಈ ವೇಳೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಹಾಗೂ ಮಾಜಿ ಜಿಪಂ ಸದಸ್ಯ ಡಿ.ಕೆ.ಕುನ್ನೇಗೌಡ, ತಾಲೂಕು ಕಾಂಗ್ರೆಸ್ ಕಾರ್ಯಾಧ್ಯಕ್ಷ ಗದ್ದಿಗೆ ದೇವರಾಜ್, ತಾಪಂ ಮಾಜಿ ಉಪಾಧ್ಯಕ್ಷ ಚಿನ್ನವೀರಯ್ಯ, ಅಕ್ರಮ ಸಕ್ರಮ ಮಾಜಿ ಸದಸ್ಯ ಶಿವಲಿಂಗಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಕಂಬಳಿ ಜಯರಾಮ್, ರಮೇಶ್, ಮನೋಹರ್, ವೆಳ್ಳಂಗಿರಿ, ವೀರಭದ್ರಪ್ಪ, ಚಿನ್ನಸ್ವಾಮಿ, ದೊರೆಸ್ವಾಮಿ, ಗಂಗಮ್ಮ, ಶರವಣ, ವೇಲು ಸ್ವಾಮಿ, ಗೋವಿಂದಪ್ಪ ಪಳನಿಸ್ವಾಮಿ, ಆರ್ಮುಗಂ, ರಾಮಣ್ಣ, ಶ್ರೀನಿವಾಸ್, ವೆಂಕಟೇಶ್, ಮಾದೇಶ್, ರಾಯಪ್ಪ ಸಚಿನ್, ರಾಮಣ್ಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಘು ಇತರರಿದ್ದರು.

# ನಾಳೆ ಶ್ರೀಚನ್ನಮಲ್ಲಿಕಾರ್ಜುನ ಸ್ವಾಮೀಜಿ ಪುಣ್ಯ ಸ್ಮರಣೋತ್ಸವ, ದತ್ತಿ ಉಪನ್ಯಾಸ ಕಾರ್ಯಕ್ರಮ

ತಿ.ನರಸೀಪುರ, ಮಾ.24– ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತಿ.ನರಸೀಪುರ ತಾಲೂಕು ಶರಣ ಸಾಹಿತ್ಯ ಪರಿಷತ್, ಶ್ರೀಪಟ್ಟದ ಮಠ ಮಾಡ್ರಹಳ್ಳಿ ಸಹಯೋಗದೊಂದಿಗೆ ಮಾ.26 ರಂದು ಬೆಳಗ್ಗೆ 10 ಗಂಟೆಗೆ ಮಾಡ್ರಹಳ್ಳಿ ಗ್ರಾಮದಲ್ಲಿ ಶ್ರೀಚನ್ನಮಲ್ಲಿ ಕಾರ್ಜುನ ಸ್ವಾಮೀಜಿ ಅವರ 50ನೇ ಸುವರ್ಣ ಪುಣ್ಯ ಸ್ಮರಣೋತ್ಸವದ ಕಾರ್ಯಕ್ರಮದೊಂದಿಗೆ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಶ್ರೀಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ, ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಕನಕಪುರ ಶ್ರೀದೇಗುಲ ಮಠದ ಕಿರಿಯ ಶ್ರೀಗಳಾದ ಡಾ.ಚನ್ನಬಸವ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಮಹದೇಶ್ವರಬೆಟ್ಟ ಶ್ರೀಸಾಲೂರು ಬೃಹನ್ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಮಾಡ್ರಹಳ್ಳಿ ಶ್ರೀಪಟ್ಟದ ಮಠದ ಅಧ್ಯಕ್ಷ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವ ವಹಿಸುವರು. ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹಾದೇವಸ್ವಾಮಿ ಅವರು ಲಿಂಗೈಕ್ಯ ಎಂ.ಸಿ.ಶಿವಾನಂದ ಶರ್ಮಾ ಅವರ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ ನೀಡುವರು.

ಸಮಾಜ ಸೇವಕ ಸುದೀಪ್, ತಾಲೂಕು ಕಸಾಪ ಅಧ್ಯಕ್ಷ ಕೆಬ್ಬೇಹುಂಡಿ ಸೋಮಶೇಖರಪ್ಪ ಸಿ.ಎಂ.ಪ್ರಕಾಶ್, ಡಾ.ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

# ನಾಳೆ ತಂಬಾಕು ಬೆಲೆ ನಿಗದಿಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಮಾ.24– ತಂಬಾಕಿಗೆ 350 ರೂ. ಬೆಂಬಲ ಬೆಲೆ ನಿಗದಿಪಡಿಸುವಂತೆ ಒತ್ತಾಯಿಸಿ ಮಾ.26 ರಂದು ಪಟ್ಟಣದ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕಾರ್ಯದರ್ಶಿ ಹೆಚ್.ಡಿ.ಬೀರೇಶ್ವರ್ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಸಾಲ ಸೋಲ ಮಾಡಿ ತಂಬಾಕು ಹದಗೊಳಿಸಿರುವ ರೈತರು ಉತ್ತಮ ಬೆಲೆಯ ನಿರೀಕ್ಷೆಯಲ್ಲಿದ್ದರು. ಆದರೆ ಇಂದು ಸೂಕ್ತ ಬೆಂಬಲ ಬೆಲೆ ಸಿಗದೇ ಕಂಗಲಾಗಿದ್ದಾರೆ. ಹೀಗಾಗಿ ಬೆಲೆ ಕುಸಿದಿರುವ ತಂಬಾಕಿಗೆ ಕೆಜಿಗೆ 350 ನಿಗದಿಪಡಿಸಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಬೆಲೆ ಕುಸಿತ ಪರಿಣಾಮ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈಗಾಗಲೇ ಸಭೆ ನಡೆದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಜಿಲ್ಲಾಧಿಕಾರಿಗಳು ಸಭೆ ನಿರ್ಣಯ ಜಾರಿಗೊಳಿಸಲು ಗಮನಹರಿಸಬೇಕೆಂದು ಒತ್ತಾಯಿಸಿರುವ ಅವರು, ಈ ಭಾಗದ ಜನಪ್ರತಿನಿಧಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಅವರು ಆಗ್ರಹಿಸಿದ್ದಾರೆ.

ಮಾರುಕಟ್ಟೆ ಆರಂಭದಲ್ಲಿ ಗುಣಮಟ್ಟದ ತಂಬಾಕಿಗೆ 320 ರೂ. ದೊರೆತ ಕಾರಣ ಕೊಂಚ ಮಂದಹಾಸ ಮೂಡಿಸಿದ ಕಂಪನಿಗಳು ಇಂದು ಕೆಜಿಗೆ 240 ರಿಂದ 260 ನೀಡುತ್ತಿರುವುದರಿಂದ ಕೆಜಿಗೆ 80ರಿಂದ 100 ರೂ.ನಷ್ಟ ಅನುಭವಿಸುವಂತಾಗಿದೆ. ಹೀಗಾಗಿ ಉತ್ತಮ ಬೆಂಬಲ ಬೆಲೆ ನಿಗದಿಗೆ ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರತಿಭಟನೆ ಯಶಸ್ವಿಗೊಳಿಸುವಂತೆ ಒತ್ತಾಯಿಸಿದ್ದಾರೆ.

# ವಚನಕಾರರ ವಚನಗಳು ಇಂದಿಗೂ ಪ್ರಸ್ತುತ

### ಮಾಜಿ ಶಾಸಕ ಕಳಲೆ ಕೇಶವಮೂರ್ತಿ

ನಂಜನಗೂಡು, ಮಾ.24– ವಚನಗಳು ಕೇವಲ ಸಾಹಿತ್ಯವಲ್ಲ ಬದಲಾಗಿ ಸಮಾಜವನ್ನು ಸುಧಾರಿಸುವ ಹಾಗೂ ಜನರಲ್ಲಿ ಜಾಗೃತಿ ಮೂಡಿಸಿ ಮಾನವತೆಯನ್ನು ಎತ್ತಿ ಹಿಡಿಯುವ ಜೀವನದ ದಾರಿ ದೀಪಗಳಾಗಿವೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.



ಕಾರ್ಯಕ್ರಮವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಗರಳಪುರಿ ಉತ್ಸವದ ಅಂಗವಾಗಿ ನಡೆದ ವಚನ ಕಂಠ ಪಾಠ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿದ್ದ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ವಚನಕಾರರು ಜನರ ಹಾಡು ಭಾಷೆಯಲ್ಲಿ ವಚನಗಳನ್ನು ರಚಿಸಿ ಜನರಲ್ಲಿ ಜಾಗೃತಿ ಮೂಡಿಸಿದರು. ವಚನಕಾರರ ವಚನಗಳು ಇಂದಿಗೂ ಕೂಡ ಪ್ರಸ್ತುತವಾಗಿವೆ. ಆದ್ದರಿಂದ ವಚನಗಳು ಜನರಿಗೆ ಜೀವನದ ದಾರಿದೀಪಗಳಾಗಿವೆ. ಇಂತಹ ವಚನ ಸಾಹಿತ್ಯದ ಮಹತ್ವವನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಗರಳಪುರಿ ಉತ್ಸವದ ಮೂಲಕ ಶಾಸಕ ದರ್ಶನ್ ಧ್ರುವನಾರಾಯಣ್ ಅವರು, ವಚನ ಕಂಠಪಾಠ ಸ್ಪರ್ಧೆ ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ವಚನ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಿ ತಿಳುವಳಿಕೆ ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್ ಮಾತನಾಡಿ, ಶ್ರೀಕಂಠೇಶ್ವರಸ್ವಾಮಿ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರ ಚಿಂತನೆಯಂತೆ ಇದೇ ಮೊದಲ ಬಾರಿಗೆ ನಂಜನಗೂಡಿನಲ್ಲಿ ಗರಳಪುರಿ ಉತ್ಸವ ನಡೆಸಲಾಗುತ್ತಿದೆ. ಮೊದಲಿಗೆ ಭಾವಗೀತೆ ಗಾಯನ ಸ್ಪರ್ಧೆ, ಚದುರಂಗ ಸ್ಪರ್ಧೆ, ಜಾನಪದ ಗಾಯನ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಯೋಗ ಜಾಗೃತಿ ಕಾರ್ಯಕ್ರಮಗಳು ಜರುಗಿವೆ. 4ನೇ ದಿನವಾದ ಇಂದು ವಚನ ಕಂಠಪಾಠ ಸ್ಪರ್ಧೆ ನಡೆಯುತ್ತಿದ್ದು, ಮಾ.25 ರಂದು ಕೇಶವಿನ್ಯಾಸ ಮತ್ತು ವೇಷಭೂಷಣ ಸ್ಪರ್ಧೆ, ಮಾ.26ರಂದು ರೀಲ್ ಮೇಕಿಂಗ್ ಸ್ಪರ್ಧೆ, ಮಾ.27ರಂದು ರಂಗೋಲಿ ಸ್ಪರ್ಧೆ, ಶುಕ್ರವಾರದ ಸಂತೆ, ಮಾ.28ರಂದು ಮೆಹಂದಿ ಬಿಡಿಸುವ ಸ್ಪರ್ಧೆ ಮತ್ತು ಹಾಲು ಕರೆಯುವ ಸ್ಪರ್ಧೆ, ಮಾ.29ರಂದು ಬೆಳಗ್ಗೆ ವಾಕಥಾನ್ ಸ್ಪರ್ಧೆ ಮತ್ತು ಸಂಜೆ ವೇದಿಕೆ ಕಾರ್ಯಕ್ರಮಗಳು ಜರುಗಲಿದ್ದು, ಎಲ್ಲಾ ಕಾರ್ಯಕ್ರಮಗಳಿಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು.

> 12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದವರಿಗೂ ಸಾಮಾಜಿಕ ಸಮಾನತೆ ದೊರಕಿಸಿ ಕೊಟ್ಟಿದ್ದರು. ಬಸವಣ್ಣನವರ ವಚನಗಳು ಮಾನವನ ಬದುಕಿಗೆ ಆಸರೆಯಾಗಿವೆ. ಆದ್ದರಿಂದ ಎಲ್ಲರೂ ವಚನ ಸಾಹಿತ್ಯವನ್ನು ಓದಿ ವಚನಗಳ ಆಶಯದಂತೆ ನಡೆಯಬೇಕು.
> – ನಾಗರಾಜೇಂದ್ರ ಸ್ವಾಮೀಜಿ, ದೇವಿರಮ್ಮನಹಳ್ಳಿ ಸಂಗಮ ಮಠ.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಶಶಿರೇಖಾ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ, ನಗರಸಭಾ ಮಾಜಿ ಸದಸ್ಯರಾದ ರವಿ, ಕೆ.ಎಂ.ಬಸವರಾಜು, ಗಾಯತ್ರಿ, ಮುಖಂಡರಾದ ಗೋವಿಂದ ರಾಜು, ಸ್ನೇಕ್ ಬಸವರಾಜು, ಅನುಸೂಯ ಗಣೇಶ್, ಮರಿ ಶೆಟ್ಟಿ, ಬಸವಯೋಗಿ ಸೇರಿದಂತೆ ಇತರರಿದ್ದರು.

# ಕೃಷಿಯೊಂದಿಗೆ ಉಪಕಸುಬು ಕೈಗೊಂಡರೆ ಆದಾಯ ಹೆಚ್ಚಳ

### ಬೃಹತ್ ಕೃಷಿ ಮೇಳದಲ್ಲಿ ರೈತರಿಗೆ ಸರಗೂರು ಪಪಂ ಅಧ್ಯಕ್ಷೆ ಚೈತ್ರ ಸಲಹೆ

ಸರಗೂರು, ಮಾ.24– ಕೃಷಿ ಜೊತೆಗೆ ಉಪಕಸುಬು ಕೈಗೊಂಡರೆ ಆದಾಯ ಹೆಚ್ಚಾಗುತ್ತದೆ ಎಂದು ರೈತರಿಗೆ ಸರಗೂರು ಪಪಂ ಅಧ್ಯಕ್ಷೆ ಚೈತ್ರ ಸಲಹೆ ನೀಡಿದರು.



ಬೃಹತ್ ಕೃಷಿ ಮೇಳವನ್ನು ಗಣ್ಯರು ಉದ್ಘಾಟಿಸಿದರು.

ಪಟ್ಟಣದ ಜಯ ಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಬೃಹತ್ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಸರಗೂರಿನಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಕಳೆದ 3 ವರ್ಷಗಳಿಂದ ಕೃಷಿ ಮೇಳ ನಡೆಸುತ್ತಾ ಬಂದಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮೈಸೂರು ಜಿಲ್ಲಾ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳ ಉಪ ನಿರ್ದೇಶಕ ಡಾ.ನಾಗರಾಜು ಮಾತನಾಡಿ, ಗ್ರಾಮೀಣ ಜನರ ಬದುಕನ್ನು ಹಸನಾಗಿಸುವಲ್ಲಿ ಹೈನುಗಾರಿಕೆ ಪಾತ್ರ ಪ್ರಮುಖವಾದದ್ದು. ಮೇಳದಲ್ಲಿ ಸಾಕಷ್ಟು ರೈತ ಮಹಿಳೆಯರು ಭಾಗವಹಿಸಿರುವುದು ಸಂತಸದ ವಿಷಯ. ಪ್ರಸ್ತುತ ರೈತರು ಸಮಗ್ರ ಬೇಸಾಯ ಕೈಗೊಳ್ಳುವ ಜೊತೆಗೆ ಕುರಿ, ಕೋಳಿ, ಮೇಕೆ ಮತ್ತು ಮೀನು ಸಾಕಾಣೆ ಮಾಡುವುದರಿಂದ ರೈತರು ಹೆಚ್ಚಿನ ಆದಾಯಗಳಿಸಬಹುದು. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಇಲಾಖೆ ವತಿಯಿಂದ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಈ ವರ್ಷ ಮೈಸೂರು ಜಿಲ್ಲೆಯಲ್ಲಿ 4300 ರೈತ ಮಹಿಳೆಯರಿಗೆ ತಲಾ 20 ಕೋಳಿಗಳು ಹಾಗೂ ಬುಡಕಟ್ಟು ರೈತ ಮಹಿಳೆಯರಿಗೆ 30 ಕೋಳಿಗಳನ್ನು ನೀಡಲಾಗಿದೆ. ಅವುಗಳನ್ನು ಜೋಪಾನ ಮಾಡುವಂತೆ ತಿಳಿಸಿದ ಅವರು ಇಲಾಖೆಯಿಂದ ಹಸು ಸಾವನ್ನಪ್ಪಿದರೆ 15 ಸಾವಿರ, ಕುರಿ ಸಾವನ್ನಪ್ಪಿದರೇ 7500 ರೂ.ಗಳನ್ನು ರೈತರ ಖಾತೆಗೆ ಜಮಾ ಮಾಡಲಾಗುವುದು. ಹೈನುಗಾರಿಕೆಗೆ ಸಂಬಂಧಿಸಿದಂತೆ ದೂರುಗಳಿದ್ದರೇ 1960ಕ್ಕೆ ಕರೆ ಮಾಡಿ ತಿಳಿಸಿದರೆ ತಮ್ಮ ಮನೆ ಬಾಗಿಲಿಗೆ ಆಗಮಿಸಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಇದನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಯೂತ್ ಮೂವ್‌ಮೆಂಟ್‌ನ ಸಲಹೆಗಾರ ಡಾ.ಎಂ.ಎ.ಬಾಲಸುಬ್ರಹ್ಮಣ್ಯ ಮಾತನಾಡಿದರು. ಈ ವೇಳೆ ಸ್ವಾಮಿ ವಿವೇಕಾನಂದ ಸಾಮಾಜಿಕ ಆರ್ಥಿಕ ಸಬಲೀಕರಣ ವಿಭಾಗದ ನಿರ್ದೇಶಕ ಡಾ.ಡೆನ್ನಿಸ್ ಹಾಗೂ ಸಿಬ್ಬಂದಿ ವರ್ಗ ಸೇರಿದಂತೆ ಇನ್ನಿತರರಿದ್ದರು.

# ಹುದುಗಿರುವ ವಸ್ತು ವಿಶೇಷದ ಮೂಲಕ ಮಾನವ ಇತಿಹಾಸ ಅನಾವರಣಗೊಳಿಸುವುದೇ ಪುರಾತತ್ವ ಶಾಸ್ತ್ರ

**● ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ವಿಶ್ಲೇಷಣೆ ● ವಿಶೇಷ ಉಪನ್ಯಾಸಕ್ಕೆ ಚಾಲನೆ**

ಮೈಸೂರು, ಮಾ.24(ಎಂಟಿವೈ)– ಕರ್ನಾಟಕ ಪುರಾತತ್ವ ಪರಂಪರೆಯಲ್ಲಿ ಶ್ರೀಮಂತ ರಾಜ್ಯವಾಗಿದ್ದು, ವಿವಿಧ ಸ್ವರೂಪದಲ್ಲಿ ಹುದುಗಿರುವ ಪುರಾತತ್ವ ಮಾಹಿತಿಯನ್ನು ಹೊರ ತೆಗೆಯುವ ನಿಟ್ಟಿನಲ್ಲಿ ಪುರಾತತ್ವಶಾಸ್ತ್ರ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಸಭಾಂಗಣದಲ್ಲಿ ಆಯೋಜಿಸಿದ್ದ 'ಪುರಾತತ್ವ ಶಾಸ್ತ್ರ: ಪ್ರಾಚೀನ ಪ್ರಾಣಿಗಳು ಮತ್ತು ಆಧುನಿಕ ವಿಜ್ಞಾನ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಸಭಾಂಗಣದಲ್ಲಿ ದಿ ಅಕಾಡೆಮಿ ಟ್ರಸ್ಟ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ 'ಪುರಾತತ್ವ ಶಾಸ್ತ್ರ ಪ್ರಾಚೀನ ಪ್ರಾಣಿಗಳು ಮತ್ತು ಆಧುನಿಕ ವಿಜ್ಞಾನ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪುರಾತತ್ವಶಾಸ್ತ್ರ ಕೇವಲ ಉತ್ಖನನಕ್ಕೆ ಮಾತ್ರ ಸೀಮಿತವಾಗದೆ, ವಿಜ್ಞಾನದ ಬಹುಶಿಸ್ತೀಯ ಅಧ್ಯಯನಗಳನ್ನು ಒಳಗೊಂಡಂತೆ ಕಾರ್ಯನಿರ್ವಹಿಸುತ್ತಿದೆ. ಪುರಾತತ್ವ ಶಾಸ್ತ್ರ ಪಳೆಯುಳಿಕೆ, ಹುದುಗಿರುವ ವಸ್ತುಗಳಿಂದ ಮನುಷ್ಯನ ಇತಿಹಾಸವನ್ನು ವಿಜ್ಞಾನದ ಮೂಲಕ ಪುನರ್ ನಿರ್ಮಾಣ ಮಾಡುವ ಮಹತ್ತರ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ. ಇದು ವಸ್ತು ಅವಶೇಷಗಳ ಮೂಲಕ ಮಾನವ ಇತಿಹಾಸವನ್ನು ಪುನರ್ ನಿರ್ಮಿಸುವ ವಿಜ್ಞಾನವಾಗಿದೆ ಎಂದರು.

ಪುರಾತತ್ವ ಶಾಸ್ತ್ರವು ಆಕರ್ಷಕ ಮತ್ತು ಪ್ರಮುಖ ಕ್ಷೇತ್ರವಾಗಿ ಎದ್ದು ಕಾಣುತ್ತದೆ. ಪ್ರಾಣಿಗಳ ಅವಶೇಷಗಳ ಅಧ್ಯಯನದಿಂದ ಪ್ರಾಚೀನ ಪ್ರಾಣಿಗಳು, ಅವುಗಳ ಆಹಾರ ಕ್ರಮ, ಪಳಗಿಸುವ ಪದ್ಧತಿ, ಪರಿಸರ ಪರಿಸ್ಥಿತಿ, ವ್ಯಾಪಾರ ಜಾಲಗಳು ಮತ್ತು ನಂಬಿಕೆ ವ್ಯವಸ್ಥೆಗಳ ಬಗ್ಗೆ ಆಳವಾದ ಒಳನೋಟವನ್ನು ನೀಡುತ್ತದೆ. ಉತ್ಖನನದ ವೇಳೆ ಸಿಗುವ ಮೂಳೆ, ಚಿಪ್ಪು ಮತ್ತು ಇತರ ಪ್ರಾಣಿಗಳ ಅವಶೇಷಗಳು ಕೇವಲ ಅವಶೇಷಗಳಲ್ಲ. ಅವು ಮಾನವರು ಮತ್ತು ನೈಸರ್ಗಿಕ ಪ್ರಪಂಚದ ನಡುವಿನ ಪರಸ್ಪರ ಕ್ರಿಯೆಯ ದಾಖಲೆಗಳಾಗಿವೆ. ಪುರಾತತ್ವ ಶಾಸ್ತ್ರದ ಮೂಲಕ, ಪ್ರಾಚೀನ ಸಮುದಾಯಗಳು ತಮ್ಮ ಸುತ್ತಮುತ್ತಲಿನ ಪ್ರದೇಶಗಳಿಗೆ ಹೇಗೆ ಹೊಂದಿಕೊಂಡಿದ್ದವು. ಅವು ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಿದವು. ಆಧುನಿಕ ವಿಜ್ಞಾನ ಮತ್ತು ಸುಸ್ಥಿರತೆಯ ಅಧ್ಯಯನಗಳನ್ನು ತಿಳಿಸುವ ರೀತಿಯಲ್ಲಿ ಪ್ರಾಣಿಗಳೊಂದಿಗೆ ಸಹಬಾಳ್ವೆ ನಡೆಸಿದವು ಎನ್ನುವುದನ್ನು ಪುರಾತತ್ವಶಾಸ್ತ್ರವು ನಮಗೆ ತಿಳಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಗತಕಾಲದ ಬದುಕು, ಸಂಸ್ಕೃತಿಯನ್ನು ಹೊರತೆಗೆದು, ಇದರ ಮೂಲಕ ಮನುಷ್ಯನ ವಿಕಾಸವನ್ನು ಪತ್ತೆಹಚ್ಚಿ, ಅದರ ನಿಜ ಸ್ವರೂಪವನ್ನು ತಿಳಿಸುವ ಕೆಲಸ ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾದ ಬೇಲೂರು, ಹಳೇ ಬೀಡಿನ ದೇವಾಲಯಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯಿಲ್ಲದ ಕಾಲದಲ್ಲಿ ಹೇಗೆ ಸ್ಥಾಪಿಸಿದರು ಎಂದು ಇಂದಿಗೂ ಅಚ್ಚರಿ ಉಂಟು ಮಾಡುತ್ತದೆ. ಆ ಕಾಲದ ಮಾನವ ಸಂಪನ್ಮೂಲದ ಉಗಮದ ಬಗ್ಗೆ ಇಂದಿಗೂ ಅರಿತುಕೊಳ್ಳಲು ಆಸಕ್ತಿ ಹೆಚ್ಚಿದೆ. ಕರ್ನಾಟಕ ಪುರಾತತ್ವವು ಪರಂಪರೆಯಲ್ಲಿ ಬಹಳಷ್ಟು ಶ್ರೀಮಂತವಾಗಿದ್ದು, ಹಲ್ಲೂರು, ಮಸ್ಕಿ, ಬ್ರಹ್ಮಗಿರಿಗಳಲ್ಲಿ ಸಾಕಷ್ಟು ಪುರಾತನವಾದ ಜೀವಿಗಳ ಪಳಿಯುಳಿಕೆಗಳು ದೊರೆತಿವೆ. ಅಲ್ಲದೇ, ಮನುಷ್ಯನ ಮತ್ತು ಪ್ರಾಣಿಗಳ ನಡುವಿನ ಹೊಂದಾಣಿಕೆಯ ಬದುಕು ಕುರಿತಾದ ಮಾಹಿತಿ ದೊರೆತಿವೆ. ಪ್ರಾಣಿಬೇಟೆ, ಕೃಷಿ, ವ್ಯಾಪಾರ, ಆಡಳಿತ ವ್ಯವಸ್ಥೆಗಳು ತಿಳಿದಿವೆ ಎಂದು ಹೇಳಿದರು.

ಪ್ರಾಚೀನ ಪ್ರಾಣಿಗಳ ಬಗ್ಗೆ ಅಧ್ಯಯನದಲ್ಲಿ ಡಿಎನ್ಎ ವಿಶ್ಲೇಷಣೆ, ಐಸೊಟೋಪಿಕ್ ಅಧ್ಯಯನ ಮತ್ತು ಸುಧಾರಿತ ಚಿತ್ರಣ ಬಳಸಿ ಆಧುನಿಕ ಮತ್ತು ವೈಜ್ಞಾನಿಕ ತಂತ್ರಜ್ಞಾನ ಪುರಾತತ್ವ ಶಾಸ್ತ್ರದ ಸಂಶೋಧನೆಯಲ್ಲಿ ಕ್ರಾಂತಿಯುಂಟು ಮಾಡಿವೆ. ಅವು ಪ್ರಾಚೀನ ಪರಿಸರ ವ್ಯವಸ್ಥೆಗಳನ್ನು ಪುನರ್ ನಿರ್ಮಿಸಲು, ಜಾತಿಗಳ ವಿಕಾಸವನ್ನು ಪತ್ತೆಹಚ್ಚಲು ಮತ್ತು ಹಿಂದಿನ ಹವಾಮಾನ ಮಾದರಿಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಅನುವು ಮಾಡಿಕೊಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗಾಂಧಿನಗರ ಐಐಟಿಯ ಡಾ.ಸಿ.ವಿ.ಶಾರದಾ, ಭೌತ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಎಸ್.ಮಲ್ಲೇಶ್, ದಿ ಅಕಾಡೆಮಿ ಟ್ರಸ್ಟ್‌ನ ಸೀತಾರಾಮ್, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿ.ಶಕುಂತಲಾ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿ.ಶೋಭಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಉಸ್ತಾದ್ ಭಗತ್ ಸಿಂಗ್(ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಲವ್ ಮಾಕ್ಟೇಲ್–3 (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಓ ರೋಮಿಯೋ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಉಸ್ತಾದ್ ಭಗತ್ ಸಿಂಗ್(ತೆ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಸಂಪತ್ತಿಗೆ ಸವಾಲ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ) | 2+2 ಪ್ರದರ್ಶನಗಳು |
| **ಸಂಗಂ** | |
| ಧುರಂದರ್ (ಹಿ) | 3 ಪ್ರದರ್ಶನಗಳು |
| **ಲಿಡೋ** | |
| ಹಯಗ್ರೀವ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಆಕಾಶ್ (ಕ) | 4 ಪ್ರದರ್ಶನಗಳು |

# ಹಿಂದುಳಿದ ವರ್ಗಗಳ ಹರಿಕಾರ ಹಾವನೂರು: ಎನ್.ಭಾಸ್ಕರ್



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ವತಿಯಿಂದ ಹಾವನೂರರ ಜಯಂತಿ ಆಚರಿಸಲಾಯಿತು.

ಮೈಸೂರು, ಮಾ.24– ಹಿಂದುಳಿದ ವರ್ಗಗಳ ಹರಿಕಾರ, ನಾಡು ಕಂಡ ಶ್ರೇಷ್ಠ ನ್ಯಾಯವಾದಿ ಎಲ್.ಜಿ.ಹಾವನೂರು ಅವರನ್ನು ಸದಾ ಸ್ಮರಿಸಬೇಕು ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಹೇಳಿದರು.

ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ವತಿಯಿಂದ ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ನಡೆದ ಹಾವನೂರರ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ತೀಕ್ಷ್ಣ ದೂರದೃಷ್ಟಿಯುಳ್ಳ ರಾಜಕೀಯ ಮುತ್ಸದ್ಧಿ ಹಾವನೂರು ಅವರು ಸಮಾಜ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು ಎಂದು ಬಣ್ಣಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಹಾವನೂರು ವರದಿಯನ್ನು ಸಲ್ಲಿಸುವ ಮೂಲಕ ಹಿಂದುಳಿದ ಜಾತಿಯವರಿಗೆ ನ್ಯಾಯಯುತ ಮೀಸಲಾತಿಯನ್ನು ಕಲ್ಪಿಸಿ ಅವರ ಅಭಿವೃದ್ಧಿಗೆ ಕಾರಣಕರ್ತರಾದರು. ಕಗ್ಗತ್ತಲಲ್ಲಿದ್ದ ಹಿಂದುಳಿದ ವರ್ಗಗಳ ಜನರನ್ನು ಬೆಳಕಿಗೆ ತಂದರು ಎಂದು ತಿಳಿಸಿದರು.

ಹಿಂದಿನ ಬಾಂಬೆ ರಾಜ್ಯದ ಮೊಟ್ಟ ಮೊದಲ ಎಲ್‌ಎಲ್‌ಬಿ ಪದವೀಧರರಾದ ಅವರು 1953ರಲ್ಲಿ ಬಾಂಬೆಯಲ್ಲಿ ಅಂಬೇಡ್ಕರ್ ಅವರೊಂದಿಗೆ ವಕಾಲತ್ತು ಆರಂಭಿಸಿದರು. ಬಳಿಕ ಬೆಂಗಳೂರು ಹೈಕೋರ್ಟ್‌ನಲ್ಲಿ ತಮ್ಮ ವೃತ್ತಿಯನ್ನು ಮುಂದುವರಿಸಿದರು. ಅವರು ಉತ್ತಮ ಸಂವಿಧಾನ ತಜ್ಞರೆಂಬ ಖ್ಯಾತಿ ಪಡೆದಿದ್ದರೆಂದು ಚಿಂತಕರು ಹೇಳಿದ್ದಾರೆ. ಸಂಸತ್ ಸದಸ್ಯರಾಗಿಯೂ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ಅಧ್ಯಕ್ಷ ಪು.ಶ್ರೀನಿವಾಸನಾಯಕ, ನಾಯಕ ಹಿತ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಚಾಮುಂಡಿ ಬೆಟ್ಟ ಶ್ರೀಧರ್, ಸಂಚಾಲಕ ಹುಣಸೂರು ಪ್ರಭಾಕರ್, ವಕೀಲರಾದ ತಿಮ್ಮಯ್ಯ, ಹೆಚ್.ಎಸ್.ಪುಟ್ಟರಸ, ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಸತ್ಯನಾರಾಯಣ, ಗೌರವಾಧ್ಯಕ್ಷ ಕೇಶವ, ಕುಮಾರಬೀಡು ಸುರೇಶ, ಬಂಡಳ್ಳಿ ಕುಮಾರ್, ಹೊಸರಾಮನಹಳ್ಳಿ ಮಂಚನಾಯಕ, ನಗರಪಾಲಿಕೆ ಮಾಜಿ ಸದಸ್ಯ ಸತೀಶ್ ಮತ್ತಿತರರು ಪಾಲ್ಗೊಂಡಿದ್ದರು.

# ದುಬಾರಿ ಮೊತ್ತಕ್ಕೆ ರಾಜಸ್ಥಾನ ರಾಯಲ್ಸ್ ತಂಡ ಮಾರಾಟ

ನವದೆಹಲಿ, ಮಾ.24– ಐಪಿಎಲ್ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ಡೀಲ್ ನಡೆದಿದೆ. ದುಬಾರಿ ಮೊತ್ತಕ್ಕೆ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ಮಾರಾಟವಾಗಿದೆ. ಯುಎಸ್ ಮೂಲದ ವಾಣಿಜ್ಯೋದ್ಯಮಿ ಕಲ್ ಸೋಮಾನಿ ನೇತೃತ್ವದ ಸಮೂಹವು 1.63 ಬಿಲಿಯನ್ ಡಾಲರ್ (ಅಂದಾಜು ರೂ 15,300 ಕೋಟಿ)ಗೆ ಮಾರಾಟವಾಗಿದೆ ಎಂದು ವರದಿಯಾಗಿದೆ.

ವರದಿಗಳ ಪ್ರಕಾರ, ಐಪಿಎಲ್ 2026 ಆವೃತ್ತಿ ಬಳಿಕ ವಹಿವಾಟು ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಸಮೂಹವು ಫ್ರಾಂಚೈಸ್‌ನ ಶೇಕಡಾ 100 ರಷ್ಟು ಮಾಲೀಕತ್ವವನ್ನು ಪಡೆದುಕೊಳ್ಳುತ್ತದೆ. ರಾಜಸ್ಥಾನ್ ರಾಯಲ್ಸ್ ಐಪಿಎಲ್ ಇತಿಹಾಸದಲ್ಲಿ ಅತ್ಯಂತ ಹೆಚ್ಚಿನ ಮೌಲ್ಯ ಹೊಂದಿರುವ ತಂಡವಾಗುತ್ತದೆ.

ಸ್ಕಾಟ್ಸ್‌ಡೇಲ್ ನ ಸೋಮಾನಿ ಅರಿಜೋನಾ ಮೂಲದ ಉದ್ಯಮಿಯಾಗಿದ್ದಾರೆ. ವಾಲ್ ಮಾರ್ಟ್ ಕುಟುಂಬದ ರಾಬ್ ವಾಲ್ಟನ್ ಮತ್ತು ಡೆಟ್ರಾಯಿಟ್ ಲಯನ್ಸ್ ಹೊಂದಿರುವ ಹ್ಯಾಂಪ್ ಕುಟುಂಬ ಸೇರಿದಂತೆ ಪ್ರಮುಖ ಅಮೆರಿಕದ ಹೂಡಿಕೆದಾರರಿಂದ ಬೆಂಬಲ ಪಡೆದಿದ್ದಾರೆ. ಶೀಲಾ ಫೋರ್ಡ್ ಹ್ಯಾಂಪ್ ಕೂಡಾ ಮಾಲೀಕತ್ವದ ಗುಂಪಿನ ಭಾಗವಾಗಿದೆ ಮತ್ತು ಫೋರ್ಡ್ ಮೋಟಾರ್ ಕಂಪನಿ ಜೊತೆಗೆ ಸಂಪರ್ಕ ಹೊಂದಿದೆ.

ಈ ಒಪ್ಪಂದವು ಹಿಂದಿನ ಐಪಿಎಲ್ ವಹಿವಾಟುಗಳನ್ನು ಮೀರಿಸುತ್ತದೆ. 2025ರಲ್ಲಿ ಟೊರೆಂಟ್ ಗ್ರೂಪ್ ಸುಮಾರು 5,025 ಕೋಟಿಗೆ ಗುಜರಾತ್ ಟೈಟಾನ್ಸ್‌ನಲ್ಲಿ ಶೇ.67ರಷ್ಟು ಪಾಲು ಪಡೆದಿತ್ತು ಈ ಮೂಲಕ ಫ್ರ್ಯಾಂಚೈಸಿ ಮೊತ್ತವನ್ನು ಸರಿಸುಮಾರು 7,500 ಕೋಟಿಗೆ ಏರಿಸಿತ್ತು. ಇದು ಈಗ ರಾಯಲ್ಸ್‌ನ ಮೊತ್ತಕ್ಕಿಂತ ಕಡಿಮೆಯಾಗಿದೆ.

ರಾಯಲ್ಸ್ ಅನ್ನು ಈ ಹಿಂದೆ ಮನೋಜ್ ಬದಾಲೆ ಅವರು ಎಮರ್ಜಿಂಗ್ ಮೀಡಿಯಾ ವೆಂಚರ್ಸ್ ಮೂಲಕ ಮೇಲ್ವಿಚಾರಣೆ ಮಾಡುತ್ತಿದ್ದರು. ಇದು ಸುಮಾರು ಶೇ.65 ರಷ್ಟು ಪಾಲನ್ನು ಹೊಂದಿತ್ತು. ಇತರ ಹೂಡಿಕೆದಾರರಲ್ಲಿ ರೆಡ್‌ಬರ್ಡ್ ಕ್ಯಾಪಿಟಲ್ ಪಾಲುದಾರರು ಮತ್ತು ಲಾಚ್ಲಾನ್ ಮುರ್ಡೋಕ್ ಸೇರಿದ್ದಾರೆ. ಕಳೆದ ವರ್ಷ ಪ್ರಾರಂಭವಾದ ಷೇರು ಮಾರಾಟ ಪ್ರಕ್ರಿಯೆಯನ್ನು ಹೂಡಿಕೆ ಬ್ಯಾಂಕ್ ದಿ ರೈನ್ ಗ್ರೂಪ್ ಮೇಲ್ವಿಚಾರಣೆ ಮಾಡಿತು.

# ನಗರ ಪಾಲಿಕೆ ಹಂತದಲ್ಲೇ ನೀರಿನ ಹೆಚ್ಚುವರಿ ಮಾಪನ ಪ್ರಕರಣಗಳ ತೀರುವಳಿ

**● ಚಾಮರಾಜ ಕ್ಷೇತ್ರ ಶಾಸಕ ಕೆ.ಹರೀಶ್‌ಗೌಡರ ಪ್ರಸ್ತಾಪಕ್ಕೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸ್ಪಷ್ಟನೆ ● ಅದಾಲತ್ ಮೂಲಕ ಅರ್ಜಿ ಸ್ವೀಕರಿಸಿ ಕ್ರಮ ವಹಿಸಲು ಸೂಚನೆ**

ಮೈಸೂರು, ಮಾ.24– ಮೈಸೂರಿನಲ್ಲಿ ಅರ್ಹ ಕಾರಣಗಳಿಂದ ಹೆಚ್ಚುವರಿ ನೀರಿನ ಮಾಪನ ದಾಖಲಾಗಿರುವ ಪ್ರಕರಣಗಳನ್ನು ನಗರ ಪಾಲಿಕೆ ಹಂತದಲ್ಲಿಯೇ ಪರಿಶೀಲಿಸಿ, ತೀರುವಳಿ ಮಾಡಲು ಕ್ರಮ ವಹಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.



ಕೆ.ಹರೀಶ್‌ಗೌಡ



ಭೈರತಿ ಸುರೇಶ್

ನೀರು ಸರಬರಾಜಿನ ಅವೈಜ್ಞಾನಿಕ ಮಾಪನದಿಂದಾಗಿ ಸಾರ್ವಜನಿಕರು ಪರಿತಪಿಸುತ್ತಿರುವ ಬಗ್ಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ವಿಧಾನಸಭೆಯಲ್ಲಿ ಸರ್ಕಾರದ ಗಮನ ಸೆಳೆದ ಹಿನ್ನೆಲೆಯಲ್ಲಿ ಸಚಿವರು ಈ ಸ್ಪಷ್ಟನೆ ನೀಡಿದ್ದಾರೆ.

ನನ್ನ ಕ್ಷೇತ್ರದಲ್ಲಿ ಮನೆ ಮನೆಗೆ ಮೇ.ಜಸ್ಕೋ ಸಂಸ್ಥೆ ವತಿಯಿಂದ ಕುಡಿಯುವ ನೀರಿನ ಸಂಪರ್ಕದ ಮೀಟರ್ ಅಳವಡಿಸಲಾಗಿದೆ. ಹೊಸ ಸಂಪರ್ಕ ಹಾಗೂ ಹಳೆಯ ಸಂಪರ್ಕಗಳ ಬೈಪಾಸ್‌ನೊಂದಿಗೆ ಮೀಟರ್ ಅನ್ನು ಎತ್ತರ ಮಟ್ಟದಲ್ಲಿ ಅಳವಡಿಸಿರುವುದರಿಂದ ಗಾಳಿಯಿಂದಲೂ ಮೀಟರ್ ಚಲಿಸುವ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುತ್ತಿವೆ. ಈ ಅವೈಜ್ಞಾನಿಕ ವ್ಯವಸ್ಥೆ ಸರಿಪಡಿಸದೆ ಅಧಿಕ ಮಾಪನ ದಾಖಲಾಗುತ್ತಿರುವುದರಿಂದ ಬಳಕೆದಾರರು ಶುಲ್ಕ ಪಾವತಿಸಲಾಗಿಲ್ಲ. ಆದ್ದರಿಂದ ನೀರಿನ ಅಧಿಕ ಶುಲ್ಕ ಹಾಗೂ ಬಡ್ಡಿಯನ್ನು ಒಂದು ಬಾರಿಗೆ ಮನ್ನಾ ಮಾಡುವ ಬಗ್ಗೆ ಕ್ರಮ ವಹಿಸುವಂತೆ ಕೆ.ಹರೀಶ್‌ಗೌಡರು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಭೈರತಿ ಸುರೇಶ್, ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೆ:ಜಸ್ಕೋ ಸಂಸ್ಥೆ ವತಿಯಿಂದ ಕುಡಿಯುವ ನೀರಿನ ಮೀಟರ್ ಅಳವಡಿಸಿ, ಹೊಸ ಸಂಪರ್ಕಗಳನ್ನು ನೀಡಲಾಗಿದೆ. ಹೊಸ ಹಾಗೂ ಹಳೆಯ ಸಂಪರ್ಕಗಳಿಂದ ನೀರನ್ನು ಪಡೆಯುವ ಉದ್ದೇಶದಿಂದ ಬೈಪಾಸ್ ಮಾಡಿಕೊಳ್ಳಲಾಗಿದೆ. ಇದರ ಪರಿಣಾಮವಾಗಿ ನೀರಿನ ಬಿಲ್ ಮೊತ್ತವು ಅಧಿಕವಾಗಿರುವ ಸಾಧ್ಯತೆ ಇದೆ. ಹೀಗೆ ಬೈಪಾಸ್ ಸಂಪರ್ಕದಿಂದ ಹೆಚ್ಚುವರಿ ಮಾಪನ ದಾಖಲಾಗಿರುವ ಪ್ರಕರಣಗಳ ಸಂಬಂಧ ಕ್ರಮ ವಹಿಸಲು ಸೂಚಿಸಲಾಗಿದೆ ಎಂದರು.

ಬೈಪಾಸ್ ಕಡಿತಗೊಳಿಸಿದ ನಂತರದ ಮೂರು ಮಾಹೆಯ ಸರಾಸರಿ ದಾಖಲಾತಿಯನ್ನು ಲೆಕ್ಕಾಚಾರ ಮಾಡಿ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅದಾಲತ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿ, ಅವುಗಳನ್ನು ಸಮರ್ಪಕವಾಗಿ ನಿರ್ಣಯಿಸಿ ತೀರುವಳಿ ಮಾಡಲು ಪಾಲಿಕೆ ವತಿಯಿಂದ ಕ್ರಮ ವಹಿಸಲಾಗುತ್ತಿದೆ. ಹಾಗೆಯೇ ಗಾಳಿಯಿಂದ ಚಲಿಸಿರುವ ನೀರಿನ ಮಾಪಕ ಪ್ರಕರಣಗಳಲ್ಲೂ ಕೂಡ 'ಯು' ಶೇಪ್‌ನಲ್ಲಿ ಮೀಟರ್ ಅಳವಡಿಸಿದ ನಂತರದ ಮೂರು ಮಾಹೆಯ ಸರಾಸರಿ ದಾಖಲಾತಿಯನ್ನು ಪೂರ್ವಾನ್ವಯವಾಗಿ ಲೆಕ್ಕಾಚಾರ ಮಾಡಿ ಅದಾಲತ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿ, ಪಾಲಿಕೆಯ ಹಂತದಲ್ಲಿ ಪರಿಶೀಲಿಸಿ, ತೀರುವಳಿ ಮಾಡಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

## ಸರ್ಕಾರಗಳ ಭರವಸೆಯಂತೆಯೇ ನಮಗ್ಯಾರಿಗೂ ಒಂದೇ ಒಂದು ಸಿಲಿಂಡರ್ ದೊರೆತಿಲ್ಲ

**ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಸ್ಪಷ್ಟನೆ**

ಮೈಸೂರು, ಮಾ.24(ಬಿಎಲ್‌ಯು)– ಶೇ.20ರಷ್ಟು ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಭರವಸೆ ಹುಸಿಯಾಗಿದೆ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಸೋಮವಾರದ ನಂತರ ಶೇಕಡ 20ರಷ್ಟು ಸಿಲಿಂಡರ್ ಸರಬರಾಜು ಮಾಡುತ್ತೇವೆ ಎಂದು ಎರಡು ಸರ್ಕಾರಗಳು ಆಶ್ವಾಸನೆ ನೀಡಿದ್ದವು. ಆದರೆ ಈ ತನಕ ಬೆಂಗಳೂರು, ಮೈಸೂರು ಸೇರಿದಂತೆ ಕರ್ನಾಟಕದ ಯಾವುದೇ ನಗರಕ್ಕೆ ಒಂದೇ ಒಂದು ಸಿಲಿಂಡರ್ ದೊರೆತಿಲ್ಲ ಎಂದು ಹೇಳಿದ್ದಾರೆ. ವಾಣಿಜ್ಯ ಸಿಲಿಂಡರ್ ಇಲ್ಲದೆ ಈಗಾಗಲೇ ನೂರಾರು ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಹೋಟೆಲ್ ಉದ್ಯಮ ತೀವ್ರವಾದ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ ಎಂದು ನಾರಾಯಣಗೌಡ ಆತಂಕ ವ್ಯಕ್ತಪಡಿಸಿದ್ದಾರೆ.

## 'ಸ್ವಸ್ಥ ಮೈಸೂರು' ಕಾರ್ಯಕ್ರಮಕ್ಕೆ ಪ್ರಮೋದಾದೇವಿ ಒಡೆಯರ್ ಚಾಲನೆ...



ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನಲ್ಲಿ ಸೋಮವಾರ ನಡೆದ 'ಸ್ವಸ್ಥ ಮೈಸೂರು' ಕಾರ್ಯಕ್ರಮವನ್ನು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಉದ್ಘಾಟಿಸಿದರು.

# ಕೆಎಂಎಫ್ ಇದೀಗ ಆರ್‌ಸಿಬಿ ತಂಡದ ಅಫಿಶಿಯಲ್ ಪಾರ್ಟ್‌ನರ್

**ಕೊಹ್ಲಿ, ಪಡಿಕಲ್‌ರಿಂದ ಉತ್ಪನ್ನಗಳ ಪ್ರಚಾರ**




ಬೆಂಗಳೂರು, ಮಾ.24– ಐಪಿಎಲ್ ಹಬ್ಬಕ್ಕೆ ದಿನಗಣನೆ ಶುರುವಾಗಿದೆ. ಹಾಲಿ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವೆ ಮೊದಲ ಪಂದ್ಯ ನಡೆಯಲಿದೆ. ಆರ್‌ಸಿಬಿ ಪಂದ್ಯ ನೋಡಲು ಅಭಿಮಾನಿಗಳು ಕಾತರರಾಗಿದ್ದಾರೆ. ಇದೇ ಸಂದರ್ಭದಲ್ಲಿ ಕನ್ನಡಿಗರ ಹೆಮ್ಮೆಯ ಬ್ರಾಂಡ್ ಕೆಎಂಎಫ್ 2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಪ್ರಾಯೋಜಕತ್ವ ನೀಡಿದೆ. ಈ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿವೆ.

2026ರ ಆವೃತ್ತಿಯಲ್ಲಿ ಕನ್ನಡಿಗರ ಹೆಮ್ಮೆಯ ಬ್ರಾಂಡ್ ಕೆಎಂಎಫ್ ಪ್ರಾಯೋಜಕತ್ವ ನೀಡುವ ಮೂಲಕ ಆರ್‌ಸಿಬಿಗೆ ಸಾಥ್ ನೀಡಿದೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ತಂಡ. ಹಾಗಾಗಿ ಪ್ರಾಯೋಜಕತ್ವ ನೀಡುವ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಪರಿಚಯಕ್ಕೆ ಮುಂದಾಗಿದೆ.

ಈ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, 2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ ನೀಡಿದೆ. ಈ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿವೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ತಂಡ, ಹಾಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನಗಳು ಪರಿಚಯವಾಗಲಿವೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ದೇವದತ್ತ ಪಡಿಕಲ್‌ರಿಂದ ಕೆಎಂಎಫ್ ಉತ್ಪನ್ನ ಪ್ರಚಾರಕ್ಕೆ ಮುಂದಾಗಿದ್ದೇವೆ. 4 ಕೋಟಿ ರೂ ವೆಚ್ಚದಲ್ಲಿ KMF ಒಂದು ವರ್ಷದ ಟೆಂಡರ್ ಪಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಇನ್ನು ಇರಾನ್ ಹಾಗೂ ಅಮೆರಿಕ, ಇಸ್ರೇಲ್ ನಡುವಿನ ಯುದ್ಧದಿಂದ ನಂದಿನಿ ಉತ್ಪನ್ನಗಳಿಗೆ ಎಫೆಕ್ಟ್ ವಿಚಾರವಾಗಿ ಮಾತನಾಡಿದ ಅವರು, ಯುದ್ಧದಿಂದ ಹಾಲಿನ ಮಾರಾಟದಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. 4–5 ಸಾವಿರ ಲೀಟರ್ ಹಾಲು ಮಾರಾಟ ಮಾತ್ರ ಕಡಿಮೆಯಾಗಿದೆ. ಯುದ್ಧದಿಂದಾಗಿ ನಂದಿನಿ ಉತ್ಪನ್ನಗಳಿಗೆ ದೊಡ್ಡ ಎಫೆಕ್ಟ್ ಆಗಿಲ್ಲ ಎಂದು ಸ್ಪಷ್ಟನೆ ನೀಡಿದರು.

ಟಿಟಿಡಿ ತುಪ್ಪದ ಟೆಂಡರ್‌ನಲ್ಲಿ ಮಾತುಕಥೆ ನಡೆದಿದೆ. ಟೆಂಡರ್ ಹಾಕಿದ್ದೇವೆ ಇನ್ನು ಅಂತಿಮ ಆಗಿಲ್ಲ. ನಮ್ಮಲ್ಲಿ ಉತ್ಪಾದನೆ ಸಾಕಷ್ಟಿದೆ. ಟಿಟಿಡಿಗೆ ಬೇಕಾದಷ್ಟು ತುಪ್ಪ ಪೂರೈಕೆ ಮಾಡಲು ಶಕ್ತವಾಗಿದ್ದೇವೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಹೇಳಿದ್ದಾರೆ.

ಈ ಕುರಿತಾಗಿ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದು, ಕರ್ನಾಟಕದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಕಳೆದ ಐಪಿಎಲ್ ಸೀಸನ್‌ನ ಚಾಂಪಿಯನ್ ತಂಡ ಆರ್‌ಸಿಬಿಯ ಅಧಿಕೃತ ಡೈರಿ ಪಾಲುದಾರನಾಗಿದೆ. ನಂದಿನಿಯ ವಿಶ್ವಾಸಾರ್ಹತೆ ಮತ್ತು ಆರ್‌ಸಿಬಿಯ ಕ್ರೀಡಾ ಬದ್ಧತೆ ಈ ಬಾರಿಯ ಐಪಿಎಲ್‌ನ ಆಕರ್ಷಣೆಯ ಕೇಂದ್ರಬಿಂದುವಾಗಲಿದೆ ಎಂದಿದ್ದಾರೆ.

# ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆ ಅವಶ್ಯ

**● ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್.ಪಿ.ಮಂಜುನಾಥ್ ಸಲಹೆ ● ಪ್ರತಿಭಾವಂತ ವಿದ್ಯಾರ್ಥಿಗಳು ಪ್ರತಿಭೆ ಮೆರೆಯಲು ಸಾಕಷ್ಟು ಅವಕಾಶವಿದೆ**

ಮೈಸೂರು, ಮಾ.24(ಎಂಟಿವೈ)– ಸ್ಪರ್ಧಾತ್ಮಕ ಯುಗದಲ್ಲಿ ಸಾಧನೆ ಮಾಡಬೇಕಾದರೆ ವಿದ್ಯಾರ್ಥಿಗಳು ಕೇವಲ ಶಿಕ್ಷಣಕ್ಕೆ ಮಾತ್ರ ಸೀಮಿತಗೊಳ್ಳದೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಕೌಶಲ್ಯ, ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ.ಎಸ್.ಪಿ. ಮಂಜುನಾಥ್ ಸಲಹೆ ನೀಡಿದ್ದಾರೆ.



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ.ಎಸ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 'ಕಲಾಸಂಭ್ರಮ–2026: ವರ್ಧಿನಿ– ಸೃಜನಶೀಲತೆಯ ಬೆಳಕು' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳನ್ನು ಪಠ್ಯಕ್ಕೆ ಮಾತ್ರ ಸೀಮಿತರನ್ನಾಗಿಸಿ, ಅವರ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ. ಹಾಗಾಗಿ ಶಿಕ್ಷಣದಷ್ಟೇ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಕೌಶಲ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸಿಕೊಳ್ಳುವಂತೆ ಪ್ರೋತ್ಸಾಹ ನೀಡಬೇಕಾಗಿದೆ. ಈ ಹಿಂದೆ ವಿದ್ಯಾರ್ಥಿಗಳು ಸಾಂಸ್ಕೃತಿಕ, ಕ್ರೀಡೆ, ಶೈಕ್ಷಣಿಕ, ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಳ್ಳುತಿದ್ದರು. ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಅನಾವರಣ ಮಾಡಿಕೊಳ್ಳಲು ಸಾಕಷ್ಟು ಅವಕಾಶಗಳಿದ್ದವು. ಪ್ರಸ್ತುತದಲ್ಲಿ ಶೈಕ್ಷಣಿಕವಾಗಿ ಮಾತ್ರ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತಿದ್ದು, ಪಠ್ಯೇತರ ಚಟುವಟಿಕೆಗಳಿಂದ ದೂರ ಉಳಿಯುತ್ತಿದ್ದಾರೆ ಎಂದರು.

ಪ್ರಸ್ತುತ ಸೆಮಿಸ್ಟರ್ ಪದ್ಧತಿಯು ಶಿಕ್ಷಣದ ವ್ಯವಸ್ಥೆಯಿದ್ದು, ವಿದ್ಯಾರ್ಥಿಗಳಿಗೆ ಕೇವಲ ಕಲಿಕೆ ಮಾತ್ರ ಸೀಮಿತರಾಗುವಂತಾಗಿದೆ. ವಿದ್ಯಾರ್ಥಿಗಳಲ್ಲಿ ಪ್ರತಿಭೆ ಅನಾವರಣ, ನಾಯಕತ್ವದ ಗುಣಗಳು ಕುಸಿಯುತ್ತಿವೆ. ಹಿಂದೆ ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳು ಹೆಚ್ಚು ಕ್ರಿಯಾಶೀಲರಾಗಿ, ಹಲವು ರಂಗಗಳಲ್ಲಿ ತಮ್ಮನ್ನು ಪರಿಚಯಿಸಿಕೊಂಡು ದೊಡ್ಡ ಮಟ್ಟದ ಸಾಧನೆ ಮಾಡಿದ್ದಾರೆ. ಕಾಲೇಜು ಹಂತಗಳಲ್ಲಿ ಮಾತ್ರ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಹೊರತರಲು ಅವಕಾಶ ದೊರೆಯುತ್ತದೆ. ಅಂತಹ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಚಿತ್ರ ನಟಿ ಅಕ್ಷತಾ ಪಾಂಡವಪುರ ಮಾತನಾಡಿ, ಜೆಎಸ್‌ಎಸ್ ಸಂಸ್ಥೆಯು ನನ್ನ ಕಲಾವಿದ ಬದುಕಿಗೆ ಹೆಚ್ಚು ಒತ್ತು ನೀಡಿತ್ತು. ಕುಟುಂಬದಲ್ಲಿ ಸಾಕಷ್ಟು ನೊಂದು, ಚಿಕ್ಕ ವಯಸ್ಸಿನಲ್ಲಿ ತಂದೆ ಕಳೆದುಕೊಂಡು, ಕಂಗಾಲಾಗಿದ್ದೆ. ಮದುವೆ ಮಾಡುತ್ತಾರೆ ಎಂದು ತಪ್ಪಿಸಿಕೊಳ್ಳಲು ಕಾಲೇಜಿಗೆ ಸೇರಿದೆ. ಬಳಿಕ ಕಾಲೇಜಿನಲ್ಲಿ ಸ್ನೇಹಿತರ ಸಂಗವಿಲ್ಲದೇ ಒಬ್ಬಂಟಿ ಎನಿಸುತಿತ್ತು. ಕಾಲೇಜಿನಲ್ಲಿ ಓದಲು ಕಷ್ಟವಾಗುತಿತ್ತು. ಓದನ್ನೇ ಕೈ ಬಿಡಲು ಮುಂದಾದೆ, ಪ್ರಾಧ್ಯಾಪಕರ ಪ್ರೋತ್ಸಾಹದಿಂದ ಓದು ಮುಂದುವರೆಸಿದೆ. ಕಾಲೇಜು ದಿನಗಳಲ್ಲಿ ಶಿಕ್ಷಣ, ಬದುಕು ಸಾಗಿಸಲು ಪಾರ್ಟ್ ಟೈಮ್ ಕೆಲಸಕ್ಕೆ ಸೇರಿಕೊಂಡಿದ್ದೆ ಎಂದು ತಾವು ನಡೆದು ಬಂದ ಹಾದಿಯನ್ನು ಸ್ಮರಿಸಿಕೊಂಡರು.

ಕಾಲೇಜು ದಿನಗಳಲ್ಲಿ ಮೈಸೂರು ರಂಗಾಯಣ ನಡೆಸುವ ಕಾಲೇಜು ರಂಗೋತ್ಸವದಲ್ಲಿ ಭಾಗಿಯಾಗಿ ನಾಟಕ, ಕಲೆಯಲ್ಲಿ ತೊಡಗಿಸಿಕೊಂಡೆ ಎಂದು ಅವರ ರಂಗಭೂಮಿ, ಸಿನಿಮಾ ಅನುಭವಗಳನ್ನು ಹಂಚಿಕೊಂಡರು. ವಿದ್ಯಾರ್ಥಿ ದೆಸೆಯಲ್ಲಿ ಕಲೆಯ ವಿವಿಧ ಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಕ್ರೀಡಾ ಮನೋಭಾವವನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳು ವೇದಿಕೆಗಳನ್ನು ಏರುವುದು ನಿಜವಾದ ಯಶಸ್ಸಿನ ಗೆಲುವು ಎಂದು ತಿಳಿಸಿದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ.ರೇಚಣ್ಣ, ಕಾರ್ಯಕ್ರಮ ಸಂಯೋಜಕ ಹೊನ್ನಶೆಟ್ಟಿ ವೇದಿಕೆಯಲ್ಲಿ ಇದ್ದರು.ಚಂದನ ಮತ್ತು ತಂಡದವರು ಪ್ರಾರ್ಥಿಸಿದರು. ಎಸ್.ಸಹನಾ.

ಸ್ವಾಗತಿಸಿದರು. ಸಂಜನಾ ವಂದಿಸಿದರು. ಎಲ್. ಸಂಜನಾ ಕಾರ್ಯಕ್ರಮ ನಿರೂಪಿಸಿದರು. ಬಳಿಕ ನಡೆದ ಸ್ಪರ್ಧಾ ಕಾರ್ಯಕ್ರಮಗಳಾದ ಭಾವನವೀನ, ರಾಗನಿನಾದ, ವರ್ಣ ಚಿತ್ತಾರ, ರಸಪಾಕ, ಹೆಜ್ಜೆ ಗೆಜ್ಜೆ ಮತ್ತು ವಾಗ್ ವಿಲಾಸದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ಕೌಶಲ್ಯಯುತ ಬೆಳವಣಿಗೆಯ ಅಗತ್ಯವಿದೆ

## ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜೆ. ಬೆಟಸೂರ ಮಠ ಅಭಿಮತ

**ಮೈಸೂರು:** ವಿದ್ಯಾರ್ಥಿಗಳು ಬಹುಮುಖಿ ಚಿಂತನೆ, ತಾಂತ್ರಿಕ ಮತ್ತು ವೈಜ್ಞಾನಿಕ ಮನೋಭಾವ, ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಈ ಸಮಾಜ ಹಾಗೂ ದೇಶಕ್ಕೆ ಆದರ್ಶಪ್ರಾಯರಾಗಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ಕೌಶಲ್ಯಯುತ ಬೆಳವಣಿಗೆಯ ಅಗತ್ಯವನ್ನು ಬೇಡುತ್ತದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜೆ. ಬೆಟಸೂರ ಮಠರವರು ನುಡಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನಪರ್ವ 2026ರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಶೈಕ್ಷಣಿಕ ಅವಧಿಯಲ್ಲಿ ಕಲಿಕೆಗೆ ಪೂರಕವಾದ ಬಹುಮುಖಿ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಪೂರ್ಣವಾಗಿ ಕಲಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಮಾತ್ರ ವಿದ್ಯಾರ್ಥಿಗಳಿಗೆ ಯಶಸ್ಸು ಸಾಧ್ಯ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ಪ್ರತಿಭೆಯನ್ನು ಹೊಂದಿರುತ್ತಾನೆ. ಅದನ್ನು ಹೊರಹಾಕುವ ಸೂಕ್ತ ವೇದಿಕೆಗಾಗಿ ಕಾಯುತ್ತಿರುತ್ತಾನೆ.

ಅಂತಹವರಿಗೆ ಈ ಕಾರ್ಯಕ್ರಮಗಳು ಸೂಕ್ತ ವೇದಿಕೆಗಳಾಗಬಲ್ಲವು. ವಿದ್ಯಾರ್ಥಿಗಳು ಹಿಂಜರಿಕೆ ಸ್ವಭಾವದಿಂದ ಹೊರಬಂದು ಇಂತಹ ಕಾರ್ಯಕ್ರಮಗಳ ಸದುಪಯೋಗವನ್ನು ಪಡೆದುಕೊಳ್ಳಬೇಕು. ತಮ್ಮ ಗುರಿಗಳೊಂದಿಗೆ ಸೂಕ್ತವಾದ ಕೌಶಲ್ಯಗಳನ್ನು ರೂಢಿಸಿಕೊಂಡಲ್ಲಿ ಮಾತ್ರವೇ ಇಂದು ಗುರಿ ಸಾಧನೆ ಸಾಧ್ಯ. ವಿದ್ಯಾರ್ಥಿಗಳು ಪರಂಪರೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಾಯಭಾರಿಗಳು. ಸಮಾಜಮುಖಿ ಅನುಭವಗಳು ಹಾಗೂ ಸಾಂಸ್ಕೃತಿಕ ಅರಿವು ಅವರಿಗೆ ಸಾಮಾಜಿಕ ಜೀವನದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯಗಳನ್ನು ಬೆಳೆಸುತ್ತದೆ ಎಂದು ನುಡಿದರು.




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನಪರ್ವ 2026ರ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜೆ. ಬೆಟಸೂರ ಮಠರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಖ್ಯಾತ ಶಿಲ್ಪಿಗಳಾದ ಅರುಣ್ ಯೋಗಿರಾಜ್‌ರವರು ಮಾತನಾಡಿ, ವಿದ್ಯಾರ್ಥಿಗಳ ಗುರಿಯ ದಾರಿಯು ಶ್ರಮದಾಯಕ ಹಾಗೂ ಅನೇಕ ಸವಾಲುಗಳಿಂದ ಕೂಡಿದ್ದರೂ, ಛಲ ಬಿಡದೆ ಮುನ್ನಡೆಯಬೇಕು. ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಬೆಳೆಯಬೇಕು. ತಮಗೆ ಸಿಕ್ಕ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಸಮಯ ಬಹಳ ಮುಖ್ಯವಾದ ಸಂಪತ್ತು. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು. ದೇಶದ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲಿ ಯುವ ಜನಾಂಗದ ಪ್ರಾತಿನಿಧ್ಯ ಬಹಳ ಮುಖ್ಯ. ಆಯ್ದುಕೊಂಡ ಮಾರ್ಗ, ವೃತ್ತಿ ಶ್ರದ್ಧೆ ಇಂದು ಎಲ್ಲರೂ ರೂಢಿಸಿಕೊಳ್ಳಬೇಕಾದ ಗುಣ. ಈ ಕಾಲೇಜು ಪಠ್ಯೇತರ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇಂದಿನ ನನ್ನ ಸಾಧನೆಗೆ ಈ ಪ್ರೋತ್ಸಾಹವೂ ನೆರವಾಗಿದೆ. ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಲು ಸಾಧ್ಯವಾಗುತ್ತದೆ. ನನ್ನಂತಹ ನೂರಾರು ಸಾಧಕರಿಗೆ ಈ ಕಾಲೇಜು ಪ್ರೇರಣೆ, ಪ್ರೋತ್ಸಾಹಗಳನ್ನು ನೀಡಿ ಬೆಂಬಲಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಅವರು ಮಾತನಾಡಿ, ಕಾಲೇಜುಗಳಲ್ಲಿ ನಡೆಯುವ ಇಂತಹ ಶೈಕ್ಷಣಿಕ ಹಬ್ಬಗಳಿಗೆ ಒಂದು ಪರಂಪರೆಯಿದೆ. ಹಿಂದಿನ ಗುರುಕುಲ ಶಿಕ್ಷಣ ಪದ್ಧತಿಗಳಲ್ಲಿ ಪಾಶ್ಚಾತ್ಯರಲ್ಲಿ ಇದು ಹತ್ತೊಂಬತ್ತನೆಯ ಶತಮಾನದ ಅಂತ್ಯದಿಂದ ಮುಖ್ಯವಾಗಿ ಕಾಣಿಸಿತು. ಭಾರತದಲ್ಲಿ 1960–70ರ ದಶಕಗಳಲ್ಲಿ, ಮೊದಲು ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಇದು ಕಾಣಿಸಿಕೊಂಡು ಅನಂತರದಲ್ಲಿ ಕಾಲೇಜು ಮಟ್ಟಕ್ಕೆ ವ್ಯಾಪಿಸಿತು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜ್ಞಾನಪರ್ವ ಕಾರ್ಯಕ್ರಮಗಳ ಸಂಚಾಲಕರು ಹಾಗೂ ಐಕ್ಯುಎಸಿ ಸಂಯೋಜನಾಧಿಕಾರಿಗಳಾದ ಡಾ. ಎನ್. ರಾಜೇಂದ್ರಪ್ರಸಾದ್ ಉಪಸ್ಥಿತರಿದ್ದರು.

## ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ. 24– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮಾ. 26 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.



### ನಮೂನೆ ಸಂಖ್ಯೆ URC-2

ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ ನೋಂದಣಿ ಕುರಿತು ಸೂಚನೆ ನೀಡುವ ಜಾಹೀರಾತು [ಕಂಪನಿಗಳ ಕಾಯ್ದೆ, 2013ರ ವಿಭಾಗ 374(ಬಿ) ಮತ್ತು ಕಂಪನಿಗಳ (ನೋಂದಣಿ ಮಾಡಲು ಅಧಿಕಾರ) ನಿಯಮಗಳು, 2014 ರ ನಿಯಮ 4(1) ರ ಪ್ರಕಾರ]

ಕಂಪನಿಗಳ ಕಾಯ್ದೆ, 2013ರ ವಿಭಾಗ 366 ರ ಉಪ–ವಿಭಾಗ (2)ರ ಅನುಸಾರವಾಗಿ, ಹದಿನೈದು ದಿನಗಳ ನಂತರ ಆದರೆ ಇನ್ನು ಮುಂದೆ ಮೂವತ್ತು ದಿನಗಳ ಅವಧಿ ಮುಗಿಯುವ ಮೊದಲು, ಕರ್ನಾಟಕ ದಲ್ಲಿರುವ 'ಇ' ವಿಂಗ್, 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034 ರ ರಿಜಿಸ್ಟ್ರಾರ್‌ಗೆ ಅರ್ಜಿ ಸಲ್ಲಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ PRUDENT PARTNERS LLP ಅಥವಾ LLP ಅನ್ನು ಕಂಪನಿಗಳ ಕಾಯ್ದೆ 2013 ರ ಅಧ್ಯಾಯ XXI ರ ಭಾಗ 1 ರ ಅಡಿಯಲ್ಲಿ, ಷೇರುಗಳಿಂದ ಸೀಮಿತವಾದ ಕಂಪನಿಯಾಗಿ ನೋಂದಾಯಿಸಬಹುದು. ಕಂಪನಿಯ ಪ್ರಮುಖ ಉದ್ದೇಶಗಳು ಡೇಟಾ ಟಿಪ್ಪಣಿ ಮತ್ತು ಬಿಪಿಎಂ ಸೇವೆಗಳು. ಪ್ರಸ್ತಾವಿತ ಕಂಪನಿಯ ಕರಡು ಜ್ಞಾಪಕ ಪತ್ರ ಮತ್ತು ಸಂಘದ ಲೇಖನಗಳ ಪ್ರತಿಯನ್ನು ಯಾವುದೇ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9:30 ರಿಂದ ಸಂಜೆ 6:00 ರವರೆಗೆ ಕೆಲಸದ ಸಮಯದಲ್ಲಿ ಸಂಖ್ಯೆ 667, ನೃಪತುಂಗ ರಸ್ತೆ, ಕುವೆಂಪುನಗರ (ಮೈಸೂರು), ಮೈಸೂರು, ಕರ್ನಾಟಕ, ಭಾರತ 570023 ರಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು.

ಈ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವ ಯಾವುದೇ ವ್ಯಕ್ತಿಯು ಈ ಸೂಚನೆ ಪ್ರಕಟವಾದ ದಿನಾಂಕದಿಂದ ಇಪ್ಪತ್ತೊಂದು ದಿನಗಳ ಒಳಗೆ ಕೇಂದ್ರ ನೋಂದಣಿ ಕೇಂದ್ರ (CRC), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (IICA), ಪ್ಲಾಟ್ ಸಂಖ್ಯೆ 6, 7 & 8, ಸೆಕ್ಟರ್–5, IMT ಮಾನೇಸರ್, ಜಿಲ್ಲೆ ಗುರ್ಗಾಂವ್, ಹರಿಯಾಣ–122050 ರ ರಿಜಿಸ್ಟ್ರಾರ್‌ಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಯನ್ನು ತಿಳಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಕಂಪನಿಯು ತನ್ನ ನೋಂದಾಯಿತ ಕಚೇರಿ ಸಂಖ್ಯೆ 667, ನೃಪತುಂಗ ರಸ್ತೆ, ಕುವೆಂಪುನಗರ (ಮೈಸೂರು), ಮೈಸೂರು, ಕರ್ನಾಟಕ, ಭಾರತ 570023 ನಲ್ಲಿ ಪ್ರತಿಯನ್ನು ಹೊಂದಿರಬೇಕು. ದಿನಾಂಕ ಮಾರ್ಚ್ 25, 2026 ರಂದುಮಾಡಲಾಗಿದೆ.

ಪ್ರುಡೆಂಟ್ ಪಾರ್ಟ್‌ನರ್ಸ್
ಎಲ್‌ಎಲ್‌ಪಿಗಾಗಿ ಮತ್ತು ಪರವಾಗಿ,
ಸಹಿ/– ಸಿಂಧುಶ್ರೀ ಮೈಸೂರು ತುಳಸಿರಾಂ
ಡಿಪಿಐಎನ್:08516589




### ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



### ಮೊದಲನೇ ವರ್ಷದ ಸವಿನೆನಪು



**ಶ್ರೀಮತಿ ಜಯಮ್ಮ**
ನಿಧನ : 25-03-2025

ನಿಮ್ಮ ಆತ್ಮ ನಮಗೆಲ್ಲಾ ಚೇತನವಾಗಿದೆ
ನೀವು ದೂರ ಹೋಗಿರಬಹುದು–ನಮ್ಮ ಮನಸ್ಸಿನಿಂದಲ್ಲಾ
ನಮ್ಮ ಅಂತರಂಗದಲ್ಲಿ ಸದಾ ನೆನಪಾಗಿರುವಿರಿ
ನಿಮ್ಮ ನೆನಪು ದಿನವೂ–ಕ್ಷಣವೂ ಎದುರುಗೊಳ್ಳುತ್ತದೆ
ನಮಗದೇ ಚೈತನ್ಯವೂ ಹಾಗೂ ಸ್ಫೂರ್ತಿಯೂ
ನಿಮ್ಮ ಹಾರೈಕೆ ನಮಗೆಂದೆಂದಿಗೂ ಇರಲಿ
ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುವ
ಗಂಡುಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು,
ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈಅಪ್ರಾ/ವ.ಕ-3/ /2025-26 ದಿನಾಂಕ: 24.03.2026

**ಪತ್ರಿಕಾ ಪ್ರಕಟಣೆ**

ಶ್ರೀ ತಿಮ್ಮಯ್ಯ.ಎಂ.ಎಂ ಬಿನ್ ಶ್ರೀ ಎಂ.ಕೆ.ಮುತ್ತಣ್ಣ ರವರಿಗೆ ಮೈಸೂರು ನಗರದ ವಿಜಯನಗರ 4ನೇ ಹಂತ 2ನೇ ಫೇಸ್ ಬಡಾವಣೆಯ ನಿವೇಶನ ಸಂಖ್ಯೆ: 6218 ಅಳತೆ 9.00 X 12.00 ಮೀ ನಿವೇಶನವು ಪ್ರಾಧಿಕಾರದಿಂದ ದಿನಾಂಕ:08.09.1994 ರಂದು ಮಂಜೂರಾಗಿರುತ್ತದೆ. ನಂತರ ದಿನಾಂಕ: 25.08.1997 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ಹಾಗೂ ದಿನಾಂಕ:08.06.2012 ರಂದು ಖಾತಾ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ ತಿಮ್ಮಯ್ಯ.ಎಂ.ಎಂ ರವರು ದಿನಾಂಕ:13.03.2020 ರಂದು ಮರಣ ಹೊಂದಿರುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ. ಬೃಹತ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರಿಂದ ಮರಣ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಹಾಗೂ ಉಪ ತಹಶೀಲ್ದಾರ್ ಬೆಂಗಳೂರು ಹೋಬಳಿ ಬೆಂಗಳೂರು (ಉತ್ತರ) ತಾಲ್ಲೂಕು ಮತ್ತು ಜಿಲ್ಲೆ ರವರು ನೀಡಿರುವ ವಂಶವೃಕ್ಷ ಪ್ರಮಾಣ ಪತ್ರದ ಸಂಖ್ಯೆ: RD1219267343626 ದಿನಾಂಕ: 28.10.2025 ಅನ್ನು ಸಲ್ಲಿಸಿರುತ್ತಾರೆ. ಮಂಜೂರಾತಿದಾರರ ಪತ್ನಿಯಾದ ಶ್ರೀಮತಿ.ಜಾನಕಿ.ಎಂ.ಟಿ ರವರು ದಿನಾಂಕ: 26.08.2023 ಮರಣ ಹೊಂದಿರುತ್ತಾರೆ.

ಲೇಟ್ ತಿಮ್ಮಯ್ಯ.ಎಂ.ಎಂ ರವರ ಮಗಳಾದ ಶ್ರೀಮತಿ.ಎಂ.ಟಿ.ದಿವ್ಯ ರವರು ಪೌತಿ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ಪೌತಿ ವರ್ಗಾವಣೆ ನೀಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಆಚಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ವಿಶೇಷ ತಹಸೀಲ್ದಾರ್
ವಲಯ ಕಛೇರಿ-3
ಮೈಸೂರು ಅಭಿವೃದ್ಧಿ ಪ್ರಾಧಿಕಾರ
ಮೈಸೂರು

### ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್‌ರವರ ನ್ಯಾಯಾಲಯ ನಂಜನಗೂಡು

ಅಸಲು ದಾವಾ ಸಂಖ್ಯೆ 638/2013

ವಾದಿ: 1) ಪರಮೇಶ ಬಿನ್ ವೆಂಕಟೇಶ ವಯಸ್ಸು ಸುಮಾರು 19 ವರ್ಷ. 2) ದಿವಾಕರ ವಿ ಬಿನ್ ವೆಂಕಟೇಶ ವಯಸ್ಸು ಸುಮಾರು 21 ವರ್ಷ 3) ರಾಣಿ ಬಿನ್ ವೆಂಕಟೇಶ ವಯಸ್ಸು ಸುಮಾರು 24 ವರ್ಷ 4) ವಿನೋದಮ್ಮ ಕೋಂ ವೆಂಕಟೇಶ ವಯಸ್ಸು ಸುಮಾರು 47 ವರ್ಷ. ಎಲ್ಲರ ವಾಸ ಹುಚ್ಚಗಣಿ ಗ್ರಾಮ, ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲೂಕು

ವಿರುದ್ಧ

ಪ್ರತಿವಾದಿಗಳು : 1) ವೆಂಕಟೇಶ್ ಬಿನ್ ಲೇಟ್ ಲಿಂಗೇಗೌಡ ವಯಸ್ಸು ಸುಮಾರು 58 ವರ್ಷ 2) ಚಿನ್ನಸ್ವಾಮಿ ಗೌಡ ಬಿನ್ ಲೇಟ್ ಲಿಂಗೇಗೌಡ, ವಯಸ್ಸು ಸುಮಾರು 65 ವರ್ಷ, 3) ವನಜಾಕ್ಷಿ ಕೋಂ ಚಿನ್ನಸ್ವಾಮಿಗೌಡ ವಯಸ್ಸು ಸುಮಾರು 58 ವರ್ಷ, 4) ಧನಂಜಯ ಬಿನ್ ಚಿನ್ನಸ್ವಾಮಿ ಗೌಡ ವಯಸ್ಸು ಸುಮಾರು 32 ವರ್ಷ. ಎಲ್ಲರ ವಾಸ ಹುಚ್ಚಗಣಿ ಗ್ರಾಮ, ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲೂಕು ಹೆಚ್ಚುವರಿ ಪ್ರತಿವಾದಿಗಳು: 5(ಎ) ದೇವಿರಮ್ಮ ಕೋಂ ಆರ್ ಮಹದೇವಯ್ಯ ವಯಸ್ಸು ಸುಮಾರು 78 ವರ್ಷಗಳು 5(ಬಿ) ಗಿರೀಶ ಬಿನ್ ಲೇಟ್ ಆರ್ ಮಹದೇವಯ್ಯ, ವಯಸ್ಸು ಸುಮಾರು 69 ವರ್ಷಗಳು 5(ಸಿ) ಉಮಾದೇವಿ, ಬಿನ್ ಲೇಟ್ ಆರ್ ಮಹದೇವಯ್ಯ, ವಯಸ್ಸು ಸುಮಾರು 55 ವರ್ಷಗಳು 5(ಡಿ) ಮೀನಾಕ್ಷಿ ಬಿನ್ ಲೇಟ್ ಆರ್. ಮಹದೇವಯ್ಯ ವಯಸ್ಸು ಸುಮಾರು 53 ವರ್ಷಗಳು. ಎಲ್ಲರ ವಾಸ ಬಸಾಪುರ ಗ್ರಾಮ, ಕಾಟೂರು ಪೋಸ್ಟ್, ಹುಲ್ಲಹಳ್ಳಿ ಹೋಬಳಿ ನಂಜನಗೂಡು ತಾಲೂಕು 6. ಹೆಚ್.ಜಿ. ಮಂಜುಳಾ. ಕೋಂ ಡಿ. ಕೃಷ್ಣ ವಯಸ್ಸು ಸುಮಾರು 44 ವರ್ಷಗಳು ವಾಸ 1089ನೇ 3ನೇ ಹಂತ, 12ನೇ ಕ್ರಾಸ್, ವಿಜಯನಗರ, ಮೈಸೂರು.

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ವಾದಿಗಳು ಪ್ರತಿವಾದಿಗಳು ನಿಮ್ಮ ವಿರುದ್ಧ ಮತ್ತು ಪ್ರತ್ಯೇಕ ಸ್ವಾ ಆದೇಶ ಕೋರಿ ನಂಜನಗೂಡಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 638/2013 ನ್ನು ಸಲ್ಲಿಸಿರುತ್ತಾರೆ. ಸದರಿ ದಾವಾದಲ್ಲಿ ಹೆಚ್ಚುವರಿ ಪ್ರತಿವಾದಿ (5ಎ) ರಿಂದ 5(ಡಿ) ಮತ್ತು 6ನೇ ಯವರಾದ ನೀವು ಉದ್ದೇಶಪೂರ್ವಕವಾಗಿ ದಾವಾದ ಸಮನ್ಸ್‌ಗಳನ್ನು ತೆಗೆದುಕೊಳ್ಳದೆ ತಪ್ಪಿಸಿಕೊಂಡಿರುತ್ತೀರ ಘನ ನ್ಯಾಯಲಯದಿಂದ ಸಮನ್ಸ್ ನೀಡಿದರು ಸಹ ಜಾರಿಯಾಗದೆ ವಾಪಸ್ ಬಂದಿರುತ್ತದೆ. ಆದ್ದರಿಂದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ಪ್ರಕರಣದಲ್ಲಿ ಮುಂದಿನ ಹಿಯರಿಂಗ್‌ನ್ನು ದಿನಾಂಕ:23/04/26 ರಂದು ನ್ಯಾಯಾಲಯವು ನಿಗಧಿ ಮಾಡಿರುತ್ತದೆ ಆದ್ದರಿಂದ ಸದರಿ ದಿನಾಂಕದಂದು ನೀವು ಸರಿಯಾಗಿ ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಘನ ನ್ಯಾಯಾಲಯದಲ್ಲಿ ನೀವು ಹಾಜರಾಗಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದು ತಪ್ಪಿದಲ್ಲಿ ದಾವಾವನ್ನು ಏಕಪಕ್ಷಿಯವಾಗಿ ತೀರ್ಮಾನಿಸಲಾಗುವುದು ತಿಳಿಯುವುದು.

ಸಹಿ/– ಸ್ವಾತಿ ಎಂ ಎಸ್
ವಾದಿಗಳ ಪರ ವಕೀಲರು, ನಂಜನಗೂಡು
ದಿನಾಂಕ: 10–03–2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ನಂಜನಗೂಡು

### ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ

**ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ.**

ಬಿಳಿಗಿರಿರಂಗನಬೆಟ್ಟ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ 571441. ದೂರವಾಣಿ ಸಂಖ್ಯೆ :08226–244009.

ಸಂಖ್ಯೆ : ಬಿ.ಆರ್.ಟಿ/ಸಿಆರ್/65/2025–26 ದಿನಾಂಕ : 23.03.2026

**ಟೆಂಡರ್ ಇ–ಪ್ರಕಟಣೆ (2ನೇ ಕರೆ) (ದ್ವಿ ಲಕೋಟೆ ಪದ್ಧತಿಯಲ್ಲಿ)**

( ಇ–ಪ್ರೊಕ್ಯೂರೆಂಟ್ ಪೋರ್ಟಲ್ ಮುಖಾಂತರ)

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ ದೇವಾಲಯದ ವ್ಯಾಪ್ತಿಯಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ವ್ಯಕ್ತಿ/ಸಂಸ್ಥೆಗಳಿಂದ ಕೆ.ಟಿ.ಪಿ.ಪಿ ನಿಯಮಗಳಿಗನುಸಾರ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. 1) ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ವ್ಯಾಪ್ತಿಯಲ್ಲಿ ಲಾಡು ತಯಾರಿಸಿ ಮಾರಾಟ ಮಾಡುವ ಸೇವಾಹಕ್ಕು ಟೆಂಡರ್, ಟೆಂಡರ್‌ಗಿಟ್ಟ ಮೊತ್ತ ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 0.50 ಲಕ್ಷಗಳು, ಟೆಂಡರ್‌ನ ಕಾಲಾವಧಿ 12 ತಿಂಗಳು, 2) ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯಕ್ಕೆ ಪ್ರವೇಶಿಸುವ ವಾಹನಗಳಿಗೆ ವಾಹನ ಪ್ರವೇಶ ಶುಲ್ಕ ವಸೂಲಾತಿ ಸೇವಾ ಹಕ್ಕು ಟೆಂಡರ್, ಟೆಂಡರ್‌ಗಿಟ್ಟ ಮೊತ್ತ ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 0.50 ಲಕ್ಷಗಳು, ಟೆಂಡರ್‌ನ ಕಾಲಾವಧಿ 12 ತಿಂಗಳು, 3) ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ವ್ಯಾಪ್ತಿಯಲ್ಲಿ ದೇವರ ಛಾಯಚಿತ್ರ, ಭಕ್ತಿ ಧ್ವನಿಸುರಳಿ, ತೀರ್ಥಬಾಟಲಿ ಇತರೆ ವಸ್ತುಗಳ ಮಾರಾಟ ಮಾಡುವ ಸೇವಾಹಕ್ಕು ಟೆಂಡರ್ ಟೆಂಡರ್‌ಗಿಟ್ಟ ಮೊತ್ತ ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 0.50 ಲಕ್ಷಗಳು, ಟೆಂಡರ್‌ನ ಕಾಲಾವಧಿ 12 ತಿಂಗಳು, 4) ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ವ್ಯಾಪ್ತಿಯಲ್ಲಿ ಕೊಬ್ಬರಿ ಕಲ್ಲುಸಕ್ಕರೆ ಪ್ರಸಾದ ಮಾರಾಟ ಮಾಡುವ ಸೇವಾಹಕ್ಕು ಟೆಂಡರ್, ಟೆಂಡರ್‌ಗಿಟ್ಟ ಮೊತ್ತ ರೂ.2.00 ಲಕ್ಷಗಳು, ಇಎಂಡಿ ಮೊತ್ತ ರೂ. 0.25 ಲಕ್ಷಗಳು, ಟೆಂಡರ್‌ನ ಕಾಲಾವಧಿ 12 ತಿಂಗಳು, 5)ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗ ನಾಥಸ್ವಾಮಿ ದೇವಾಲಯದ ವ್ಯಾಪ್ತಿಯಲ್ಲಿ ಹರಕೆ ಮುಡಿ ತೆಗೆಯುವ ಸೇವಾ ಹಕ್ಕು ಟೆಂಡರ್, ಟೆಂಡರ್‌ಗಿಟ್ಟ ಮೊತ್ತ ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 0.50 ಲಕ್ಷಗಳು, ಟೆಂಡರ್‌ನ ಕಾಲಾವಧಿ 12 ತಿಂಗಳು, ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು https//kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01.04.2026 ರ ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.04.2026 ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ, ಬಿಳಿಗಿರಿರಂಗನ ಬೆಟ್ಟ, ಚಾಮರಾಜನಗರ ಜಿಲ್ಲೆ, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಧಿಕಾರಿಗಳು
ಬಿಳಿಗಿರಿರಂಗನಾಥಸ್ವಾಮಿ ದೇವಾಲಯ, ಬಿಳಿಗಿರಿರಂಗನಬೆಟ್ಟ,
ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಸಂ:ವಾಸಾಸಂಇ:ಚಾನಗರ:805:2025–26




### 6ನೇ ವರ್ಷದ ಸವಿನೆನಪು



**ಸಿ. ಕೃಷ್ಣಪ್ಪ**
ಕಾಂಗ್ರೆಸ್ ಮುಖಂಡರು

ಪ್ರಕಟಣೆ: ಜಗ್ಗಿಗೌಡ ಟೀಮ್ ಮತ್ತು ಫ್ರೆಂಡ್ಸ್ ಕ್ರಿಕೆಟ್ ಕ್ಲಬ್(FCC) ದೇವರಾಜ ಮೊಹಲ್ಲಾ, ಮೈಸೂರು





KRIYA YOGA

PRAJNANA MISSION
ಪ್ರಜ್ಞಾನ ಮಿಷನ್ ಆಯೋಜಿಸುತ್ತಿದೆ

**ಕ್ರಿಯಾ ಯೋಗ ದೀಕ್ಷೆ**

ಮಹರ್ಷಿ ಪತಂಜಲಿ ಬೋಧಿಸಿದ ಕ್ರಿಯಾ ಯೋಗವು, ಉಸಿರಾಟ ತಂತ್ರಗಳು, ಮೆರುದಂಡದ ವ್ಯಾಯಾಮಗಳು ಮತ್ತು ಆಂತರಿಕ ಏಕಾಗ್ರತೆಯನ್ನು ಬಳಸಿಕೊಂಡು ದೇಹ, ಮನಸ್ಸು ಮತ್ತು ಆಂತರಿಕ ಸ್ಥಿತಿಯ ಪರಿವರ್ತನೆಗೆ ನೆರವಾಗುವ ಪ್ರಾಚೀನ ಧ್ಯಾನ ಪದ್ಧತಿಯಾಗಿದೆ

ಹೆಚ್ಚಿನ ಮಾಹಿತಿಗಾಗಿ : www.prajnanamission.org ಅನ್ನು ನೋಡಿ.

ಕಾರ್ಯಕ್ರಮದ ವೇಳಾಪಟ್ಟಿ
ಮಾರ್ಚ್ 27 – ಕ್ರಿಯಾ ಯೋಗದ ಕುರಿತು ಉಪನ್ಯಾಸ (6PM-8PM)
ಮಾರ್ಚ್ 28 – ಕ್ರಿಯಾ ಯೋಗ ದೀಕ್ಷೆ
ಮಾರ್ಚ್ 29 – ಅಭ್ಯಾಸ
27th March Talks entry free

ಶ್ರೀ ಶ್ರೀಶೃಂಗೇರಿ ಮಹಾಸಂಸ್ಥಾನ, ಅಗ್ರಹಾರ, ಮೈಸೂರು
ಸಂಪರ್ಕ: 93433-33766
ಮುರಳಿಧರ್- 98453-59518
Initiation fee Rs.2500/-

### ಮೈಸೂರು ಮಿತ್ರ
**ವಾರ್ಷಿಕೋತ್ಸವ ವಿಶೇಷ ಸಂಚಿಕೆ**

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

**ಪ್ರಧಾನ ಕಛೇರಿ**
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ತೋಮಸ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

| | | |
|---|---|---|
| **ಕೊಡಗು**<br>ಪ್ರಸಾದ್<br>ಪೂಜಾ ಆರ್ಕೆಡ್,<br>ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ<br>9731469871 | **ಮಂಡ್ಯ**<br>ಕೆ. ಮೋಹನ್‌ರಾಜ್<br>8762960325 | **ಶ್ರೀರಂಗಪಟ್ಟಣ**<br>ವಿನಯ್ ಕಾರೇಕುರ<br>ಶ್ರೀರಂಗಪಟ್ಟಣ<br>9686893234 |
| **ಹುಣಸೂರು**<br>ಕೆ. ಕೃಷ್ಣ (ಕಿ.ಕೆ.)<br>EWS 204, KHB ಕಾಲೋನಿ,<br>ಹುಣಸೂರು.<br>9448720626 | **ಚಾಮರಾಜನಗರ**<br>ಸಿದ್ದಲಿಂಗಸ್ವಾಮಿ<br>ಸಿ.ಹೆಚ್.ಆರ್. ಕಾಂಪ್ಲೆಕ್ಸ್,<br>ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ<br>9242265657 | **ಟಿ. ನರಸೀಪುರ**<br>ಕುಮಾರ್<br>ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ.<br>9986719590 |
| **ಗುಂಡ್ಲುಪೇಟೆ**<br>ಸೋಮಶೇಖರ್<br>ದ.ರಾ. ಬೇಂದ್ರೆ ನಗರ,<br>ತಿಪ್ಪಿನಿ ಲೇಔಟ್,ಗುಂಡ್ಲುಪೇಟೆ.<br>9845995426 | **ಕೆ.ಆರ್. ನಗರ**<br>ಮಂಜುನಾಥ<br>ವಾರ್ಡ್ ನಂ.17, ಕನಕನಗರ Extn.<br>ಮುಳ್ಳೂರು ರಸ್ತೆ, ಕೆ.ಆರ್.ಟೌನ್<br>9483084345 | **ಮಳವಳ್ಳಿ**<br>ಸರಸ್ವತಿ. ಬಿ<br>ನಂ.47, 1ನೇ ಕ್ರಾಸ್, ಎನ್.ಇ.ಎಸ್<br>ಮಳವಳ್ಳಿ ಟೌನ್–571430<br>9632407806 |
| **ಹಾಸನ**<br>ಆರ್.ಎನ್.ಸೋಮೇಶ್‌ಗೌಡ<br>ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ,<br>ವಿಜಯನಗರ, 1ನೇ ಹಂತ, 2ನೇ ಕ್ರಾಸ್,<br>ಹಾಸನ. 7019311935 | **ಕುಶಾಲನಗರ**<br>ರಘು<br>ಮೈಸೂರು ಮಿತ್ರ ರಿಪೋರ್ಟರ್<br>ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ<br>9845698401 | **ಜಯಪುರ**<br>ಬಿಳಿಗಿರಿ<br>ಜಯಪುರ<br>9945479288 |
| **ಪಿರಿಯಾಪಟ್ಟಣ**<br>ವಿರೇಶ್<br>ಪಿರಿಯಾಪಟ್ಟಣ<br>8660057128 | **ವಿರಾಜಪೇಟೆ**<br>ಮಂಜುನಾಥ<br>ವಿರಾಜಪೇಟೆ<br>9900949363 | **ಯಳಂದೂರು**<br>ಬಿ.ನಾಗರಾಜು<br>ಮೈತ್ರಿ ಮೆಡಿಕಲ್<br>ಬಳೆಪೇಟೆ, ಯಳಂದೂರು<br>9844349191 |
| **ಕೆ.ಆರ್.ಪೇಟೆ**<br>(ಶ್ರೀನಿವಾಸ)<br>ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ<br>9449326847, 7022757438 | **ಹೆಚ್.ಡಿ.ಕೋಟೆ**<br>ಮಂಜುನಾಥ ಎಸ್.<br>ಹೆಚ್.ಡಿ.ಕೋಟೆ<br>9483574452 | **ಕೆ.ಎಂ.ದೊಡ್ಡಿ**<br>ಸತೀಶ್ ಎ.ಎಲ್<br>ಕೆ.ಎಂ.ದೊಡ್ಡಿ<br>9242120338 |
| **ನಂಜನಗೂಡು**<br>ರಘು<br>ರಘು ಫೋಟೋ ವರ್ಲ್ಡ್<br>ಹುಣಸೂರು<br>9845590889 | **ನಂಜನಗೂಡು**<br>ರಂಗಸ್ವಾಮಿ<br>ನಂ.4563, ಕಪಿಲ ಕಾಲೋನಿ<br>ಹಿಂಭಾಗ, ನೀಲಕಂಠ ನಗರ,<br>ನಂಜನಗೂಡು ಟೌನ್–571301<br>9901602226 | **ಕೊಳ್ಳೇಗಾಲ**<br>ನಾಗೇಂದ್ರ ಸ್ವಾಮಿ<br>ನಂ.7ಎ, 684, 14 ನೇ ಕ್ರಾಸ್,<br>ಬಸವೇಶ್ವರ ನಗರ, ಕೊಳ್ಳೇಗಾಲ<br>9448576247, 7899849868 |